ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 29 ಮಂಗಳವಾರ 2024

ಸಂಪುಟ: 45 | ಸಂಚಿಕೆ: 193 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹೊಸ ಪ್ರವಾಸೋದ್ಯಮ ನೀತಿಗೆ ಸಚಿವ ಸಂಪುಟ ಅನುಮೋದನೆ

1,500 ಕೋಟಿ ರೂ. ಹೂಡಿಕೆ ನಿರೀಕ್ಷೆ



ಎಚ್.ಕೆ.ಪಾಟೀಲ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸೋಮವಾರ ನಡೆದ ಸಚಿವ ಸಂಪುಟ ಸಭೆ ಹೊಸ ಪ್ರವಾಸೋದ್ಯಮ ನೀತಿಗೆ ಅನುಮೋದನೆ ನೀಡಿದ್ದು, ರಾಜ್ಯ ಸರ್ಕಾರ ಈ ಕ್ಷೇತ್ರದಲ್ಲಿ 1,500 ಕೋಟಿ ರೂಪಾಯಿ ಹೂಡಿಕೆ ಮೇಲೆ ಕಣ್ಣಿಟ್ಟಿದೆ. ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಪ್ರವಾಸೋದ್ಯಮ ಹಾಗೂ ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು, ಕರ್ನಾಟಕವು ವರ್ಷಕ್ಕೆ 20 ಲಕ್ಷ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ಮೂಲಕ ಅಗ್ರ ಐದು ರಾಜ್ಯಗಳಲ್ಲಿ ಸೇರಲು ಯೋಜಿಸಿದೆ ಮತ್ತು 48 ಕೋಟಿ ■ 6ನೇ ಪುಟಕ್ಕೆ

ದಂತ ವೈದ್ಯಕೀಯ, ಆಯುಷ್ ಫಲಿತಾಂಶ ಪ್ರಕಟ

ಬೆಂಗಳೂರು, ಅ. 28–ದಂತ ವೈದ್ಯಕೀಯ ಹಾಗೂ ಆಯುಷ್ ಕೋರ್ಸ್‌ಗಳ ಮಾಪ್‌ಅಪ್ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಶುಲ್ಕ ಪಾವತಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಕಾಲೇಜಿಗೆ ವರದಿ ಮಾಡಿಕೊಳ್ಳಲು ಅ. 30 ರವರೆಗೆ ಅವಕಾಶ ನೀಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ವೈದ್ಯಕೀಯ ಅವಧಿ ವಿಸ್ತರಣೆ: ವೈದ್ಯಕೀಯ ಕೋರ್ಸ್‌ನ 'ಸ್ಟ್ರೇ ವೇಕೆನ್ಸಿ' ಸುತ್ತಿನಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆಪ್ಷನ್ ದಾಖಲಿಸಲು ಅ. 29ರ ಬೆಳಗ್ಗೆ 10ರವರೆಗೆ ಅವಕಾಶ ನೀಡಲಾಗಿದೆ.

ಒಳಮೀಸಲಾತಿ ಜಾರಿಗೆ ಸಂಪುಟ ಸಭೆ ತೀರ್ಮಾನ

ಸುಪ್ರೀಂಕೋರ್ಟ್ ತೀರ್ಪು ಆಧರಿಸಿ ಒಳಮೀಸಲಾತಿ ಕಲ್ಪಿಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚನೆ; ಮೂರು ತಿಂಗಳಲ್ಲಿ ವರದಿ ನೀಡಲಿದೆ; ಅಲ್ಲಿವರೆಗೆ ಎಲ್ಲಾ ಸರ್ಕಾರಿ ನೇಮಕಾತಿ ಸ್ಥಗಿತ





ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಸದಸ್ಯರೊಂದಿಗೆ ಸಭೆ ನಡೆಸಿದರು.

ಬೆಂಗಳೂರು, ಅ.28(ಕೆಎಂಶಿ)–ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ಮಹತ್ವದ ತೀರ್ಮಾನ ಕೈಗೊಂಡಿದೆ.

ಒಳಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಆಧಾರದ ಮೇಲೆ ಒಳಮೀಸಲಾತಿ ಕಲ್ಪಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಆಯೋಗ ರಚನೆಗೆ ಸಮ್ಮತಿಸಿದೆ. ನ್ಯಾಯಮೂರ್ತಿ ಸದಾಶಿವ ನೇತೃತ್ವದ ಆಯೋಗ ನೀಡಿರುವ ವರದಿಯಲ್ಲಿ ಗೊಂದಲ ಇರುವುದರಿಂದ ಆ ವರದಿಯನ್ನು ಬದಿಗಿರಿಸಿ, ಸುಪ್ರೀಂ ಕೋರ್ಟ್ ತೀರ್ಪು ಹಾಗೂ ಸಂವಿಧಾನದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜನಸಂಖ್ಯೆ ಆಧಾರದ ಮೇಲೆ ಮಾದಿಗ, ಛಲವಾದಿ, ಲಂಬಾಣಿ ಹಾಗೂ ಬೋವಿ ಸಮಾಜಕ್ಕೆ ಮೀಸಲಾತಿ ಕಲ್ಪಿಸಲು ಸಂಪುಟ ತೀರ್ಮಾನಿಸಿದೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಮಾತನಾಡಿ, ರಚನೆಗೊಳ್ಳುತ್ತಿರುವ ಆಯೋಗ ಮೂರು ತಿಂಗಳಲ್ಲಿ ವರದಿ ನೀಡಲಿದೆ ವರದಿ ನಂತರ ಮೀಸಲಾತಿ ಪ್ರಮಾಣ ನಿಗದಿಯಾಗಲಿದೆ. ಅಲ್ಲಿಯವರೆಗೂ ಸರ್ಕಾರಿ ನೇಮಕಾತಿಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಜನಗಣತಿ ಸೇರಿದಂತೆ ವಿವಿಧ ಬಗೆಯ ದತ್ತಾಂಶಗಳನ್ನು ಆಧಾರವಾಗಿ ಇಟ್ಟುಕೊಂಡು ಆಯೋಗ ಮೀಸಲಾತಿ ಕಲ್ಪಿಸಲಿದೆ. ದಲಿತ ಸಮುದಾಯದಲ್ಲಿ ಒಳಮೀಸಲಾತಿ ಕಲ್ಪಿಸಲು ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದೇವೆ, ಸಂಪುಟಕ್ಕೆ ತರುವ ಮುನ್ನ ಎಡಗೈ–ಬಲಗೈ, ಲಂಬಾಣಿ ಹಾಗೂ ಬೋವಿ ಸಮುದಾಯದ ಮುಖಂಡರು, ಸಚಿವರು, ಶಾಸಕರು ಸಭೆ ಸೇರಿ ತೀರ್ಮಾನ ಕೈಗೊಂಡು ಎಲ್ಲರಿಗೂ ಮೀಸಲಾತಿ ಕಲ್ಪಿಸುವ ತೀರ್ಮಾನ ಕೈಗೊಂಡಿದ್ದೆವು. ■ 6ನೇ ಪುಟಕ್ಕೆ

ಹಾಸನ ನಗರಸಭೆ ಪಾಲಿಕೆಯಾಗಿ ಮೇಲ್ದರ್ಜೆಗೆ

- 7,045 ವೈದ್ಯಾಧಿಕಾರಿಗಳ ಸೇವೆ ಮುಂದುವರಿಕೆ
- ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ವಿಧಾನಮಂಡಲ ಅಧಿವೇಶನ
- ವರುಣಾದಲ್ಲಿ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆ



ಬೆಂಗಳೂರು, ಅ.28(ಕೆಎಂಶಿ)–ಡಿಸೆಂಬರ್ ಎರಡನೇ ಇಲ್ಲವೇ ಮೂರನೇ ವಾರದಲ್ಲಿ ವಿಧಾನಮಂಡಲದ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ನಿರ್ಧರಿಸಿರುವ ರಾಜ್ಯ ಸಚಿವ ಸಂಪುಟ, ಹಾಸನ ನಗರಸಭೆಯನ್ನು ಪಾಲಿಕೆಯನ್ನಾಗಿಯೂ ಹಾಗೂ 7,045 ವೈದ್ಯಾಧಿಕಾರಿಗಳ ಸೇವೆ ಮುಂದುವರೆಸುವ ತೀರ್ಮಾನ ಕೈಗೊಂಡಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಚಳಿಗಾಲದ ಅಧಿವೇಶನವನ್ನು ಯಾವ ದಿನದಿಂದ ಪ್ರಾರಂಭಿಸಬೇಕು ಎಂಬುದನ್ನು ತೀರ್ಮಾನಿಸಲು ಮುಖ್ಯಮಂತ್ರಿ ಅವರ ನಿರ್ಧಾರಕ್ಕೆ ಬಿಡಲಾಗಿದೆ ಎಂದರು. ಮಂಡ್ಯದಲ್ಲಿ ಜರುಗಲಿರುವ ಕನ್ನಡ ಸಾಹಿತ್ಯ ಪರಿಷತ್ ಅಧಿವೇಶನ ಹಾಗೂ ಎಐಸಿಸಿ ಅಧಿವೇಶನದ ಸಮಯಗಳನ್ನು ನೋಡಿಕೊಂಡು ದಿನಾಂಕ ನಿಗದಿಯಾಗಲಿದೆ. ಹಾಸನದ ಜನಸಂಖ್ಯೆ ಮತ್ತು ಸ್ಥಳೀಯ ಸಂಸ್ಥೆಯ ಆರ್ಥಿಕ ವಹಿವಾಟನ್ನು ಗಮನದಲ್ಲಿಟ್ಟುಕೊಂಡು ನಗರಸಭೆಯನ್ನು ಪಾಲಿಕೆಯನ್ನಾಗಿ ಉನ್ನತೀಕರಿಸಲು ಸಭೆ ಇದೇ ಸಂದರ್ಭದಲ್ಲಿ ಒಪ್ಪಿಗೆ ನೀಡಿದೆ ಎಂದರು.

ವೈದ್ಯಾಧಿಕಾರಿಗಳ ಮುಂದುವರಿಕೆ: ರಾಷ್ಟ್ರೀಯ ಆರೋಗ್ಯ ■ 6ನೇ ಪುಟಕ್ಕೆ

ಕೇಂದ್ರದಿಂದ 2025ಕ್ಕೆ ಜನಗಣತಿ ಸಾಧ್ಯತೆ; 2028ಕ್ಕೆ ಲೋಕಸಭೆಯ ಡಿಲಿಮಿಟೇಶನ್ ಗುರಿ

ನವದೆಹಲಿ: ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ 2025ಕ್ಕೆ ಜನಗಣತಿ ನಡೆಸುವ ಸಾಧ್ಯತೆ ಇದ್ದು 2026 ಕ್ಕೆ ಮುಕ್ತಾಯಗೊಳಿಸುವ ಗುರಿ ಹೊಂದಿದೆ.

ಜನಗಣತಿಯ ಬಳಿಕ ರಾಷ್ಟ್ರವ್ಯಾಪಿ ಲೋಕಸಭಾ ಕ್ಷೇತ್ರಗಳ ಡಿಲಿಮಿಟೇಶನ್ ಪ್ರಕ್ರಿಯೆ ನಡೆಸಲು ಉದ್ದೇಶಿಸಲಾಗಿದ್ದು, 2028ರ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

2025ರಲ್ಲಿ ಜಾತಿ ಗಣತಿಯನ್ನು ಹೊರತುಪಡಿಸಿ ಜನಗಣತಿಯನ್ನು ಪ್ರಾರಂಭಿಸಲು ಸಿದ್ಧತೆಗಳು ನಡೆಯುತ್ತಿವೆ ಎಂದು ಸರ್ಕಾರದ ಮೂಲವೊಂದು ತಿಳಿಸಿದೆ. ಇದು ಬಿಹಾರ ಮತ್ತು ಇತರ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆಗೆ ಮುಂಚಿತವಾಗಿ ವಿರೋಧ ಪಕ್ಷಗಳು ಜಾತಿಗಣತಿ, ಜನಗಣತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಎತ್ತುವುದಕ್ಕೆ ಅವಕಾಶ ನೀಡದ ಗುರಿಯನ್ನು ಹೊಂದಿದೆ ಎಂದು ವಿಶ್ಲೇಷಿಸಲಾಗುತ್ತಿದೆ. 2021ರಲ್ಲಿ ಜನಗಣತಿಯನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಮುಡಾ ನಿವೇಶನ ಹಂಚಿಕೆ ಹಗರಣ

ಇಡಿ ಬೇಟೆ

ಪ್ರಭಾವಿ ಸಚಿವರ ಪರಮಾಪ್ತ ಬಿಲ್ಡರ್ ಮಂಜುನಾಥ್; ಮುಡಾ ಮಾಜಿ ಆಯುಕ್ತರಾದ ನಟೇಶ್, ದಿನೇಶ್‌ಕುಮಾರ್ ಮನೆಗಳ ಮೇಲೆ ಸತತ 14 ಗಂಟೆ ಕಾಲ ಶೋಧನೆ; ಹಲವು ದಾಖಲೆ ವಶಕ್ಕೆ ಪಡೆದ ಇಡಿ ಅಧಿಕಾರಿಗಳು



ನಟೇಶ್



ದಿನೇಶ್‌ಕುಮಾರ್





ಬೆಂಗಳೂರು,ಅ.28(ಕೆಎಂಶಿ, ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಶೇ. 50:50ರ ಅನುಪಾತದಡಿ ಅಕ್ರಮವಾಗಿ ಹಂಚಿಕೆಯಾದ ನಿವೇಶನಗಳ ಸಂಬಂಧ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಬೆನ್ನು ಬಿದ್ದಿರುವ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಸೋಮವಾರ ಮೈಸೂರು, ಬೆಂಗಳೂರು, ಮಂಡ್ಯದ 9 ಕಡೆ ಏಕಕಾಲಕ್ಕೆ ದಾಳಿ ನಡೆಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತನ ಮನೆ, ಪ್ರಭಾವಿ ಸಚಿವರು ಮತ್ತು ಹಿರಿಯ ರಾಜಕೀಯ ಮುಖಂಡರ ಆಪ್ತನಾಗಿರುವ ಬಿಲ್ಡರ್ ನಿವಾಸಗಳು ಹಾಗೂ ಕಚೇರಿಗಳು, ಮುಡಾದ ಹಿಂದಿನ ಇಬ್ಬರು ಆಯುಕ್ತರ ಮನೆಗಳ ಮೇಲೆ ಇಂದು ಮುಂಜಾನೆಯೇ ಇಡಿ ಅಧಿಕಾರಿಗಳ ತಂಡ ದಾಳಿ ಇಟ್ಟಿದೆ. ದಾಳಿ ವೇಳೆ ಹಲವಾರು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ 14 ನಿವೇಶನ ಮಂಜೂರಾಗಿರುವ ಪ್ರಕರಣ ಮಾತ್ರವಲ್ಲದೇ, ಶೇ. 50:50ರ ಅನುಪಾತದಡಿ ಸುಮಾರು 5 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮೇಲ್ನೋಟಕ್ಕೆ ದೊರೆತಿದ್ದ ಸಾಕ್ಷ್ಯಾಧಾರಗಳನ್ನು ಆಧರಿಸಿ ಇಡಿ ಅಧಿಕಾರಿಗಳು ಈ ಪ್ರಕರಣದ ಸಂಪೂರ್ಣ ತನಿಖೆಗೆ ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಲ್ಡರ್ ಮಂಜುನಾಥ್: ಮೈಸೂರು, ಬೆಂಗಳೂರು, ಮಂಡ್ಯ ಮುಂತಾದೆಡೆ ದೊಡ್ಡ ಮಟ್ಟದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿರುವ ಬಿಲ್ಡರ್ ಮಂಜುನಾಥ್ ಅವರು ■ 6ನೇ ಪುಟಕ್ಕೆ

ಸಿದ್ದರಾಮಯ್ಯ ಆಪ್ತ ರಾಕೇಶ್ ಪಾಪಣ್ಣ ಮನೆ ಮೇಲೂ ಇಡಿ ದಾಳಿ



ರಾಕೇಶ್ ಪಾಪಣ್ಣ

ಮೈಸೂರು, ಅ. 28(ಆರ್‌ಕೆ)–ಮುಡಾ ನಿವೇಶನ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರೂ ಆದ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರ ಹಿನಕಲ್ ಮನೆ ಮೇಲೂ ಇಡಿ (ಜಾರಿ ನಿರ್ದೇಶನಾಲಯ) ಅಧಿಕಾರಿಗಳು ಇಂದು ದಾಳಿ ಮಾಡಿದ್ದಾರೆ.



ಮೈಸೂರಿನ ಹಿನಕಲ್ ಚರ್ಚ್ ಸಮೀಪವಿರುವ ರಾಕೇಶ್ ಪಾಪಣ್ಣ ಅವರ ನಿವಾಸ.


ಮೈಸೂರು, ಮಂಡ್ಯ ಹಾಗೂ ಬೆಂಗಳೂರಲ್ಲಿ ಬೆಳಗ್ಗೆಯಿಂದಲೇ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಹಿನಕಲ್ ಸರ್ವೆ ನಂಬರ್‌ಗೆ ಸೇರಿದ ಭೂಮಿಗೆ ಪರ್ಯಾಯವಾಗಿ ವಿಜಯನಗರ 2, 3 ಮತ್ತು 4ನೇ ಹಂತದಲ್ಲಿ ಶೇ. 50:50ರ ಅನುಪಾತ ಹಾಗೂ ಪ್ರೋತ್ಸಾಹದಾಯಕ ಯೋಜನೆಯಡಿ ಅಕ್ರಮವಾಗಿ ಮುಡಾದಿಂದ 20ಕ್ಕೂ ಹೆಚ್ಚು ನಿವೇಶನಗಳನ್ನು ಮಂಜೂರು ಮಾಡಿಸಿಕೊಂಡಿದ್ದಾರೆಂಬ ದೂರಿನ ಮೇರೆಗೆ ಮೈಸೂರಿನ ಹಿನಕಲ್ ಗ್ರಾಮದ ಚರ್ಚ್ ಸಮೀಪವಿರುವ ಹಿನಕಲ್ ಪಾಪಣ್ಣ ಅವರ ಮಗ ರಾಕೇಶ್ ಪಾಪಣ್ಣ ನಿವಾಸದ ಮೇಲೆ ಮಧ್ಯಾಹ್ನ ದಿಢೀರ್ ದಾಳಿ ನಡೆಸಿದರು. ತಮ್ಮ 10 ಗುಂಟೆ ಜಾಗವನ್ನು ಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ವಿಜಯನಗರ 3ನೇ ಹಂತದಲ್ಲಿ ವಸತಿ ಬಡಾವಣೆ ನಿರ್ಮಿಸಲು ಈ ಹಿಂದೆ ಬಳಸಿಕೊಂಡಿರುವುದಕ್ಕೆ ಪರಿಹಾರವಾಗಿ ಶೇ. 50:50ರ ಅನುಪಾತದಡಿ 50x80 ಅಡಿ ಅಳತೆಯ ನಿವೇಶನವನ್ನು ಈ ಹಿಂದಿನ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಅವಧಿಯಲ್ಲಿ ಕಾನೂನು ಉಲ್ಲಂಘಿಸಿ ರಾಕೇಶ್ ಪಾಪಣ್ಣ ಮಂಜೂರು ಮಾಡಿಸಿಕೊಂಡಿದ್ದಾರೆ ಎಂಬುದು ಮುಡಾ ಕಚೇರಿ ಮೇಲೆ ದಾಳಿ ಮಾಡಿದಾಗ ಬೆಳಕಿಗೆ ಬಂದಿತ್ತು. ಇಂದು ಬೆಳಗ್ಗೆ 7 ಗಂಟೆ ಸುಮಾರಿನಲ್ಲಿ ಹಿನಕಲ್ ನಿವಾಸದ ಮೇಲೆ ದಾಳಿ ನಡೆಸಿದಾಗ ■ 6ನೇ ಪುಟಕ್ಕೆ

ಚಿನ್ನ, ಬೆಳ್ಳಿ ಸೇರಿನಲ್ಲಿ ಅಳೆಯುತ್ತಿದ್ದ ವಿಜಯನಗರ ಸಾಮ್ರಾಜ್ಯದಂತೆ ಸಿದ್ದರಾಮಯ್ಯ ಆಡಳಿತದಲ್ಲಿ

ಒಂದು ಸಾವಿರಕ್ಕೆ ಒಂದೂವರೆ ಕೋಟಿ ಮೌಲ್ಯದ ಮುಡಾ ನಿವೇಶನ ಬಳುವಳಿ

ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗೇಲಿ

- ಸಿದ್ದರಾಮಯ್ಯ ದುಡ್ಡು, ಭೈರತಿ ಸುರೇಶ್ ಹೆಸರಲ್ಲಿ ಆಸ್ತಿ
- ಮುಖ್ಯಮಂತ್ರಿಯ ಹಳೇ ಕಥೆ ಇಷ್ಟರಲ್ಲೇ ಬಯಲಾಗುತ್ತೆ
- ಲೋಕಾಯುಕ್ತರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವೇ ಇಲ್ಲ
- ಜಿಪಿಎ ಆಧಾರಿತ ನಿವೇಶನ ನೋಂದಣಿ ರದ್ದು ಮಾಡಬೇಕು



ಪತ್ರಿಕಾಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್

ಮೈಸೂರು, ಅ.28(ಬಿಎಲ್‌ಯು)– ಚಿನ್ನ, ಬೆಳ್ಳಿಯನ್ನು ಸೇರಿನಲ್ಲಿ ಅಳೆಯುತ್ತಿದ್ದ ವಿಜಯನಗರ ಸಾಮ್ರಾಜ್ಯದಂತೆ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತವಿದ್ದು, ಒಂದು ಸಾವಿರ ರೂಪಾಯಿಗೆ ಒಂದೂವರೆ ಕೋಟಿ ರೂಪಾಯಿ ಬೆಲೆ ಬಾಳುವ ಮುಡಾ ನಿವೇಶನ ದೊರೆಯುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗೇಲಿ ಮಾಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೂ ಇದೇ ರೀತಿಯಲ್ಲಿ ನಿವೇಶನ ಮಂಜೂರು ಮಾಡಲಾಗಿದೆ ಎಂದು ಆರೋಪಿಸಿದರು.

ಮುಡಾದಲ್ಲಿ ನಿವೇಶನ ಮಂಜೂರಾತಿಯ 14,842 ಸೆಕ್ಯೂರಿಟಿ ಬಾಂಡ್ ಮುದ್ರಣಗೊಂಡಿದೆ. ಇದರಲ್ಲಿ ಮೂಲೆ ನಿವೇಶನ ಸೇರಿದಂತೆ ಇತರೆ ನಿವೇಶನಗಳಿಗೆ ಎರಡು ಸಾವಿರ ಬಾಂಡ್ ಬಳಕೆಯಾದರೆ, ಉಳಿದ 12,842 ಸೆಕ್ಯೂರಿಟಿ ಬಾಂಡ್ ಲೆಕ್ಕವಿಲ್ಲ ಎಂದು ವಿಶ್ವನಾಥ್ ಪ್ರಶ್ನಿಸಿದರು. ಇಷ್ಟೆಲ್ಲಾ ಹಗರಣ ನಡೆದಿದ್ದರೂ ಏನೂ ನಡೆದೇ ಇಲ್ಲ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಳ್ಳುತ್ತಾರೆ. ಮುಡಾ ಮುಂದೆ ಪೆಂಡಾಲ್ ಹಾಕಿ ನಾನು ನೀವು ಕೂರೋಣ. ಏನೇನು ಹಗರಣ ನಡೆದಿದೆ ಎಂದು ನಾನು ದಾಖಲಾತಿ ಸಮೇತ ಬಹಿರಂಗ ಮಾಡುತ್ತೇನೆ. ಏನೂ ನಡೆದೇ ಇಲ್ಲ ಎಂದಾದರೆ ನೀವು ಅದನ್ನು ಸಾಬೀತು ಮಾಡುತ್ತೀರಾ ಎಂದು ಸಿದ್ದರಾಮಯ್ಯಗೆ ವಿಶ್ವನಾಥ್ ಬಹಿರಂಗ ಚರ್ಚೆಗೆ ಸವಾಲು ಹಾಕಿದರು.

ಯಾವುದೇ ಹಗರಣ ನಡೆದಿಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಆದರೆ ಹೈಕೋರ್ಟ್ ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ತೀರ್ಪು ಸಿದ್ದರಾಮಯ್ಯ ವಿರುದ್ಧವಾಗಿದೆ. ಯಾವುದೇ ಅವ್ಯವಹಾರ ನಡೆದಿಲ್ಲ ಎನ್ನುವುದಾದರೆ ಲೋಕಾಯುಕ್ತ ಮತ್ತು ಇಡಿ ಏಕೆ ತನಿಖೆ ಮಾಡುತ್ತಿತ್ತು ಎಂದು ಪ್ರಶ್ನಿಸಿದರು.

ಬೆಂಗಳೂರಿನಲ್ಲಿರುವ ಪಬ್ ಸಿದ್ದರಾಮಯ್ಯ ಕುಟುಂಬದ ಆಸ್ತಿಯಲ್ಲ ಎಂಬ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸ್ಪಷ್ಟನೆಗೆ ಪ್ರತಿಕ್ರಿಯೆ ನೀಡಿದ ವಿಶ್ವನಾಥ್, ಹೌದು, ಸಿದ್ದರಾಮಯ್ಯನ ದುಡ್ಡು, ಭೈರತಿ ಸುರೇಶ್ ಹೆಸರಿನ ಆಸ್ತಿ ಎಂದು ಆಪಾದಿಸಿದರು.

ಸಿದ್ದರಾಮಯ್ಯ ಅವರ ಹಳೆ ಕಥೆಗಳೆಲ್ಲಾ ಒಂದೊಂದಾಗಿ ಬಯಲಾಗುತ್ತವೆ ನೋಡುತ್ತಿರಿ ಎಂದು ಹೇಳಿದ ವಿಶ್ವನಾಥ್, ಆ ಕಥೆಗಳು ಯಾವುವು ಎಂದು ಕಾಲ ಬಂದಾಗ ಎಲ್ಲರಿಗೂ ತಿಳಿಯುತ್ತದೆ ಎಂದು ಕುತೂಹಲದ ನುಡಿಗಳನ್ನಾಡಿದರು. ಮುಡಾದ ಶೇಕಡ 50:50 ಹಗರಣಕ್ಕೆ ಸಂಬಂಧಿಸಿದಂತೆ ಬಿಲ್ಡರ್ ಮಂಜುನಾಥ್ ಮನೆ ಮೇಲೆ ಇಡಿ ದಾಳಿ ಮಾಡಿರುವುದಕ್ಕೆ ಪ್ರತಿಕ್ರಿಯೆ ನೀಡಿದ ವಿಶ್ವನಾಥ್, ಮಂಜುನಾಥ್ ಶಾಸಕ ಜಿ.ಟಿ.ದೇವೇಗೌಡರ ಪರಮಾಪ್ತ. ಬಹಳಷ್ಟು ರಾಜಕೀಯ ನಾಯಕರ ಜೊತೆ ಈತನಿಗೆ ನಂಟು ಇದೆ. ಬೆಂಗಳೂರಿನಲ್ಲಿ ಬಹಳಷ್ಟು ಜನರಿಗೆ ಟೋಪಿ ಹಾಕಿರುವ ಈತ ಮೈಸೂರಿನಲ್ಲೂ ಕರಾಮತ್ತು ತೋರಿಸಿದ್ದಾನೆ ಎಂದು ಆಪಾದಿಸಿದರು. ಲೋಕಾಯುಕ್ತರಿಂದ ನಿಷ್ಪಕ್ಷಪಾತ ತನಿಖೆಯಾಗುತ್ತಿಲ್ಲ. ತಮ್ಮ ಸಂಸ್ಥೆಯ ಬಾಗಿಲು ಹಾಕಿಸಿದ ಸಿದ್ದರಾಮಯ್ಯ ಪರವಾಗಿ ಲೋಕಾಯುಕ್ತ ಅಧಿಕಾರಿಗಳು ಇದ್ದಾರೆ. ಇದರಿಂದ ಲೋಕಾಯುಕ್ತರಿಂದ ಯಾವುದೇ ಪ್ರಾಮಾಣಿಕ ತನಿಖೆ ನಿರೀಕ್ಷೆ ಅಸಾಧ್ಯ. ಆದ ಕಾರಣ ಮುಡಾ ಹಗರಣದ ಬಗ್ಗೆ ಸಿಬಿಐ ತನಿಖೆ ನಡೆಯಬೇಕು. ಜೊತೆಗೆ ಜಿಪಿಎ ಆಧಾರಿತ ಮುಡಾ ನಿವೇಶನಗಳ ನೋಂದಣಿಯನ್ನು ರದ್ದು ಮಾಡಬೇಕು ಎಂದು ವಿಶ್ವನಾಥ್ ಆಗ್ರಹಿಸಿದರು.

ಮೆಗಾ ಸಿಟಿ ಹಗರಣವೇ ಯೋಗೇಶ್ವರ್ ಸೋಲಿಗೆ ಕುತ್ತು

ಮೆಗಾ ಸಿಟಿ ಹೆಸರಿನಲ್ಲಿ ನಿವೇಶನದಾರರಿಗೆ ವಂಚಿಸಿದ ಕೋಟ್ಯಾಂತರ ರೂಪಾಯಿ ಬ್ರಹ್ಮಾಂಡ ಭ್ರಷ್ಟಾಚಾರ ಯೋಗೇಶ್ವರ್ ಸೋಲಿಗೆ ಕಾರಣವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಭವಿಷ್ಯ ನುಡಿದರು. ಮೆಗಾ ಸಿಟಿಯಲ್ಲಿ ನಿವೇಶನ ಕೊಡುವುದಾಗಿ ಯೋಗೇಶ್ವರ್ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದ್ದಾರೆ. ಈಗ ನಿವೇಶನ ವಂಚಿತರೆಲ್ಲಾ ಸಭೆ ಸೇರಿ ಇವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದರು. ಮುಡಾ ಹಾಗೂ ವಾಲ್ಮೀಕಿ ಹಗರಣ ಕಾರ್ಮೋಡದಿಂದ ಕಾಂಗ್ರೆಸ್ ಸೋಲು ಅನುಭವಿಸುತ್ತದೆ. ಇದರಿಂದ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವನಾಥ್ ವಿಶ್ವಾಸ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಆಡಳಿತದಲ್ಲಿ 170 ಇದ್ದ ಬಿಯರ್ ಬೆಲೆ 270 ಆಗಿದೆ

ಗ್ಯಾರಂಟಿ ಯೋಜನೆಗೆ ಹಣ ಸರಿದೂಗಿಸಲು ಹೆಣಗಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲಾ ವಸ್ತುಗಳ ಬೆಲೆ ಹೆಚ್ಚಳ ಮಾಡಿದ್ದು, 170 ರೂಪಾಯಿ ಇದ್ದ ಬಿಯರ್ ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ 270 ರೂಪಾಯಿ ಆಗಿದೆ ಎಂದು ಆರೋಪಿಸಿದರು. ಮನೋರಂಜನೆಗಾಗಿ ಕುಡಿಯಲು ಹೋದರೆ, ಈಗ ಅದರ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಗ್ಯಾರಂಟಿ ಯೋಜನೆಗೆ ವಸ್ತುಗಳ ಬೆಲೆ ಹೆಚ್ಚಳ ಮಾಡಿರುವುದೇ ಇವರ ಸಾಧನೆ ಎಂದು ಲೇವಡಿ ಮಾಡಿದರು.

ಮಾತೆತ್ತಿದರೆ ಅಕ್ಕಿ ಕೊಟ್ಟೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ದೇವರಾಜ ಅರಸ್ ಅಕ್ಕಿ ಬೆಳೆಯುವ ಭೂಮಿಯನ್ನೇ ಕೊಟ್ಟಿದ್ದಾರೆ. ಹೀಗಿರುವಾಗ ಸಿದ್ದರಾಮಯ್ಯ ಕಾರ್ಯಕ್ರಮಗಳು ದೊಡ್ಡದ್ದಲ್ಲ ಟೀಕಿಸಿದರು. ಗ್ಯಾರಂಟಿ ಅನುಷ್ಠಾನ ಸಮಿತಿ ರಚನೆ ಮಾಡಿ ಎಲ್ಲರಿಗೂ ಒಂದೊಂದು ಐಷಾರಾಮಿ ಕಾರು ಕೊಟ್ಟಿದ್ದಾರೆ. ಈ ಮೂಲಕ ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಜಾತಿ ಗಣತಿ ವರದಿ ಬಿಡುಗಡೆ ಮಾಡುತ್ತೇನೆ ಎಂದು ಬೊಗಳೆ ಬಿಡುತ್ತಾರೆ. ತಾಕತ್ತು ಇದ್ದರೆ ಬಿಡುಗಡೆ ಮಾಡಲಿ ಎಂದು ವಿಶ್ವನಾಥ್ ಸವಾಲು ಹಾಕಿದರು.

ಇಂದು ಪದವೀಧರರ ದಿನಾಚರಣೆ

ಮೈಸೂರು,ಅ.28(ಜಿಎ)–ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಸಂಬಂಧಿತ ಆರೋಗ್ಯ ವಿಜ್ಞಾನ ವಿದ್ಯಾರ್ಥಿಗಳ ಪದವೀಧರರ ದಿನಾಚರಣೆಯನ್ನು ಅ.29 ರಂದು ಬೆಳಗ್ಗೆ 10.30ಕ್ಕೆ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಾಜೇಂದ್ರ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಸವನಗೌಡಪ್ಪ ಈ ವಿಷಯ ತಿಳಿಸಿ, ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆಯ ಗೌರವ ಪ್ರಾಧ್ಯಾಪಕ ಪ್ರೊ.ಎಸ್.ಎಂ.ಶಿವಪ್ರಸಾದ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಸಮಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಸುರೀಂದರ್ ಸಿಂಗ್ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ 321 ವಿದ್ಯಾರ್ಥಿಗಳು 151 ಪದವಿ ಮತ್ತು 170 ಸ್ನಾತಕೋತ್ತರ ವಿದ್ಯಾರ್ಥಿಗಳು ಪ್ರಮಾಣಪತ್ರ ಸ್ವೀಕರಿಸಲಿದ್ದಾರೆ. ಇವರಲ್ಲಿ 23 ಪ್ರತಿಭಾನ್ವಿತ ವಿದ್ಯಾರ್ಥಿಗಳು ಚಿನ್ನದ ಪದಕ ಮತ್ತು ಮೆರಿಟೋರಿಯಸ್ ಪ್ರಮಾಣಪತ್ರ ಸ್ವೀಕರಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡೀನ್ ಡಾ.ಎನ್.ಎಂ.ಸುಮ, ಕುಲಸಚಿವ ಡಾ.ಬಿ.ಮಂಜುನಾಥ್, ಡಾ.ಸುಧೀಂದ್ರ ಭಟ್, ಡಾ.ಪ್ರವೀಣ್‌ಕುಲಕರ್ಣಿ, ಸತೀಶ್ ಚಂದ್ರ ಉಪಸ್ಥಿತರಿದ್ದರು.

ನಾಳೆ ಮಾವುತ ಚಿತ್ರಕ್ಕೆ ಮುಹೂರ್ತ

ಮೈಸೂರು,ಅ.28(ಜಿಎ)–ಎಸ್‌ಡಿಆರ್ ಪ್ರೊಡಕ್ಷನ್ ವತಿಯಿಂದ ನಿರ್ಮಾಣಗೊಳ್ಳುತ್ತಿರುವ 'ಮಾವುತ'ಚಿತ್ರ ಮುಹೂರ್ತ ಸಮಾರಂಭವನ್ನು ಅ.30ರಂದು ಬೆಳಗ್ಗೆ 9.40ಕ್ಕೆ ಮೈಸೂರಿನ ಅಗ್ರಹಾರ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಆಯೋಜಿಸಲಾಗಿದೆ ಎಂದು ಚಿತ್ರ ನಿರ್ಮಾಪಕ ಟಿ.ಸುರೇಶ್ ಗೋಲ್ಡ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಎ.ಮಂಜು, ಶಿಲ್ಪಿ ಅರುಣ್ ಯೋಗಿರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕ್ಲಾಪ್ ಮಾಡಲಿದ್ದಾರೆ. ಮೊದಲ ದೃಶ್ಯವನ್ನು ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ನಿರ್ದೇಶನ ಮಾಡಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ ಕ್ಯಾಮರಾಗೆ ಚಾಲನೆ ನೀಡಲಿದ್ದಾರೆ ಎಂದು ಹೇಳಿದರು.

ಅತಿಥಿಗಳಾಗಿ ಶಾಸಕರಾದ ಕೆ.ಹರೀಶ್ ಗೌಡ, ಮಂಥರ್‌ಗೌಡ, ಇಳೈ ಆಳ್ವಾರ್ ಸ್ವಾಮೀಜಿ, ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಭೈರಿ ಸೇರಿದಂತೆ ಮತ್ತಿತರ ಗಣ್ಯರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಚಿತ್ರದ ನಿರ್ದೇಶಕ ರವಿಶಂಕರ್ ನಾಗ್ ಮಾತನಾಡಿ, ಚಿತ್ರದಲ್ಲಿ ಮಾವುತರು ಹಾಗೂ ಆನೆ ನಡುವಿನ ಬಾಂಧವ್ಯ ಹಾಗೂ ಹಾಡಿಗಳ ಕಷ್ಟ ಸುಖವನ್ನು ತೋರಿಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಟ ಲಕ್ಷ್ಮೀಪತಿ ಬಾಲಾಜಿ, ಮೈಸೂರು ಮಂಜುಳ, ಲಯನ್ ಪ್ರಮೀಳಾ, ಚಿತ್ರ ನಿರ್ಮಾಪಕ ಪಾರ್ಥಸಾರಥಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸೇನಾ ವಾಹನದ ಮೇಲೆ ದಾಳಿ ನಡೆಸಿದ್ದ ಮೂವರು ಉಗ್ರರನ್ನು ಬೇಟೆಯಾಡಿದ ಸೇನೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಅಖ್ನೂರ್‌ನಲ್ಲಿ ಭಯೋತ್ಪಾದಕರು ಸೇನಾ ವಾಹನದ ಮೇಲೆ ಗುಂಡು ಹಾರಿಸಿದ ಬಳಿಕ ನಡೆದ ಸೇನೆಯ ಕಾರ್ಯಾಚರಣೆಯಲ್ಲಿ ಮೂವರು ಉಗ್ರರನ್ನು ಹತ್ಯೆಗೈಯ್ಯಲಾಗಿದೆ ಎಂದು ಸೇನೆಯ ಮೂಲಗಳು ತಿಳಿಸಿವೆ.



ಕಾರ್ಯಾಚರಣೆ ನಡೆದ ಪ್ರದೇಶದಲ್ಲಿ ಭದ್ರತಾ ಪಡೆಗಳು ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿವೆ. ಅಲ್ಲದೇ ಎನ್‌ಕೌಂಟರ್ ಮುಂದುವರೆದಿದೆ ಎಂದು ಮೂಲಗಳು ತಿಳಿಸಿವೆ. ಬಟಾಲ್ ಪ್ರದೇಶದಲ್ಲಿ ಬೆಳಗ್ಗೆ 6–7 ಗಂಟೆ ಸುಮಾರಿಗೆ ಮೂವರು ಭಯೋತ್ಪಾದಕರು ಸೇನಾ ವಾಹನದ ಮೇಲೆ ಹಲವು ಸುತ್ತು ಗುಂಡು ಹಾರಿಸಿದ್ದರು. ಬಳಿಕ ಭದ್ರತಾ ಪಡೆಗಳು ತಕ್ಷಣವೇ ಈ ಪ್ರದೇಶವನ್ನು ಸುತ್ತುವರಿದು ಉಗ್ರರ ವಿರುದ್ಧ ಕಾರ್ಯಾಚರಣೆ ಆರಂಭಿಸಿದ್ದವು.

ಜಮ್ಮು–ಕಾಶ್ಮೀರದಲ್ಲಿ ದೀಪಾವಳಿ ಹಬ್ಬದ ಸಲುವಾಗಿ ಭದ್ರತಾ ಕ್ರಮಗಳನ್ನು ಸೇನೆ ಜಾರಿಗೆ ತಂದಿದೆ. ಅದರ ನಡುವೆಯೇ ಈ ದಾಳಿ ನಡೆದಿದೆ. ಇತ್ತೀಚೆಗೆ ಗಂದರ್‌ಬಾಲ್ ಮತ್ತು ಬಾರಾಮುಲ್ಲಾದಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಜಮ್ಮು, ಕಥುವಾ, ಸಾಂಬಾ, ಪೂಂಚ್ ಮತ್ತು ರಜೌರಿ ಸೇರಿದಂತೆ ಜಮ್ಮುವಿನ ಗಡಿ ಜಿಲ್ಲೆಗಳಿಗೆ ಈ ಹಿಂದೆ ಹೈ ಅಲರ್ಟ್ ಘೋಷಿಸಲಾಗಿತ್ತು.

'ಸಂಕಲ್ಪ' ಜಗದೀಶ್ ಪ್ರಸಾದ್‌ರ ತಂದೆ ಸಿ.ವೆಂಕಟಸ್ವಾಮಿ ನಾಯ್ಡು ನಿಧನ



ಮೈಸೂರು: ಸಂಕಲ್ಪ ಗ್ರೂಪ್‌ನ ಸಿಎಂಡಿ ವಿ.ಕೆ.ಜಗದೀಶ್ ಪ್ರಸಾದ್ ಅವರ ತಂದೆ, ಬೆಂಗಳೂರಿನ ವಿ.ಕೆ.ಕನ್ವೆನ್‌ಷನ್ ಹಾಲ್ ಛೇರ್ಮನ್ ಹಾಗೂ ಲೋಕೋಪಯೋಗಿ ಇಲಾಖೆ ನಿವೃತ್ತ ಅಧಿಕಾರಿಗಳೂ ಆದ ಸಿ.ವೆಂಕಟಸ್ವಾಮಿ ನಾಯ್ಡು(94) ಅವರು ಇಂದು ಬೆಂಗಳೂರು ಜಯನಗರದ ತಮ್ಮ ನಿವಾಸದಲ್ಲಿ ನಿಧನರಾದರು. ಶ್ರೀಯುತರು ಪುತ್ರರಾದ ಜಗದೀಶ್ ಪ್ರಸಾದ್ ಸೇರಿದಂತೆ ಬೆಂಗಳೂರು ವೈದೇಹಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ದೇಶಕ, ಹೃದ್ರೋಗ ಮುಖ್ಯಸ್ಥ ಡಾ.ವಿ.ಕೆ.ಶ್ರೀನಿವಾಸ್, ಇಬ್ಬರು ಪುತ್ರಿಯರು, ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಬೆಂಗಳೂರಲ್ಲೇ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕಲ್ಯಾಟಂಡ ಜಪ್ಪು ಈರಪ್ಪ


ಕೊಡಗು, ಕಕ್ಕಬ್ಬೆ: ದಿವಂಗತ ಅಚ್ಚಮ್ಮ ಅವರ ಪುತ್ರ ಹಾಗೂ ಗ್ರೇಸಿ (ಮುಕ್ಕಾಟ್ಟಿರ ಹರಿಹರ) ಅವರ ಪತಿ, ಬೆಂಗಳೂರಿನ ಹ್ಯಾಟ್ರಿಕ್ ಸ್ಪೋರ್ಟ್ಸ್‌ನ ಕಲ್ಯಾಟಂಡ ಜಪ್ಪು ಈರಪ್ಪ (69) ಅವರು ಇಂದು ಮಧ್ಯಾಹ್ನ 1.30ರಲ್ಲಿ ಕೊಡಗಿನ ಕಕ್ಕಬ್ಬೆಯ ಕುಂಜಿಲ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು. ಇವರು ಬೆಂಗಳೂರಿನ ಸಂಜಯ್ ನಗರದ ನಿವಾಸಿಯೂ ಆಗಿದ್ದರು. ಮೃತರು ಮಕ್ಕಳಾದ ಬೊಜ್ಜಂಗಡ ನಕ್ಷಾ ಪೂವಮ್ಮ, ಮುತ್ತಣ್ಣ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತಿಮ ದರ್ಶನಕ್ಕಾಗಿ ಇವರ ಪಾರ್ಥಿವ ಶರೀರವನ್ನು ನಾಳೆ (ಅ.29) ಕೆಲಕಾಲ ಕುಂಜಿಲ ಗ್ರಾಮದ ನಿವಾಸದಲ್ಲಿರಿಸಿ, ಮಧ್ಯಾಹ್ನ 1 ಗಂಟೆ ನಂತರ ಗ್ರಾಮದ ಕಲ್ಯಾಟಂಡ ಮನೆತನದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಆರ್.ಸೋಮಶೇಖರ್



ಮೈಸೂರಿನ ಚಾಮರಾಜಪುರಂನ ಜಯಲಕ್ಷ್ಮಿ ರಸ್ತೆಯ ಲಕ್ಷ್ಮೀ ರಾಮಸ್ವಾಮಿ ಸೌಧ ಅಪಾರ್ಟ್‌ಮೆಂಟ್ ನಿವಾಸಿ ಎಸ್.ಆರ್. ಸೋಮಶೇಖರ್ (91) ಸೋಮವಾರ ಮುಂಜಾನೆ ನಿಧನರಾದರು.


ಅವರು ಜಾರ್ಖಂಡ್‌ನ ರಾಂಚಿಯ ಹೆವಿ ಎಂಜಿನಿಯರಿಂಗ್ ಕಾರ್ಪೊರೇಷನ್ ಕಂಪನಿಯಲ್ಲಿ ಸಿವಿಲ್ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ, ನಿವೃತ್ತಿ ನಂತರ ನಗರದಲ್ಲಿ ವಾಸವಿದ್ದರು. ಅವರಿಗೆ ಪತ್ನಿ ವಿಶಾಲಾಕ್ಷಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಚಿಕ್ಕದೇವಮ್ಮ

ಪೊನ್ನಂಪೇಟೆಯ ಎಂ.ಜಿ.ನಗರ ನಿವಾಸಿ ದಿವಂಗತ ತಿಮ್ಮಶೆಟ್ಟಿ ಅವರ ಪತ್ನಿ ಚಿಕ್ಕದೇವಮ್ಮ (87) ಸೋಮವಾರ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಮೃತರ ಅಂತ್ಯಕ್ರಿಯೆ ನಾಳೆ (ಅ.29) ಮಧ್ಯಾಹ್ನ 1 ಗಂಟೆಗೆ ಮಾವತ್ತೂರಿನಲ್ಲಿರುವ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈಶ್ವರ್



ಮೈಸೂರಿನ ಗಾಂಧಿನಗರದ ನಿವಾಸಿ ಈಶ್ವರ್(70) ಭಾನುವಾರ ನಿಧನರಾದರು. ಮೃತರು ಪತ್ನಿ ಶ್ರೀಮತಿ ಸೌಭಾಗ್ಯ (ಮಹಿಳಾ ಸಂಘದ ಅಧ್ಯಕ್ಷೆ), ಪುತ್ರ ಸುನಿಲ್‌ಕುಮಾರ್ (ಪೊಲೀಸ್ ಇಲಾಖೆ), ಇಬ್ಬರು ಪುತ್ರಿಯರು, ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆನಂದ ಕೃಷ್ಣಪ್ಪ

ಮೈಸೂರಿನ ಆಲನಹಳ್ಳಿ ಬಡಾವಣೆ ನಿವಾಸಿ ಆನಂದಕೃಷ್ಣಪ್ಪ ಅವರು ಶುಕ್ರವಾರ ಸಂಜೆ ನಿಧನರಾದರು. ಇವರು ಮೂಲತಃ ಗುಂಡ್ಲುಪೇಟೆ ತಾಲೂಕು ರಾಘವಪುರದವರು. ಮೃತರು ಪತ್ನಿ, ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿತು.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ವಿಮಾ ಪ್ರತಿನಿಧಿಗಳ ಪ್ರತಿಭಟನೆ





ಮೈಸೂರಿನ ಬನ್ನಿಮಂಟಪದಲ್ಲಿರುವ ಎಲ್‌ಐಸಿ ಕಚೇರಿ ಆವರಣದಲ್ಲಿ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ವಿಮಾ ಪ್ರತಿನಿಧಿಗಳು ಸೋಮವಾರ ಪ್ರತಿಭಟನೆ ನಡೆಸಿದರು. (ಬಲಚಿತ್ರ) ಎಲ್‌ಐಸಿ ಪ್ರತಿನಿಧಿಗಳ ಒಕ್ಕೂಟದಿಂದ ಮೈಸೂರಿನ ಶಾರದಾದೇವಿನಗರದ ಶಾಖೆಯ ಮುಂದೆ ಪ್ರತಿಭಟನೆ ನಡೆಸಿದರು. ಈ ವೇಳೆ ಶಾಖೆಯ ಅಧ್ಯಕ್ಷ ಕೆ.ತುಕಾರಾಂ, ಕಾರ್ಯದರ್ಶಿ ಸೋಮಶೇಖರ್ ಇನ್ನಿತರರಿದ್ದರು.

ಮೈಸೂರು,ಅ.28(ಜಿಎ)–ಮೈಸೂರು ಭಾರತೀಯ ಜೀವ ವಿಮಾ ನಿಗಮ ಬ್ರ್ಯಾಂಚ್–2 ಲಿಯಾಫಿ–1964 ವಿಮಾ ಪ್ರತಿನಿಧಿಗಳು ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೋಮವಾರ ಬನ್ನಿಮಂಟಪದಲ್ಲಿರುವ ಎಲ್‌ಐಸಿ ಕಚೇರಿ ಆವರಣದಲ್ಲಿ ತೋಳಿಗೆ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಕಚೇರಿ ಪ್ರವೇಶ ದ್ವಾರದಲ್ಲಿ ಜಮಾಯಿಸಿದ ನೂರಾರು ವಿಮಾ ಪ್ರತಿನಿಧಿಗಳು ಹತ್ತು ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಜೋನ್ ಉಪಾಧ್ಯಕ್ಷ ಡಿ.ಪುಟ್ಟಸ್ವಾಮಿ ಮಾತನಾಡಿ, ನಮ್ಮ ಹೋರಾಟ ಯಾರ ವಿರುದ್ಧವೂ ಅಲ್ಲ. ನಮ್ಮ ನ್ಯಾಯಯುತ ಬೇಡಿಕೆಗಳು, ಹಕ್ಕುಗಳ ಈಡೇರಿಕೆಗಾಗಿ ಧರಣಿ ನಡೆಸುತ್ತಿದ್ದೇವೆ. ಭಾರತೀಯ ಜೀವ ವಿಮಾ ನಿಗಮವು ಇತ್ತೀಚೆಗೆ ಪ್ರತಿನಿಧಿಗಳಿಗೆ ನೀಡುತ್ತಿರುವ ಕಮೀಷನ್ ದರವನ್ನು ಕಡಿಮೆ ಮಾಡಿದೆ. ಇದರಿಂದ ಲಕ್ಷಾಂತರ ಪ್ರತಿನಿಧಿಗಳು ಸಂಕಷ್ಟಕ್ಕೆ ಈಡಾಗಿದ್ದಾರೆ. ದಿನಬಳಕೆ ವಸ್ತುಗಳ ಬೆಲೆಗಳು ಗಗನಕ್ಕೇರಿರುವ ಇಂತಹ ದಿನಗಳಲ್ಲಿ ಕಮೀಷನ್ ದರವನ್ನು ಹೆಚ್ಚಳ ಮಾಡುವ ಬದಲು ಕಡಿಮೆ ಮಾಡಿರುವುದು ಅನ್ಯಾಯ. ಕೂಡಲೇ ಕಮಿಷನ್ ದರವನ್ನು ಹೆಚ್ಚಿಸಬೇಕು ಅಥವಾ ಯಥಾಸ್ಥಿತಿ ಕಾಪಾಡಬೇಕು. ಹಳೆಯ ಆಯೋಗದ ದರಗಳನ್ನು ಮರುಸ್ಥಾಪಿಸಬೇಕೆಂದು ಆಗ್ರಹಿಸಿದರು.

ಬ್ರ್ಯಾಂಚ್–2 ಅಧ್ಯಕ್ಷ ಎಂ.ಪ್ರಭಾಕರ್ ಮಾತನಾಡಿ, ಈ ಹಿಂದೆ ಸಮ್ ಅಶ್ಯೂರ್ಡ್ (ಭರವಸೆಯ ಮೊತ್ತ) 1 ಲಕ್ಷ ರೂ. ಇತ್ತು. ಇದೀಗ ಅದನ್ನು 2 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಕನಿಷ್ಠ ಆದಾಯವುಳ್ಳ ಜನರು ವಿಮಾ ಪಾಲಿಸಿ ಮಾಡಲು ಕಷ್ಟವಾಗುತ್ತದೆ. ನಿಗಮವು ಕೂಡಲೇ ಈ ಹಿಂದೆ ಇದ್ದ ಕನಿಷ್ಠ 1 ಲಕ್ಷ ರೂ. ಮೊತ್ತದ ಭರವಸೆ ಮರುಸ್ಥಾಪಿಸಬೇಕು. ಅಲ್ಲದೆ ಪಾಲಿಸಿದಾರರು 1 ವರ್ಷಕ್ಕೆ ವಿಮೆ ವಾಪಸ್ ಪಡೆದಲ್ಲಿ ಕಮೀಷನ್ ಬ್ಯಾಕ್ ಮಾಡುವ ಪದ್ಧತಿ ಜಾರಿ ಮಾಡಲಾಗಿದೆ. ಇದನ್ನು ವಿಮಾ ಪ್ರತಿನಿಧಿಗಳು ಸಂಪೂರ್ಣವಾಗಿ ವಿರೋಧಿಸುತ್ತಿದ್ದು ಕೂಡಲೇ ಈ ಪದ್ದತಿಯನ್ನು ಸ್ಥಗಿತ ಮಾಡಬೇಕು. ಅಲ್ಲದೇ ಗ್ರಾಹಕರಿಗೆ ಅನುಕೂಲವಾಗುವಂತೆ ಪ್ರೀಮಿಯಂ ದರವನ್ನೂ ಕಡಿಮೆ ಮಾಡಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬ್ರ್ಯಾಂಚ್–2 ಕಾರ್ಯದರ್ಶಿ ಎಸ್.ಸತೀಶ್, ಖಜಾಂಚಿ ಎಲ್.ಪ್ರಸಾದ್ ಸೇರಿದಂತೆ ನೂರಾರು ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಜಿಲ್ಲಾ ರಾಜ್ಯೋತ್ಸವ ಸನ್ಮಾನಕ್ಕಾಗಿ ಪೊಲೀಸ್ ಎನ್‌ಓಸಿ: ಸಾಹಿತಿ ಬನ್ನೂರು ರಾಜು ಖಂಡನೆ

ಮೈಸೂರು,ಅ.28(ಜಿಎ)–ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಜಿಲ್ಲಾ ಆಡಳಿತದಿಂದ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನಕ್ಕೆ ಅರ್ಜಿ ಸಲ್ಲಿಸುವಾಗ ಪೊಲೀಸ್ ಇಲಾಖೆಯಿಂದ ನಿರಾಪೇಕ್ಷಣಾ ಪತ್ರವನ್ನು (ಎನ್‌ಓಸಿ) ಲಗತ್ತಿಸುವಂತೆ ಕೇಳಿರುವ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಅವರ ನಡೆ ಅವಿವೇಕತನದ್ದು ಎಂದು ಸಾಹಿತಿ ಬನ್ನೂರು ಕೆ.ರಾಜು ಅವರು ತೀವ್ರವಾಗಿ ಖಂಡಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೇ ಸಾಧಕರನ್ನು ಹುಡುಕಿ ರಾಜ್ಯೋತ್ಸವದಂದು ಸನ್ಮಾನಿಸಬೇಕೇ ಹೊರತು ಸಾಧಕರಿಂದ ಅರ್ಜಿ ಕರೆಯುವ ಕ್ರಮವೇ ಸರಿಯಲ್ಲ. ಹೀಗಿರುವಲ್ಲಿ ಸಾಧಕರಿಂದ ಅರ್ಜಿ ಕರೆದು ಅವರನ್ನು ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿಸಿ ಅಲ್ಲಿಂದ ಎನ್‌ಓಸಿ ತರುವಂತೆ ಅಪಮಾನಿಸುವುದು ಸಾಧಕರಿಗಿರಲಿ ಇಲಾಖೆಗೂ ಗೌರವ ತರುವಂಥದ್ದಲ್ಲ. ಮಾನ ಮರ್ಯಾದೆ ಇರುವ ನಿಜವಾದ ಯಾವ ಸಾಧಕರೂ ಅರ್ಜಿ ಹಿಡಿದು ಸನ್ಮಾನಕ್ಕಾಗಿ ಎನ್‌ಓಸಿ ನೀಡಿರೆಂದು ಪೊಲೀಸ್ ಠಾಣೆಗೆ ಹೋಗಲಾರರು. ಸನ್ಮಾನದ ಹೆಸರಿನಲ್ಲಿ ಸಾಧಕರ ಗೌರವ ಕಳೆಯುತ್ತಿರುವುದರ ಜೊತೆಗೆ ಸುದರ್ಶನ್ ಅವರು ಇಲಾಖೆಯ ಮಾನವನ್ನು ಹರಾಜು ಹಾಕುತ್ತಿದ್ದಾರೆ. ಈ ಹಿಂದೆ ಕೂಡ ಸುದರ್ಶನ್‌ರಿಂದ ಕಲಾವಿದರಿಗೆ ನೀಡುವ ಗೌರವ ಧನದಲ್ಲಿ ಕಮಿಷನ್‌ಗೆ ಸಂಬಂಧಪಟ್ಟಂತೆ ದೊಡ್ಡ ವಿವಾದವೇ ಉಂಟಾಗಿತ್ತು. ಹಾಗಾಗಿ ಈ ಎಲ್ಲಾ ಅವ್ಯವಹಾರಗಳ ಹಿನ್ನೆಲೆಯಲ್ಲಿ ಸರ್ಕಾರ ಸುದರ್ಶನ್ ಅವರ ಮೇಲೆ ಕ್ರಮ ಕೈಗೊಳ್ಳುವುದರ ಜೊತೆಗೆ ಸನ್ಮಾನಕ್ಕಾಗಿ ಪೊಲೀಸ್ ಇಲಾಖೆಯ ಎನ್‌ಓಸಿ ತರುವುದಕ್ಕೆ ತಿಲಾಂಜಲಿ ಹೇಳಿ ನೈಜ ಸಾಧಕರ ಗೌರವ ಉಳಿಸುವ ಕೆಲಸವನ್ನು ಮಾಡಬೇಕೆಂದು ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.



ಬನ್ನೂರು ಕೆ.ರಾಜು

ಎಂ.ಕೆ.ಸೋಮಶೇಖರ್‌ಗೆ ಅಭಿನಂದನೆ



ಸಾವಿತ್ರಿಬಾಯಿ ಫುಲೆ ಮಹಿಳಾ ಶಿಕ್ಷಕಿಯರ ಸಂಘದ ವತಿಯಿಂದ ನಡೆದ ರಾಜ್ಯಮಟ್ಟದ ವಿಚಾರ ಸಂಕಿರಣ, ಶೈಕ್ಷಣಿಕ ಕಾರ್ಯಾಗಾರ ಯಶಸ್ವಿಯಾಗಲು ಸಹಕರಿಸಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಮಿತಿ ಜಿಲ್ಲಾಧ್ಯಕ್ಷೆ ಸರಸ್ವತಿ, ಪಿ.ಎಸ್.ಟಿ ಜಿಲ್ಲಾ ಮುಖ್ಯಸ್ಥೆ ಸುಶೀಲ ಹೆಚ್.ಕೆ., ಗ್ರಾಮಾಂತರ ವಲಯದ ಮಹಿಳಾ ಅಧ್ಯಕ್ಷೆ ಲಲಿತಾ, ಹುಣಸೂರು ತಾಲೂಕು ಅಧ್ಯಕ್ಷೆ ಕೌಶಲ್ಯ, ಜಿಲ್ಲಾ ಸಮಿತಿ ನಿರ್ದೇಶಕರಾದ ಸರಳಾದೇವಿ, ಅಲಮೇಲು ಉಪಸ್ಥಿತರಿದ್ದರು.

ಕಲೆಗಳಲ್ಲಿ ತೊಡಗಿಸಿಕೊಳ್ಳುವ ವೈದ್ಯರ ವ್ಯಕ್ತಿತ್ವ, ನಡವಳಿಕೆ ಹೂವಿನಂತೆ

ಮೈಸೂರು, ಅ.28(ಎಸ್‌ಪಿಎನ್)– ಸಾಹಿತ್ಯ, ಕಲೆ, ರಂಗಭೂಮಿ ಸೇರಿದಂತೆ ಇತರೆ ಕಲೆಗಳಲ್ಲಿ ತೊಡಗಿಸಿಕೊಳ್ಳುವ ವೈದ್ಯರ ವ್ಯಕ್ತಿತ್ವ, ನಡವಳಿಕೆ ಮಲ್ಲಿಗೆ ಹೂವಿನಂತೆ ಎಂದು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಆಡಳಿತಾಧಿಕಾರಿ ಡಾ.ಟಿ.ಸಿ. ಪೂರ್ಣಿಮಾ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರಿನ ಗಾನ ವೈದ್ಯಲೋಕ ವತಿಯಿಂದ ಆಯೋಜಿಸಿದ್ದ ಎಂದೂ ಮರೆಯದ ಹಾಡು–10 ಸಂಗೀತ ಸಂಜೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾಹಿತ್ಯ–ಕಲೆಗಳಲ್ಲಿ ಆಸಕ್ತರಾಗಿರುವ ವೈದ್ಯರು ತಮ್ಮ ವೃತ್ತಿ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಸಹಕಾರಿಯಾಗಲಿದೆ. ಇದು ಸಮಾಜಕ್ಕೆ ನೆರವಾಗಲಿದೆ ಎಂದ ಅವರು, ವಾರದ ರಜಾ ದಿನಗಳಲ್ಲಿ ಮೈಸೂರು ವೈದ್ಯರು ಸಂಗೀತ ಮತ್ತು ಗಾಯನದಲ್ಲಿ ತೊಡಗಿರುವುದು ಸಂತೋಷದ ವಿಷಯ ಎಂದರು.




ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರಿನ ಗಾನ ವೈದ್ಯಲೋಕದ ವತಿಯಿಂದ ಆಯೋಜಿಸಿದ್ದ 'ಎಂದೂ ಮರೆಯದ ಹಾಡು–10' ಸಂಗೀತ ಸಂಜೆ ಕಾರ್ಯಕ್ರಮವನ್ನು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಆಡಳಿತಾಧಿಕಾರಿ ಡಾ.ಟಿ.ಸಿ.ಪೂರ್ಣಿಮಾ ಉದ್ಘಾಟಿಸಿದರು.

ಪ್ರಸ್ತುತ ವೈದ್ಯಕೀಯ ಕ್ಷೇತ್ರ ವಾಣಿಜ್ಯೀಕರಣವಾಗುತ್ತಿದೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿ ಬರುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ಕೆಲಸ ಮಾಡುವ ವೈದ್ಯರು ಸಂಸ್ಕೃತಿ ಅಭಿರುಚಿ ಉಳ್ಳವರಾದರೆ, ಅದು ವೈದ್ಯಕೀಯ ಕ್ಷೇತ್ರ ಸುಧಾರಿಸಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟರು.

ಮೊದಲಿಗೆ ನೀ ನಮ್ಮ ಗೆಲುವಾಗಿ ಬಾ ಗಜಮುಖನೇ, ಹಾಡುವ ಮುರಳಿಯ ಕುಣಿಯುವ ಗೆಜ್ಜೆಯ, ಓಹೋ ವಸಂತ, ಮಾತೊಂದು ಹೇಳುವೆ ಹತ್ತಿರ ಹತ್ತಿರ ಬಾ, ಮೇರೆ ಸಪನೋಕೆ, ರಾಣಿ ಕಬ್ ಆಯಗಿತು, ಆಟವೇನು ನೋಟವೇನು, ಆಲಯ ಮೃಗಾಲಯ, ಒಲವೆ ಜೀವನ ಸಾಕ್ಷಾತ್ಕಾರ, ಬೇರೆ ಏನು ಬೇಡ, ಆಜಾ ಸನಂ, ತರಿಕೆರೆ ಏರಿಮೇಲೆ, ಸಾಥಿಯೊ ತೊನೆ ಕ್ಯಾಕಿಯಾ, ಇದೇ ನೋಟ, ಇದೇ ಆಟ, ಮಂದಾರ ಪುಷ್ಪವು ನೀನು, ಸೋಚೇಂಗೆ ತುಮ್ಹೆ ಪ್ಯಾರ್, ಬೆಸುಗೆ ಬೆಸುಗೆ, ಆಗುಂಬೆಯಾ ಪ್ರೇಮಾ ಸಂಜೆಯಾ, ತಂ ನಂ ತಂದಾನ ಜೋಡಿಯಾದೆನಾ, ದಿಲ್ ಹೈ ಕೆ ಮಾನ್ ತಾ ನಹೀ, ಕಾಲವನ್ನು ತಡೆಯೋರು, ಒಂದಾನೊಂದು ಕಾಲದಲ್ಲಿ, ಸೂರ್ಯ ಚಂದ್ರ ಆಕಾಶಕೆ, ಚೆಲು ವೆಯೇ ನಿನ್ನ ನೋಡಲು, ವಾದಾಕರಲೇ ಸಾಜನ, ಸುನ್ ಬಾ ಸುನ್, ಉಲ್ಲಾಸದ ಹೂ ಮಳೆ, ಸುರ್ ಮೈ ಆಕಿಂಯೋಮೆ ಹಾಡುಗಳಿಗೆ ಗಾಯಕರಾದ ಡಾ.ವೈ.ಡಿ.ರಾಜಣ್ಣ, ಡಾ.ಟಿ. ರವಿಕುಮಾರ್, ಡಾ.ಎ. ಎಸ್.ಪೂರ್ಣಿಮಾ, ಡಾ.ಸುರೇಂದ್ರನ್, ಡಾ.ಮನು, ಶ್ರೀಲತಾ ಮನೋಹರ್, ಡಾ.ಶ್ಯಾಮಪ್ರಸಾದ್, ಡಾ.ಚಿನ್ನನಾಗಪ್ಪ, ಸಿ.ಎಸ್.ವಾಣಿ ಅವರ ಸಿರಿಕಂಠದಲ್ಲಿ ಅಮೋಘವಾಗಿ ಹಾಡಿದರು. ಈ ವೇಳೆ ಗಾನ ವೈದ್ಯಲೋಕದ ಅಧ್ಯಕ್ಷ ಡಾ.ಟಿ.ರವಿಕುಮಾರ್ ಸ್ವಾಗತಿಸಿದರು. ಉಪನ್ಯಾಸಕ ಎಡೆಯೂರು ಸಮೀವುಲ್ಲಾ ನಿರೂಪಿಸಿದರು. ಬರಹಗಾರ ಹನೂರು ಚನ್ನಪ್ಪ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.10.2024 ಮಂಗಳವಾರ, ಮಳೆ ನಕ್ಷತ್ರ: ಸ್ವಾತಿ, 24.10.2024 ರಿಂದ 05.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ.

■ **ಭಾರತೀಯ ಅಂಚೆ ಇಲಾಖೆ :** ಉದ್ಯೋಗ ಮೇಳ, ಉಪಸ್ಥಿತರು : ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ, ಸ್ಥಳ: ಜ್ಞಾನ ಉದ್ಯಾನ ಸಭಾಂಗಣ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಬಾಸುದೇವ ಸೋಮಾನಿ ಕಾಲೇಜು :** ಸೋಮಾನಿ ಸಂಭ್ರಮ, ಕ್ರೀಡಾ, ಎನ್‌ಎಸ್‌ಎಸ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಇನ್ಸ್‌ಟಿಟ್ಯೂಷನ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮ್ಯಾಗಜಿನ್ ಬಿಡುಗಡೆ : ಕಾರ್ಯದರ್ಶಿ ಕುಬೇರ್ ಪಿ. ಗೌಡ, ಸರ್ಟಿಫಿಕೇಟ್ ವಿತರಣೆ : ಮ್ಯಾನೇಜಿಂಗ್ ಟ್ರಸ್ಟಿ ಪಿ. ಗೀಜಾಂಜಲಿ, ಮುಖ್ಯ ಅತಿಥಿಗಳು : ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಎಸ್. ಪ್ರಭಾ, ಅಧ್ಯಕ್ಷತೆ : ಬಾಸುದೇವ ಸೋಮಾನಿ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.45ಕ್ಕೆ.

■ **ಶ್ರೀ ಛಾಯಾದೇವಿ ಬಿ.ಇಡಿ ಕಾಲೇಜು :** ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಆಯುರ್ವೇದ ಚಿಕಿತ್ಸಾ ಜಾಗೃತಿ ಜಾಥಾ ಹಾಗೂ ಮಾನವ ಸರಪಳಿ ಅರಿವು ಕಾರ್ಯಕ್ರಮ, ಉದ್ಘಾಟನೆ : ಶಾಸಕ ತನ್ವೀರ್ ಸೇಠ್, ಉಪಸ್ಥಿತರು : ಮಾಜಿ ಶಾಸಕ ಮಾರುತಿರಾವ್ ಪವಾರ್, ಸರ್ಕಾರಿ ಆಯುರ್ವೇದ ಸಂಶೋಧನಾ ಸಂಸ್ಥೆ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಶ್ರೀ ಛಾಯಾದೇವಿ ಬಿ.ಇಡಿ. ಕಾಲೇಜು ಪ್ರಾಂಶುಪಾಲ ಡಾ. ಅಂತೋಣಿ ಪಾಲ್‌ರಾಜ್ ಸಿ., ಸ್ಥಳ: ಅಂಬೇಡ್ಕರ್ ವೃತ್ತ, ಬೆಳಗ್ಗೆ 10.30ಕ್ಕೆ

■ **ಜೆಎಸ್‌ಎಸ್ ಆಸ್ಪತ್ರೆ ಜೆರಿಯಾಟ್ರಿಕ್ಸ್ ವಿಭಾಗ, ವಾಹಂಯ್ ವಿಕಾಸ ಎಂಪವರಿಂಗ್ ಸೀನಿಯರ್ಸ್ :** ಜೆಎಸ್‌ಎಸ್ ವಾಹಯ್ ವಿಕಾಸ್, ಹಿರಿಯರ ನೋಡಲ್ ಸೆಂಟರ್ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು : ತಿರುಮಲ ಅರೋಹಿ ಮಮುನೂರು, ಡಾ. ವಿಜಯ್ ಸಿಂಗ್, ಚಂದನ್ ಕುಮಾರ್ ಚೌದರಿ, ಶ್ರೀಮತಿ ಪವಿತ್ರ ರೆಡ್ಡಿ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಮಧ್ಯಾಹ್ನ 2.30ಕ್ಕೆ.

■ **ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ :** ಜಾಗತಿಕ ಆರೋಗ್ಯಕ್ಕಾಗಿ ಆಯುರ್ವೇದದ ಆವಿಷ್ಕಾರ ಪರಿಕಲ್ಪನೆಯಲ್ಲಿ 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮ, ಅಧ್ಯಕ್ಷತೆ : ಕಾವೇರಿ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಚಂದ್ರಶೇಖರ್, ಉಪಸ್ಥಿತರು : ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಡಾ. ಸರಳಾ ಚಂದ್ರಶೇಖರ್, ಆಯುರ್ವೇದ ವೈದ್ಯ, ನಿವೃತ್ತ ಪ್ರಾಧ್ಯಾಪಕ ಡಾ. ಬಿ. ಗುರುಬಸವರಾಜ, ಸ್ಥಳ: ಕಾಲೇಜು ಸಭಾಂಗಣ, ಸಂಜೆ 4ಕ್ಕೆ.

■ **ರಂಗಭೂಮಿ ಟ್ರಸ್ಟ್, ಕೊಡಗು :** 'ಸತ್ಯವನ್ನೇ ಹೇಳುತ್ತೇವೆ' ನಾಟಕ, ರಚನೆ, ನಿರ್ದೇಶನ: ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ.ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಕುರಿತ ಕೇಳುಗರ ಪ್ರತಿಕ್ರಿಯೆಗಳು, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಜಿಲ್ಲಾಡಳಿತ, ಹಾಸನ, 8.45 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 8.55 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್. ಶಶಾಂಕ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಪ್ರಸನ್ನ ವೆಂಕಟದಾಸರ ರಚನೆಗಳು, 12.45 ಕನ್ನಡದಲ್ಲಿ ಭಾಷಣ – ಯಾರೂ ಕಾಣದ ಪ್ರವಾಸಿ ತಾಣ–ನಂಜನಗೂಡು ತಾಲೂಕಿನ ಗಂಗರ ಕಾಲದ ಪ್ರವಾಸಿ ತಾಣ ಹಿರೇಕಾಟಿ ಬಗ್ಗೆ ಮಾತನಾಡುತ್ತಾರೆ ಸಿರಿ ಮೈಸೂರು, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್.1.20 ಭಾವಗೀತೆಗಳು –ಮೈಸೂರು ರಂಗಸ್ವಾಮಿ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ವಿಜಯಲಕ್ಷ್ಮಿ ಸುಬ್ರಹ್ಮಣ್ಯಂ – ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಬಲಿವಾಮನ, ಪ್ರಸ್ತುತಿ: ವಿದ್ವಾನ್. ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ಹುಳು ರೋಗ ಹಾಗೂ ಕೀಟ ನಿರ್ವಹಣೆ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ : ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ. ಎಸ್. ಮಹಿಬಾ ಹೆಲನ್ ಮತ್ತು ಡಾ.ಎಲ್.ಸತೀಶ್, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ರವಿಕಿರಣ್ –ಚಿತ್ರವೀಣಾ ವಾದನ, 10.00 ಚೈತ್ರವನ – ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ನಿರ್ದೇಶನದ

'ಸತ್ಯವನ್ನೇ ಹೇಳುತ್ತೇನೆ' ನಾಟಕದ ಚೊಚ್ಚಲ ಪ್ರದರ್ಶನ

ಮೈಸೂರು, ಅ.28(ಪಿಎಂ)– ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ ನಾಟಕ 'ಸತ್ಯವನ್ನೇ ಹೇಳುತ್ತೇನೆ' ಸೋಮವಾರ ಯಶಸ್ವಿ ಪ್ರದರ್ಶನ ಕಂಡಿತು. ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸಂಜೆ ನಡೆದ ಚೊಚ್ಚಲ ಪ್ರದರ್ಶನಕ್ಕೆ ಇಡೀ ಸಭಾಂಗಣ ಕಿಕ್ಕಿರಿದು ತುಂಬಿತ್ತು.

ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲೇ ಅ.29ರಿಂದ 31ರವರೆಗೆ ಇನ್ನೂ ಮೂರು ದಿನಗಳು ಪ್ರತಿದಿನ ಸಂಜೆ 6.30ಕ್ಕೆ 'ಸತ್ಯವನ್ನೇ ಹೇಳುತ್ತೇನೆ' ನಾಟಕದ ಪ್ರದರ್ಶನ ನಡೆಯಲಿದೆ. ಟಿಕೆಟ್ ದರ 200 ರೂ.

ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ರಚಿಸಿ, ನಿರ್ದೇಶಿಸಿರುವ ನಾಟಕ ಇದಾಗಿದ್ದು, ಪ್ರದರ್ಶನದ ಬಳಿಕ ಪ್ರೇಕ್ಷಕರು ನಾಟಕದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಚರಿತ್ರೆಯ ಉತ್ಖನನ' ಈ ನಾಟಕದ ಉಪ ಶೀರ್ಷಿಕೆಯಾಗಿದ್ದು, ಢೋಂಗಿತನವನ್ನು ಅನಾವರಣಗೊಳಿಸುವ ಮೂಲಕ ಮುಚ್ಚಿಟ್ಟ ಸತ್ಯಗಳನ್ನು ಈ ನಾಟಕದ ಮೂಲಕ ಬಿಚ್ಚಿಡಲಾಗಿದೆ ಎಂದು ಅಡ್ಡಂಡ ಸಿ. ಕಾರ್ಯಪ್ಪ ಹೇಳಿಕೊಂಡಿದ್ದಾರೆ. ನಾಟಕದಲ್ಲಿ ಬರುವ ಎಲ್ಲಾ ಸಂಭಾಷಣೆಗಳಿಗೂ ಆಧಾರಗಳಿವೆ ಎಂದೂ ಅವರು ಹೇಳಿದ್ದಾರೆ. ಆತ್ಮಸಾಕ್ಷಿ ನ್ಯಾಯಾಲಯ ಹಾಗೂ ನ್ಯಾಯಪೀಠದಲ್ಲಿ ರೈತನೊಬ್ಬ ನ್ಯಾಯಮೂರ್ತಿಯಾಗಿ ಕಾಣಿಸಿಕೊಳ್ಳುವ ಪರಿಕಲ್ಪನೆಯಲ್ಲಿ ನಾಟಕ ಮೂಡಿಬಂದಿರುವುದು ವಿಶಿಷ್ಟ ಎಂದು ಪ್ರೇಕ್ಷಕರು ಅಭಿಪ್ರಾಯಪಟ್ಟರು.


ಮಹಾತ್ಮ ಗಾಂಧಿ, ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್, ಡಾ.ಅಂಬೇಡ್ಕರ್ ಹಾಗೂ ವೀರ ಸಾವರ್ಕರ್ ಅವರ ಪಾತ್ರಗಳು ನಾಟಕದ ಮುಖ್ಯ ಭೂಮಿಕೆಯಲ್ಲಿದ್ದು, ಮಹಾತ್ಮ ಗಾಂಧಿ ಪಾತ್ರದಲ್ಲಿ ಎಸ್. ಶಿವಮೂರ್ತಿ, ಜವಹರಲಾಲ್ ನೆಹರು ಆಗಿ ವಿ.ಸಿ. ಚಿದಾರ್ಜುನ್, ಸರ್ದಾರ್ ವಲ್ಲಭಬಾಯಿ ಪಟೇಲ್ ಆಗಿ ಚೇತನ್ ಕಾಟೇನಹಳ್ಳಿ, ಡಾ.ಬಾಬಾ ಸಾಹೇಬ ಅಂಬೇಡ್ಕರ್ ಆಗಿ ಪವನ್ ದೇಶ್‌ಪಾಂಡೆ, ಸುಭಾಷ್ ಚಂದ್ರ ಬೋಸ್ ಆಗಿ ಸುನೀಲ್ ಪಟಾಕಿ, ವೀರ ಸಾವರ್ಕರ್ ಆಗಿ ಎಸ್.ವೈಭವ್ ನಾಗ್, ವಕೀಲೆ ಭಾರತಿ ಎಂಬ ಪಾತ್ರ ದಲ್ಲಿ ಅನಿತಾ ಕಾರ್ಯಪ್ಪ, ಗುಮಾಸ್ತನ ಪಾತ್ರದಲ್ಲಿ ಎಸ್.ಹೆಚ್. ಕಿರಣ್, ರೈತ ನ್ಯಾಯಾಧೀಶರ ಪಾತ್ರದಲ್ಲಿ ಅಡ್ಡಂಡ ಸಿ.ಕಾರ್ಯಪ್ಪ ಅಭಿನಯಿಸಿದರು.

ರವಿ ಮೂರೂರು ಅವರ ಸಂಗೀತ ವಿನ್ಯಾಸ, ಸುಬ್ರಹ್ಮಣ್ಯ ಮೈಸೂರು ಅವರ ಧ್ವನಿ ವಿನ್ಯಾಸದಲ್ಲಿ ನಾಟಕ ಮೂಡಿ ಬಂದಿತು. ಸಂಗೀತ ನಿರ್ವಹಣೆಯನ್ನು ಶಿವಕುಮಾರ್, ಬೆಳಕು ವಿನ್ಯಾಸವನ್ನು ಮಂಜುನಾಥ್ ಹಿರೇಮಠ್, ವಸ್ತ್ರವಿನ್ಯಾಸವನ್ನು ಅನಿತಾ ಕಾರ್ಯಪ್ಪ ನಿರ್ವಹಿಸಿದರು.

ಪ್ರದರ್ಶನಕ್ಕೂ ಮುನ್ನ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಡ್ಡಂಡ ಸಿ.ಕಾರ್ಯಪ್ಪ, ಇದು 3 ಗಂಟೆ ಅವಧಿಯ ನಾಟಕ. ಚರಿತ್ರೆಯಲ್ಲಿ ಬಚ್ಚಿಟ್ಟಿರುವುದನ್ನು ಅನಾವರಣಗೊಳಿಸುವ ಪ್ರಯತ್ನವನ್ನು ಈ ನಾಟಕದಲ್ಲಿ ಮಾಡಲಾಗಿದೆ. ಸುಮಾರು 43 ಪುಸ್ತಕಗಳನ್ನು ಅಧ್ಯಯನ ಮಾಡಿ ಪ್ರಸ್ತುತಕ್ಕೆ ಅತ್ಯಂತ ಅನಿವಾರ್ಯವೆಂದು ಭಾವಿಸಿ ಈ ನಾಟಕ ಬರೆದಿದ್ದೇನೆ. ಏಕೆಂದರೆ ಸುಳ್ಳುಗಳನ್ನು ಪದೇ ಪದೆ ಹೇಳಿ ನಮ್ಮ ಜನರನ್ನು ಮೂರ್ಖರನ್ನಾಗಿ ಮಾಡುವ ಪ್ರಯತ್ನವನ್ನು ಓಟು ಮತ್ತು ಅಧಿಕಾರಕ್ಕಾಗಿ ಕೆಲವರು ಮಾಡುತ್ತಿದ್ದು, ಹಾಗಾಗಿ ಈ ನಾಟಕದ ಅಗತ್ಯತೆ ಕಂಡು ಬಂದಿತು ಎಂದು ತಿಳಿಸಿದರು.

ಯಾರು ಬೇಕಾದರೂ ವಿಮರ್ಶಿಸಲಿ: ಈ ಹಿಂದಿನಂತೆ ನನ್ನ ಈ ನಾಟಕಕ್ಕೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ನಾಟಕಕ್ಕೆ ಭಾರಿ ಮಟ್ಟದ ಪ್ರಚಾರ ಮಾಡಿಲ್ಲ. ಅದಾಗ್ಯೂ ಜನ ಕಿಕ್ಕಿರಿದು ಬಂದಿದ್ದಾರೆ. ಅನೇಕ ಹಿರಿಯರು, ಯುವ ಜನರು ಬಂದಿದ್ದಾರೆ. ಯುವ ಜನರಿಗೆ ನೈಜ ಚರಿತ್ರೆ ಗೊತ್ತಾಗಬೇಕು. ನಮ್ಮ ನಾಟಕದ ಬಗ್ಗೆ ಯಾರು ಬೇಕಾದರೂ ವಿಮರ್ಶೆ ಮಾಡಬಹುದು. ಅದಕ್ಕೆ ಎಲ್ಲರಿಗೂ ಹಕ್ಕಿದೆ. ಆದರೆ ಇದಕ್ಕೆ ಮೊದಲು ಗಾಂಧಿ ವರ್ಸಸ್ ಗಾಂಧಿ ನಾಟಕ ಬಂದಿದೆ. ಅದು ಕೂಡ ರಾಜಕೀಯ ನಾಟಕವೇ. ಇದೇ ರಂಗಾಯಣದಲ್ಲಿ ಅದನ್ನು ಈ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಪ್ರದರ್ಶನ ಮಾಡಲಾಗಿತ್ತು. ಆದ್ದರಿಂದ ಇದೇನು (ಸದರಿ ನಾಟಕ) ದೊಡ್ಡ ವಿಷಯವಲ್ಲ. ಮರಾಠಿಯಲ್ಲಿ ಇಂತಹ ಅನೇಕ ನಾಟಕಗಳು ಬಂದು, ಚರ್ಚೆಯಾಗುತ್ತವೆ. 'ಆರ್ಟಿಕಲ್ 370', 'ಕೇರಳ ಸ್ಟೋರಿ' ಸಿನಿಮಾಗಳು ಮಾತ್ರವಲ್ಲದೆ, ಸಾವರ್ಕರ್ ಕುರಿತು ಸಿನಿಮಾ ಬಂದಿದ್ದು, ಹಾಗೆಯೇ ಇದೊಂದು ನಾಟಕ ಎಂದು ಅಡ್ಡಂಡ ಕಾರ್ಯಪ್ಪ ಹೇಳಿದರು.

ಯುವ ಬ್ರಿಗೇಡ್ ಮುಖಂಡ ಚಕ್ರವರ್ತಿ ಸೂಲಿಬೆಲೆ, ಹಿಂದೂ ಸಂಘಟನೆ ಮುಖಂಡ ಪುನೀತ್ ಕೆರೆಹಳ್ಳಿ, ಅನಾಥಾಲಯದ ಅಧ್ಯಕ್ಷ ಸಿ.ವಿ.ಗೋಪಿನಾಥ್ ಸೇರಿದಂತೆ ಅನೇಕ ಗಣ್ಯರೂ ನಾಟಕ ವೀಕ್ಷಿಸಿದರು. ನಾಟಕ ಪ್ರದರ್ಶನದ ಹಿನ್ನೆಲೆಯಲ್ಲಿ ಕಿರುರಂಗಮಂದಿರ ಆವರಣದಲ್ಲಿ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕುಮಾರ್ ನೇತೃತ್ವದಲ್ಲಿ ಬಂದೋಬಸ್ತ್ ಸಹ ಕಲ್ಪಿಸಲಾಗಿತ್ತು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸೋಮವಾರ ನಡೆದ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಪ್ರದರ್ಶನದ ದೃಶ್ಯಗಳು.

ಎಲ್ಲಾ ದಿನಗಳ ಟಿಕೆಟ್ ಸೋಲ್ಡ್‌ಔಟ್

ನಾವೆಲ್ಲಾ ರಾಷ್ಟ್ರಭಕ್ತರು. ಈ ದೇಶಕ್ಕಾಗಿ ಏನಾದರೂ ಕೊಡುಗೆ ನೀಡಬೇಕೆಂಬುದು ನಮ್ಮ ಆಶಯ. ಈ ನಾಟಕ ಪ್ರದರ್ಶನದ ಎಲ್ಲಾ ದಿನಗಳ ಟಿಕೆಟ್‌ಗಳು ಸೋಲ್ಡ್‌ಔಟ್ ಆಗಿವೆ. ಅ.31ರ ದೀಪಾವಳಿ ದಿನದ ಪ್ರದರ್ಶನದ ಒಂದಷ್ಟು ಟಿಕೆಟ್‌ಗಳು ಮಾತ್ರ ಉಳಿದಿವೆ. ಕಿರುರಂಗಮಂದಿರ 230 ಆಸನ ಸಾಮರ್ಥ್ಯ ಹೊಂದಿದ್ದು, 20 ಹೆಚ್ಚುವರಿ ಆಸನಗಳನ್ನು ಹಾಕುವ ಮೂಲಕ ಒಟ್ಟು 250 ಆಸನಗಳ ವ್ಯವಸ್ಥೆ ಕಲ್ಪಿಸಿದ್ದೇವೆ. ಈ ನಾಟಕದಲ್ಲಿ ನ್ಯಾಯಾಲಯ ಆವರಣದ ಪರಿಕಲ್ಪನೆ ಕಾಲ್ಪನಿಕ. ಅದನ್ನು ಆತ್ಮಸಾಕ್ಷಿಯ ನ್ಯಾಯಾಲಯ ಎಂದು ಕರೆದಿದ್ದೇವೆ. ಆದರೆ ನಾಟಕದಲ್ಲಿ ಬರುವ ಸಂಭಾಷಣೆಗಳೆಲ್ಲವೂ ಚರಿತ್ರೆಯಲ್ಲಿದ್ದು, ಅದು ಸುಳ್ಳಲ್ಲ.

-ಅಡ್ಡಂಡ ಸಿ.ಕಾರ್ಯಪ್ಪ

ಇಂದು ರಾಷ್ಟ್ರೀಯ ಆಯುರ್ವೇದ ದಿನಾಚರಣೆ

ಮೈಸೂರು, ಅ.28(ಪಿಎಂ)– ಡಾ. ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಅ.29ರಂದು 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಆಯೋಜಿಸಲಾಗಿದೆ.

ಆಸ್ಪತ್ರೆಯ 2ನೇ ಅಂತಸ್ತಿನ ಸಭಾಂಗಣದಲ್ಲಿ ಅಂದು ಸಂಜೆ 4ಕ್ಕೆ ದಿನಾಚರಣೆ ನಡೆಯಲಿದ್ದು, ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷ ಡಾ. ಜಿ.ಆರ್.ಚಂದ್ರಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ವ್ಯವಸ್ಥಾಪಕ ನಿರ್ದೇಶಕಿ ಡಾ.ಸರಳಾ ಚಂದ್ರಶೇಖರ್ ಗೌರವ ಅತಿಥಿಯಾಗಿ ಭಾಗವಹಿಸಲಿದ್ದು, ಖ್ಯಾತ ಆಯುರ್ವೇದ ವೈದ್ಯರೂ ಆದ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ನಿವೃತ್ತ ಪ್ರಾಧ್ಯಾಪಕ ಡಾ.ಬಿ.ಗುರುಬಸವರಾಜ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಈ ವಾಹನ ನಿಮ್ಮದೇ...?

ಕೂಡಲೇ ಪೊಲೀಸರ ಸಂಪರ್ಕಿಸಿ

ಮೈಸೂರು, ಅ.28– ಮೈಸೂರಿನ ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ವಶದಲ್ಲಿರುವ 14 ದ್ವಿಚಕ್ರ ವಾಹನಗಳ ವಾರಸುದಾರರಿದ್ದಲ್ಲಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಂಪರ್ಕಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಪ್ಯಾಷನ್(ಕೆಎ 09, ಇಎನ್ 9285 ಮತ್ತು ಕೆಎ 09, ಇಇ 6119), ಟಿವಿಎಸ್ ಸೆಂಟ್ರಾ(ಕೆಎ 03, ಇಪಿ 1545), ಟಿವಿಎಸ್ ಅಪಾಚೆ(ಕೆಎ 05, ಜೆಎನ್ 2979), ಹೀರೋ ಪ್ಲೆಸರ್(ಕೆಎ04, ಇಎನ್ 7560), ಹೀರೋ ಸ್ಪ್ಲೆಂಡರ್(ಕೆಎ 09, ಇಜಿ 6728), ಗ್ಲಾಡಿಯೇಟರ್(ಕೆಎ12, ಹೆಚ್ 8882), ಪ್ಲಾಟಿನಾ (ಕೆಎ 45, ಕೆ 2134), ಸೂಪರ್ ಸ್ಪ್ಲೆಂಡರ್(ಕೆಎ 52, ಆರ್ 1041), ಹೋಂಡಾ ಆಕ್ಟೀವಾ(ಕೆಎ 09, ಇಇ 9049, ಕೆಎ 02, ಇಪಿ 3741 ಮತ್ತು ಕೆಎ 19 ಇಪಿ 5875), ಬಜಾಜ್ ಡಿಸ್ಕವರ್(ಕೆಎ 02, ಜೆಹೆಚ್ 2797) ಹಾಗೂ ಬಜಾಜ್ ಪಲ್ಸರ್ (ಕೆಎ 03, ಹೆಚ್‌ಡಿ 0953) ವಾಹನಗಳ ವಾರಸುದಾರರು ಪತ್ತೆಯಾಗಿಲ್ಲ. ಈ ವಾಹನಗಳ ವಾರಸುದಾರರಿದ್ದಲ್ಲಿ ಮೂಲ ದಾಖಲೆಗಳೊಂದಿಗೆ ಠಾಣೆಯನ್ನು ಸಂಪರ್ಕಿಸಬಹುದು. ಇಲ್ಲವಾದರೆ ಹರಾಜು ಮೂಲಕ ವಾಹನಗಳನ್ನು ವಿಲೇವಾರಿ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರೋಗ್ಯ ವಿಮೆ ಮೇಲಿನ ಜಿಎಸ್‌ಟಿ ರದ್ಧತಿಗೆ ಕೇಂದ್ರ ಸರ್ಕಾರ ಚಿಂತನೆ

ವಿಮಾ ಪ್ರೀಮಿಯಂ ಶೀಘ್ರದಲ್ಲೇ ಕಡಿತ ಸಾಧ್ಯತೆ

ನವದೆಹಲಿ: ಆರೋಗ್ಯ ವಿಮೆ ಮೇಲಿನ ಜಿಎಸ್‌ಟಿ ರದ್ದತಿಗೆ ಕೇಂದ್ರ ಸರ್ಕಾರ ಚಿಂತನೆ ನಡೆಸಿದ್ದು, ಶೀಘ್ರದಲ್ಲೇ ವಿಮಾ ಪ್ರೀಮಿಯಂ ಕಡಿತವಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಮುಂಬರುವ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಆರೋಗ್ಯ ವಿಮೆ ಮತ್ತು ಟರ್ಮ್ ವಿಮೆ ಪಾಲಿಸಿಗಳ ಮೇಲೆ ಜಿಎಸ್‌ಟಿ ತೆಗೆದುಹಾಕಲು ಕೇಂದ್ರ ಸರ್ಕಾರ ಗಂಭೀರ ಚಿಂತನೆ ನಡೆಸಿದೆ.

ವಿಮೆ ಮೇಲಿನ ಜಿಎಸ್‌ಟಿ ತೆಗೆದು ಹಾಕಲು ಸಾರ್ವಜನಿಕರಿಂದ ವ್ಯಾಪಕ ಒತ್ತಡಗಳು ಬಂದ ಹಿನ್ನೆಲೆಯಲ್ಲಿ ಜಿಎಸ್‌ಟಿ ತೆಗೆದು ಹಾಕಲು ಮುಂದಾಗಿದೆ ಎನ್ನಲಾಗಿದೆ. ಜಿಎಸ್‌ಟಿ ಕೌನ್ಸಿಲ್‌ನ ಸಚಿವ ಉಪ ಸಮಿತಿ ಇತ್ತೀಚೆಗೆ ಈ ನಿಟ್ಟಿನಲ್ಲಿ ಸಭೆ ನಡೆಸಿತ್ತು. ಇದರಲ್ಲಿ ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಮತ್ತು ಪಾಲಿಸಿದಾರರಿಗೆ ಪರಿಹಾರ ನೀಡಲು ವಿಮೆ ಮೇಲಿನ ಜಿಎಸ್‌ಟಿ ರದ್ದತಿಯನ್ನು ಬಹುತೇಕ ಸದಸ್ಯರು ಬೆಂಬಲಿಸಿದರು ಎಂದು ಹೇಳಲಾಗಿದೆ.

ಷರತ್ತು ಅನ್ವಯ: ಇನ್ನು ಸಾಮಾನ್ಯ ಜನರು ತೆಗೆದುಕೊಳ್ಳುವ ರೂ.5 ಲಕ್ಷದೊಳಗಿನ ಆರೋಗ್ಯ ವಿಮಾ ಪಾಲಿಸಿಗಳ ಮೇಲೆ ಈ ವಿನಾಯಿತಿ ಲಭ್ಯವಿರುತ್ತದೆ. 5 ಲಕ್ಷಕ್ಕಿಂತ ಹೆಚ್ಚಿನ ಪಾಲಿಸಿಗಳಿಗೆ ಶೇ. 18ರಷ್ಟು ಜಿಎಸ್‌ಟಿ ಮುಂದುವರಿಯುತ್ತದೆ.

ಇವುಗಳ ಜೊತೆಗೆ ಸೈಕಲ್ ಮತ್ತು ನೋಟ್‌ಬುಕ್‌ಗಳ ಮೇಲೆ ಈಗಿರುವ ಜಿಎಸ್‌ಟಿಯನ್ನು ಶೇ.12ರಿಂದ ಶೇ.5ಕ್ಕೆ ಇಳಿಸುವ ಪ್ರಸ್ತಾವನೆ ಇದ್ದು, 10 ಸಾವಿರ ರೂ.ನ 20 ಲೀಟರಿಗಿಂತ ಹೆಚ್ಚಿನ ಪ್ಯಾಕೇಜ್ಡ್ ಕುಡಿಯುವ ನೀರಿನ ಮೇಲಿನ ಜಿಎಸ್‌ಟಿ ಯನ್ನು ಶೇಕಡಾ 18 ರಿಂದ ಶೇ.5 ಕ್ಕೆ ಇಳಿಸಲು ಉದ್ದೇಶಿಸಲಾಗಿದೆ.

ಅಂಬೇಡ್ಕರ್ ಕೊಡುಗೆಗಳ ಎಲ್ಲಾ ವರ್ಗದವರು ಸ್ಮರಿಸುವ ವಾತಾವರಣ ಸೃಷ್ಟಿಯಾಗಬೇಕು

● ಉರಿಲಿಂಗಿ ಪೆದ್ದೀಶ್ವರ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಕಿವಿಮಾತು ● ಬಿಇಎಂಎಲ್‌ನಲ್ಲಿ ಡಾ.ಅಂಬೇಡ್ಕರ್ ಜಯಂತಿ; ಸಾಧಕರಿಗೆ ಸನ್ಮಾನ

ಮೈಸೂರು, ಅ.28(ಎಸ್‌ಪಿಎನ್)– ಡಾ.ಬಿ.ಆರ್.ಅಂಬೇಡ್ಕರ್ ಹೇಳಿಕೆಯಂತೆ ಮೊದಲು ನಾವು ಭಾರತೀಯರು. ಬಿಇಎಂಎಲ್ ಒಂದು ಕುಟುಂಬ ಎನ್ನುವ ಮನೋಭಾವ ಎಲ್ಲಾ ನೌಕರರು ಬೆಳೆಸಿಕೊಳ್ಳಬೇಕು ಎಂದು ಉರಿಲಿಂಗಿ ಪೆದ್ದೀಶ್ವರ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಕಿವಿಮಾತು ಹೇಳಿದರು.

ಮೈಸೂರು ಮಹಾರಾಜ ಕಾಲೇಜು ಆವರಣದ ಮಹಾರಾಜ ಶತಮಾನೋತ್ಸವ ಭವನದಲ್ಲಿ ಬಿಇಎಂಎಲ್ ಪ.ಜಾ–ಪ.ಪಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಇತರೆ ಕ್ಷೇತ್ರದ ಸಾಧಕರನ್ನು ಸನ್ಮಾನಿಸಿ ಹಿತವಚನ ನೀಡಿದರು.

ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ನನಗೆ ರಾಷ್ಟ್ರಪತಿ ಸ್ಥಾನ ಬೇಡ, ಪ್ರಧಾನ ಮಂತ್ರಿ ಸ್ಥಾನಬೇಡ. ಆದರೆ, ಸಂವಿಧಾನ ಕರಡು ರಚನಾ ಸಮಿತಿಯಲ್ಲಿ ಸ್ಥಾನ ಬೇಕೇ ಬೇಕು ಎಂದು ಅಂದಿನ ಬ್ರಿಟಿಷರಿಗೆ ಪತ್ರ ಬರೆದು ಒತ್ತಾಯಿಸಿದ್ದರು. ಇದರ ಫಲವಾಗಿ, ಇಂದು ಶೋಷಿತರು, ದಮನಿತರು, ಸಂವಿಧಾನದಡಿಯಲ್ಲಿ ಬರುವ ಎಲ್ಲ ಸ್ಥಾನಮಾನಗಳು ದೊರಕಿವೆ. ಹಾಗಾಗಿ ಅವರನ್ನು ನಾವೆಲ್ಲ ನೆನಪಿಸಿಕೊಳ್ಳಬೇಕು ಎಂದು ಹೇಳಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಎಲ್ಲಾ ಜಾತಿ–ಧರ್ಮದವರಿಗೆ ಒಂದೇ ವೇದಿಕೆಯಲ್ಲಿ ಸಮನಾಗಿ ಕುಳಿತುಕೊಳ್ಳುವ ಪದ್ಧತಿ ಇರಲಿಲ್ಲ. ಇಂದಿನ ಅಂಬೇಡ್ಕರ್ ಜಯಂತಿಯಲ್ಲಿ ಎಲ್ಲಾ ವರ್ಗದ ಕಾರ್ಮಿಕ ಮುಖಂಡರು ಒಂದೇ ವೇದಿಕೆಯಲ್ಲಿ ಇರುವ ಕನಸು ಕಂಡಿದ್ದು ಡಾ.ಬಿ.ಆರ್.ಅಂಬೇಡ್ಕರ್. ಹಾಗಾಗಿ ಅವರ(ಅಂಬೇಡ್ಕರ್)ನ್ನು ದಲಿತ ಸೂರ್ಯ ಎನ್ನುವುದಕ್ಕಿಂತ ಜಗತ್ತಿನ ಜ್ಞಾನ ಸೂರ್ಯ ಎನ್ನುವುದು ಸಾರ್ಥಕ ಎಂದರು. ಸ್ವತಂತ್ರ ಭಾರತದ ಮೊದಲ ಬ್ಯಾರಿಸ್ಟರ್, ಮೊದಲ ಕಾನೂನು ಮಂತ್ರಿಯಾಗಿದ್ದವರಿಗೆ 77 ವರ್ಷಗಳ ನಂತರವೂ ಸೂಕ್ತ ಗೌರವ ಈ ದೇಶದಲ್ಲಿ ಸಿಕ್ಕಿಲ್ಲ. ಇತ್ತೀಚಿಗೆ ಸುಪ್ರೀಂಕೋರ್ಟ್ ಆವರಣದಲ್ಲಿ ಅವರ ಪ್ರತಿಮೆ ಸ್ಥಾಪನೆಯಾಗಿದೆ. ಇದನ್ನು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅನಾವರಣಗೊಳಿಸಿ, ಸೂಕ್ತ ಗೌರವ ನೀಡಿರುವುದು ಸಂತೋಷದ ವಿಚಾರ ಎಂದರು.

ಅಲ್ಲದೆ, ಈ ದೇಶದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಡಾ.ಬಿ.ಆರ್. ಅಂಬೇಡ್ಕರ್ ಅವರು ಮೇರೆ ಲಿಯೇ ಭಗವಾನ್ ಎಂದು ಸಂಬೋಧಿಸಿದ್ದಾರೆ. ಇದು ಅವರ ದೊಡ್ಡಗುಣ. ಹಾಗಾಗಿ ಅಂಬೇಡ್ಕರ್ ಅವರನ್ನು ಎಸ್ಸಿ–ಎಸ್ಟಿ ಸಮುದಾಯಕ್ಕೆ, ನೌಕರರಿಗೆ ಸೀಮಿತಗೊಳಿಸದೇ ಎಲ್ಲಾ ವರ್ಗದವರೂ ನೆನಪಿಸಿಕೊಳ್ಳುವಂತಹ ಪರಿಸರ ನಿರ್ಮಾಣವಾಗಬೇಕು ಎಂದು ಕಿವಿಮಾತು ಹೇಳಿದರು. ಸ್ವಾತಂತ್ರ್ಯ ಬರುವ ಮುನ್ನ ಈ ದೇಶ 563 ಸಂಸ್ಥಾನದ ರಾಜರ ಸುಪರ್ದಿಯಲ್ಲಿ ಹರಿದು ಹಂಚಿಹೋಗಿತ್ತು. ಅದನ್ನು ಒಂದುಗೂಡಿಸಿದ್ದು, ಡಾ.ಬಿ.ಆರ್.ಅಂಬೇಡ್ಕರ್ ರಚಿತ ಸಂವಿಧಾನ. ಸಂವಿಧಾನದಲ್ಲಿ ಕಾರ್ಮಿಕರಿಗೆ ವಿಶೇಷವಾದ ಸವಲತ್ತು ನೀಡಲಾಗಿತ್ತು. ಆದರೆ, ಈಗಿನ ಕೇಂದ್ರ ಸರ್ಕಾರ 27 ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿದೆ. ಇದರ ಸಾಧಕ–ಬಾಧಕದ ಬಗ್ಗೆ ಬಿಇಎಂಎಲ್ ನೌಕರರು ಚಿಂತನೆ ಮಾಡಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಸ್ವಾಮ್ಯದ ಬಿಇಎಂಎಲ್ ಪ್ರಪಂಚದಲ್ಲೇ ಅತ್ಯುತ್ತಮ ಕಂಪನಿ ಎಂಬ ಹೆಗ್ಗಳಿಕೆ ಬರಲು ಎಲ್ಲಾ ವರ್ಗದ ಕಾರ್ಮಿಕರ ದುಡಿಮೆಯಿಂದ ಸಾಧ್ಯವಾಗಿದೆ. ಹಾಗಾಗಿ ಕೆಲಸ ನಿರ್ವಹಿಸುವ ಜಾಗದಲ್ಲಿ ರಾಗ–ದ್ವೇಷಗಳಿಗೆ ಕಡಿವಾಣ ಹಾಕಿ ಬೆಮೆಲ್ ಒಂದು ಕುಟುಂಬವೆಂದು ಭಾವಿಸಿ ಎಂದು ಎಸ್ಸಿ–ಎಸ್ಟಿ ನೌಕರರಿಗೆ ಕರೆ ನೀಡಿದರಲ್ಲದೆ, 10–15 ವರ್ಷಗಳ ಹಿಂದೆ ಬೆಮೆಲ್‌ಗೆ ದೊಡ್ಡಮೊತ್ತದ ವರ್ಕ್ ಆರ್ಡರ್ ಇರಲಿಲ್ಲ. ಇದರಿಂದ ಬೆಮೆಲ್ ಮುಚ್ಚುವ ಹಂತ ತಲುಪಿತ್ತು. ಇದೀಗ ಕೇಂದ್ರ ರಕ್ಷಣಾ ಮತ್ತು ರೈಲ್ವೆ ಇಲಾಖೆ ವಂದೇಮಾತರಂ ಕೋಚ್, ಬುಲೆಟ್ ಟ್ರೈನ್ ಕೋಚ್ ತಯಾರಿಸಲು ಈ ಕಂಪನಿಗೆ ನೀಡಿದೆ. ಎಲ್ಲಾ ಕಾರ್ಮಿಕರು ಗುಣಮಟ್ಟ ಕಾಪಾಡಿಕೊಂಡು ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು ಕಂಪನಿ ಬೆಳವಣಿಗೆ ಶ್ರಮಿಸಿ ಎಂದರು.

ಈ ವೇಳೆ ಒಡನಾಡಿಯ ಪ್ರತಿಭಾವಂತ ವಿದ್ಯಾರ್ಥಿನಿಯರಾದ ಪಲ್ಲವಿ, ರೇಷ್ಮಾ, ಸಿಂಚನಾ, ನೇತ್ರ ಸತ್ಯ, ಹೇಮಾ, ಪಿ.ಸಂಜನಾ, ದೀಪಿಕಾ, ಚೈತ್ರಾ, ರಕ್ಷಿತ, ರೂಪ, ಜೆನ್ನಿಫರ್, ಯಾಸೀನ್, ಹೊನಿತಾ, ಉಜ್ವಲಾ, ಆರ್. ಸಂಜನಾ, ಆಶಾ, ಸುಚಿತ್ರ, ದಿವ್ಯಶ್ರೀ, ನಾಗಚುದ್ರಿ ಅವರಿಗೆ ಬ್ಯಾಗ್ ಮತ್ತು ಇತರೆ ಶೈಕ್ಷಣಿಕ ಸಾಮಾಗ್ರಿಗಳನ್ನು ವಿತರಿಸಲಾಯಿತು. ನಂತರ ಶಟಲ್ ಬ್ಯಾಟ್‌ಮಿಂಟನ್ ಹಾಗೂ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದ ತಂಡದ ಸದಸ್ಯರಿಗೆ ಬಹುಮಾನ ವಿತರಿಸಲಾಯಿತು.

ವೇದಿಕೆಯಲ್ಲಿ ಬೆಂಗಳೂರು ಬಿಇಎಂಎಲ್‌ನ ನಿರ್ದೇಶಕ(ರಕ್ಷಣಾ ವ್ಯವಹಾರ) ಅಜಿತ್ ಕುಮಾರ್ ಶ್ರೀವತ್ಸ, ನಿರ್ದೇಶಕ (ಎಚ್‌ಆರ್) ದೇಬಿ ಪ್ರಸಾದ್ ಸಪ್ತಥೈ, ಬಿಇಎಂಎಲ್ ವ್ಯವಸ್ಥಾಪಕ ನಿರ್ದೇಶಕ ಜಿ.ಶ್ರೀನಿವಾಸನ್, ಕಾರ್ಮಿಕ ಮುಖಂಡರಾದ ಜಿ.ಗೋವಿಂದ ರೆಡ್ಡಿ, ಎಸ್.ಜಿ. ಮಾದೇಗೌಡ, ಬಿಇಎಂಎಲ್ ಪ.ಜಾ–ಪ.ಪಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಿ.ನಾರಾಯಣ, ಪ್ರಧಾನ ಕಾರ್ಯದರ್ಶಿ ಎ.ಅಂಬಿಕುಮಾರ್, ಸಹ ಕಾರ್ಯದರ್ಶಿ ಸಿ.ಜಗನ್ನಾಥ, ಉಪಾಧ್ಯಕ್ಷ ಕೋದಂಡರಾಮು, ಖಜಾಂಚಿ ಸಿ.ಚಲುವರಾಜು, ಚಿಕ್ಕಬಸವಯ್ಯ, ದೊರೆಸ್ವಾಮಿ, ಪಿ.ಕೆಂಪರಾಜು, ಜಿ.ಪ್ರಜ್ವಲ್ ಕುಮಾರ್, ಎಂ.ವಿ.ದಯಾನಂದ ಬಾಬು, ಎಸ್.ಸಿದ್ದೇಶ ಸೇರಿದಂತೆ ಇತರರಿದ್ದರು.



ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಹಾಗೂ ಇತರೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

"ಬಿಇಎಂಎಲ್ ಕಂಪನಿಗೆ ಕೇಂದ್ರದ ರಕ್ಷಣೆ ಮತ್ತು ರೈಲ್ವೆ ಇಲಾಖೆಯಿಂದ ಸಾಕಷ್ಟು ಕೆಲಸ ದೊರೆತಿದೆ. ಇವೆರಡು ಇಲಾಖೆಗೆ ನಮ್ಮ ಕಂಪನಿಯಿಂದ ಅತ್ಯುತ್ತಮ ಸಾಮಗ್ರಿಗಳನ್ನು ತಯಾರಿಸಿ ಕಳುಹಿಸಲಾಗಿದೆ. ಇದರ ಹಿಂದೆ ನೌಕರರ ಶ್ರಮ ಅಡಗಿದೆ. ಮುಂದೆಯೂ ಇದೇ ಸಹಕಾರ ನೀಡಿ, ಕಂಪನಿಯ ಬೆಳವಣಿಗೆಗೆ ಸಹಕರಿಸಬೇಕು.

– ಅಜಿತ್ ಕುಮಾರ್ ಶ್ರೀವತ್ಸ, ನಿರ್ದೇಶಕರು(ರಕ್ಷಣಾ ವ್ಯವಹಾರ), ಬಿಇಎಂಎಲ್

ಮೈಸೂರು ಅರಮನೆಗೆ ವಿದೇಶಿ ಪ್ರವಾಸಿಗರ ಪ್ರವೇಶ ಶುಲ್ಕ ಹೆಚ್ಚಳಕ್ಕೆ ಸಂದೇಶ್ ಖಂಡನೆ

ಮೈಸೂರು, ಅ.28– ಮೈಸೂರು ಅರಮನೆ ಪ್ರವೇಶ ಶುಲ್ಕವನ್ನು ವಿದೇಶಿ ಪ್ರವಾಸಿಗರಿಗೆ 100 ರೂ.ನಿಂದ 1000 ರೂ.ಗೆ ಹೆಚ್ಚಳ ಮಾಡಿರುವುದಕ್ಕೆ ಮೈಸೂರಿನ ಹೆಸರಾಂತ ಉದ್ಯಮಿ, ಚಿತ್ರ ನಿರ್ಮಾಪಕ ಹಾಗೂ ಮಾಜಿ ಎಂಎಲ್ಸಿ ಸಂದೇಶ್ ನಾಗರಾಜ್ ಖಂಡಿಸಿದ್ದಾರೆ.



ವಾಸ್ತವವಾಗಿ ದೇಶ–ವಿದೇಶಿ ಪ್ರವಾಸಿಗರಿಗೆ ಹಲವು ವಿಚಾರದಲ್ಲಿ ವಿನಾಯ್ತಿ–ರಿಯಾಯ್ತಿ ನೀಡಬೇಕಿದೆ. ಆದರೆ ನಮ್ಮಲ್ಲಿ ಪ್ರವಾಸಿಗರಿಗೆ ಬರೆ ಹಾಕಿ ಅವರು ಮೈಸೂರಿನತ್ತ ತಲೆ ಹಾಕದಂತೆ ಮಾಡಲಾಗುತ್ತಿದೆ. ಪ್ರವಾಸಿಗರ ಸ್ನೇಹಿ ನಿರ್ಣಯಗಳನ್ನು ಕೈಗೊಳ್ಳಬೇಕಾದ ಸರ್ಕಾರ, ಅಧಿಕಾರಿಗಳಿಗೆ ಬ್ರೇಕ್ ಹಾಕದೇ ಮೂಕ ಪ್ರೇಕ್ಷಕನಂತಿದೆ.

ಸೋಮವಾರವಷ್ಟೇ ನೂತನ ಪ್ರವಾಸೋದ್ಯಮ ನೀತಿ ರೂಪಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರ ವಾರ್ಷಿಕ 20 ಲಕ್ಷ ವಿದೇಶಿ ಪ್ರವಾಸಿಗರ ಸೆಳೆಯುವ ಉದ್ದೇಶ ಹೊಂದಿರುವುದಾಗಿ ಹೇಳಿದೆ. ಆದರೆ ಈ ರೀತಿ ಎಲ್ಲಾ ಕಡೆ ಪ್ರವಾಸಿ ವಿರೋಧಿ ನಿಲುವು ತಾಳಿದರೆ ಪ್ರವಾಸೋದ್ಯಮ ಅಭಿವೃದ್ಧಿಯಾಗುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ.

ಕೂಡಲೇ ಅರಮನೆ ಪ್ರವೇಶ ಶುಲ್ಕ ಇಳಿಸಬೇಕು. ಹಳೆ ಮೈಸೂರು ಭಾಗದ ಪ್ರವಾಸಿತಾಣಗಳ ಪುನರ್ಜೀವನಗೊಳಿಸಿ ಅಲ್ಲಿ ಉತ್ತಮ ಸೌಕರ್ಯ ಕಲ್ಪಿಸಬೇಕು. ಒಂದು ವೇಳೆ ಇದರ ಬಗ್ಗೆ ಅರಿವಿಲ್ಲದಿದ್ದರೆ ಅಧಿಕಾರಿಗಳ ರಾಜಸ್ತಾನ, ಕೇರಳಗಳಿಗೆ ಕಳುಹಿಸಿ ಅಧ್ಯಯನ ಮಾಡಿಸುವಂತೆ ಸಂದೇಶ್ ಆಗ್ರಹಿಸಿದ್ದಾರೆ.

ಕಾಡಿನ ಅನುಭವ ಕಟ್ಟಿಕೊಡುವ ಅರಣ್ಯ ಇಲಾಖೆ ಮಳಿಗೆ

ಮೈಸೂರು, ಅ.28(ಎಂಕೆ)– ಘೀಳಿಡುವ ವನ್ಯಜೀವಿಗಳು, ಚಿಲಿಪಿಲಿಯ ಹಕ್ಕಿಗಳ ಕಲರವ, ಅರಣ್ಯದ ಹಸಿರಿನ ವಿಸ್ಮಯವನ್ನು ಸವಿಯಲು ಹತ್ತಿರದಲ್ಲೇ ಅವಕಾಶ...!

ಹೌದು! ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಅರಣ್ಯ ಇಲಾಖೆಯ ಕಾಡಿನ ಮಳಿಗೆಗೊಮ್ಮೆ ಭೇಟಿ ನೀಡಿದರೆ ಸಾಕು, ಅರಣ್ಯದಲ್ಲಿ ಸುತ್ತಾಡಿದ ಅನುಭವ ದೊರೆಯಲಿದೆ. ವನ್ಯಜೀವಿಗಳು, ಹಕ್ಕಿಗಳು, ತೊರೆ–ಝರಿಗಳು ಎಲ್ಲವನ್ನೂ ಒಂದೇ ಕಡೆ ನೋಡಿ ಆನಂದಿಸುವ ಅವಕಾಶ ನೀಡಲಾಗಿದೆ.

ಮಳಿಗೆಯಲ್ಲಿ ಪರಿಸರ ಜಾಗೃತಿ ಮತ್ತು ಸಂರಕ್ಷಣೆ ನಮ್ಮೆಲ್ಲರ ಹೊಣೆ ಸಂದೇಶದೊಂದಿಗೆ ವನ್ಯಮೃಗಗಳ ಕುರಿತ ಮಾಹಿತಿ, ಅರಣ್ಯ ಅಭಿವೃದ್ಧಿಗೆ, ಸಂರಕ್ಷಣೆ ಮತ್ತು ಸಾರ್ವಜನಿಕ ಯೋಜನೆಗಳು, ಮಾನವ–ವನ್ಯಜೀವಿ ಸಂಘರ್ಷಕ್ಕೆ ಪ್ರಮುಖ ಕಾರಣಗಳು, ರಾಷ್ಟ್ರೀಯ ಉದ್ಯಾನವನಗಳ ಮಾಹಿತಿ ಹಾಗೂ ಹುಲಿ ಸಂರಕ್ಷಣಾ ಪ್ರದೇಶಗಳ ಮಾಹಿತಿ ಸೇರಿದಂತೆ ಅರಣ್ಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಬಿತ್ತರಿಸಲಾಗಿದೆ.

ವೀಕ್ಷಣೆಗೆ ಚಾಲನೆ: ಅರಣ್ಯ ಇಲಾಖೆ ಮಳಿಗೆ ವೀಕ್ಷಣೆಗೆ ಶಾಸಕ ಟಿ.ಎಸ್.ಶ್ರೀವತ್ಸ ಸೋಮವಾರ ಚಾಲನೆ ನೀಡಿದರು. ನಂತರ ಮಳಿಗೆ ವೀಕ್ಷಣೆ ಮಾಡಿ ಮಾತನಾಡಿದ ಅವರು, ಅರಣ್ಯ ಇಲಾಖೆ ಮಳಿಗೆ ಸುಂದರವಾಗಿದ್ದು, ಕಾಡಿನಲ್ಲಿಯಲ್ಲಿಯೇ ವಿಹರಿಸಿದ ಅನುಭವ ನೀಡಲಿದೆ. ಅಲ್ಲದೆ ಅರಣ್ಯ ಇಲಾಖೆಯಲ್ಲಿ ಹುತಾತ್ಮರಾದ ಸಿಬ್ಬಂದಿಯ ಭಾವಚಿತ್ರಗಳನ್ನು ಪ್ರದರ್ಶಿಸಿ ಗೌರವ ಸಲ್ಲಿಸಿ ರುವುದು ಅತ್ಯಂತ ಶ್ಲಾಘನೀಯವಾಗಿದೆ. ಕಾಡುಗಳ್ಳ ವೀರಪ್ಪನ್‌ನಿಂದ ಹತ್ಯೆಯಾದ ಶ್ರೀನಿವಾಸ್ ಸೇರಿದಂತೆ ಹುತಾತ್ಮರಾದ ಹಲವರ ಫೋಟೋ ಪ್ರದರ್ಶನದಲ್ಲಿದೆ. ಜೊತೆಗೆ ಹೇಗೆ ಹುತಾತ್ಮರಾದರು ಎಂಬ ಮಾಹಿತಿಯನ್ನು ನೀಡಿರುವುದು ಮೆಚ್ಚುವಂತಹದ್ದು ಎಂದರು. ಅತ್ಯಂತ ಸುಂದರ ವಾಗಿರುವ ಅರಣ್ಯ ಇಲಾಖೆಯ ಮಳಿಗೆಯನ್ನು, ಮೈಸೂರಿನ ಸಾರ್ವಜನಿಕರು, ಪ್ರವಾಸಿಗರು ಹಾಗೂ ಮುಖ್ಯವಾಗಿ ಮಕ್ಕಳು ತಪ್ಪದೇ ವೀಕ್ಷಣೆ ಮಾಡಲೇ ಬೇಕು. ಅರಣ್ಯ ಸಂಪತ್ತು ಎಷ್ಟು ಮುಖ್ಯವೆಂಬುದನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂದು ಮನವಿ ಮಾಡಿದರು. ಅರಣ್ಯ ಇಲಾಖೆ ಡಿಸಿಎಫ್ (ಮೈಸೂರು ಪ್ರಾದೇಶಿಕ) ಡಾ. ಬಸವರಾಜು, ಡಿಸಿಎಫ್ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್ (ಸ್ಕ್ವಾಡ್) ಚಂದ್ರಶೇಖರ್ ಪಾಟೀಲ್, ಎಸಿಎಫ್ ರವೀಂದ್ರ, ಆರ್‌ಎಫ್‌ಓ ಮಹಮ್ಮದ್ ಜ್ಹೀಷಾನ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ದಸರಾ ವಸ್ತುಪ್ರದರ್ಶನದಲ್ಲಿ ಅರಣ್ಯ ಇಲಾಖೆ ಮಳಿಗೆಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿ, ವೀಕ್ಷಿಸಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಯಾಕೋ ಪರೀಕ್ಷೆ ಬರೆಯೋದು ಬಿಟ್ಟು ಡ್ಯಾನ್ಸ್ ಮಾಡ್ತಿದ್ದೀಯಾ?

ಮರಿಪಚ್ಚ : ನನ್ನ ಟೀಚರ್ ಹೇಳಿದ್ರು, ಗಣಿತ ಪರೀಕ್ಷೆಯಲ್ಲಿ ಪ್ರತಿ ಸ್ಟೆಪ್‌ಗೂ ಮಾರ್ಕ್ಸ್ ಇದೆ ಅಂತ!

ಮೈಸೂರು ಮಿತ್ರ

ಮಂಗಳವಾರ, 29 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಂದು ನಗುವಿಗೆ ಇರುವ ಶಕ್ತಿ ಎಂತಹ ವಾದಕ್ಕೂ ಇಲ್ಲ. ವಾದದಿಂದ ಗೆಲ್ಲುವ ಬದಲು ನಗುತ್ತ ಸೋಲಿಸೋಣ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜಲ ಶೋಧಿಸಿ ನೀರು ತರಬೇಕು, ಕುಲ ಶೋಧಿಸಿ ಹೆಣ್ಣು ತರಬೇಕು.

ನಿಮ್ಮ ಪತ್ರಗಳು

ಅಕ್ರಮ ವ್ಯವಹಾರಗಳ ಅಡ್ಡ ಆಗಿರುವ ಇಂದಿರಾ ಕ್ಯಾಂಟೀನ್‌ಗಳು



ಮಾನ್ಯರೆ,

ನಾಗರಿಕರ ತೆರಿಗೆ ಹಣ ಹೇಗೆ ಪೋಲಾಗುತ್ತದೆ ಎಂಬುದರ ಉದಾಹರಣೆ ಇದು. ಈಗಾಗಲೇ ಹತ್ತಾರು ಇಂದಿರಾ ಕ್ಯಾಂಟೀನ್‌ಗಳು ನಡೆಯದೆ ಪಾಳು ಬಿದ್ದಿವೆ. ಲಕ್ಷ ಲಕ್ಷ ವೆಚ್ಚ ಮಾಡಿ ಕಟ್ಟಿದ ಕಟ್ಟಡಗಳು ಅಕ್ರಮ ವ್ಯವಹಾರಗಳ ಅಡ್ಡ ಆಗಿವೆ. ಉದಾಹರಣೆಗೆ ಲಲಿತಮಹಲ್ ಹತ್ತಿರ ಇರುವ ಇಂದಿರಾ ಕ್ಯಾಂಟೀನ್, ಬನ್ನಿಮಂಟಪ ಜೋಡಿ ತೆಂಗಿನಮರದ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳು ಯಾವುದೇ ಆಹಾರ ವಿತರಣೆ ಮಾಡದೆ ಖಾಲಿ ಬಿದ್ದಿವೆ. ರಾತ್ರಿ ಹೊತ್ತು ಅಕ್ರಮಗಳ ತಾಣವಾಗಿವೆ.

ಇದು ಬಿಲ್ಡಿಂಗ್ ಕಂಟ್ರಾಕ್ಟರ್‌ಗೆ ಲಾಭ ಮಾಡಿಕೊಡುವ, ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ದುಡ್ಡು ಮಾಡುವ ವ್ಯವಸ್ಥೆ ಅಷ್ಟೇ ಹೊರತು ಬಡವರಿಗೆ ಉಪಯೋಗ ಆಗಲಿ ಎಂಬ ಉದ್ದೇಶವೇನು ಅಲ್ಲ. ಒಂದು ವೇಳೆ ಪ್ರಾರಂಭ ಆದರೂ ನೂರು, ಇನ್ನೂರು ತಿಂಡಿ, ಊಟ ಕೊಟ್ಟು ಕಳ್ಸಿಸದ ತಿಂಡಿ, ಊಟದ ಹಣ ಕೊಳ್ಳೆ ಹೊಡೆಯುವ ಹುನ್ನಾರ ಅಷ್ಟೇ. **–ವಿ. ಕೇಶವಮೂರ್ತಿ, ಜ್ಯೋತಿಷ್ಯ ವಿದ್ವಾಂಸ, ಮೈಸೂರು.**

ಅಸ್ಪೃಶ್ಯತೆ ಆಚರಣೆ ಮಾಡುವವರಿಗೆ ಎಚ್ಚರಿಕೆ ಪಾಠವಾಗಲಿ

ಮಾನ್ಯರೆ,

2014ರಲ್ಲಿ ಇಡೀ ದೇಶದ ಗಮನ ಸೆಳೆದಿದ್ದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮರಕುಂಬಿ ಗ್ರಾಮದ ದಲಿತರ ಗುಡಿಸಲಿಗೆ ಸವರ್ಣೀಯರು ಬೆಂಕಿ ಹಚ್ಚಿ ದಲಿತರ ಮೇಲೆ ದೌರ್ಜನ್ಯವೆಸಗಿದ್ದ ಘಟನೆಯಲ್ಲಿ 101 ಅಪರಾಧಿಗಳ ಪೈಕಿ 98 ಅಪರಾಧಿಗಳಿಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಜೀವಾವಧಿ ಶಿಕ್ಷೆ ವಿಧಿಸಿರುವುದು ಅಸ್ಪೃಶ್ಯತೆ ಆಚರಣೆ ಮಾಡುವವರಿಗೆ ಎಚ್ಚರಿಕೆಯ ಪಾಠವಾಗಲಿ. **–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು**

ಹದಗೆಟ್ಟಿರುವ ಕೆ.ಆರ್.ನಗರ ಮುಖ್ಯ ರಸ್ತೆ

ಮಾನ್ಯರೆ,

ಕೆ.ಆರ್.ನಗರ ಮುಖ್ಯ ರಸ್ತೆ ಹಾಳಾಗಿ ಹೋಗಿರುವಷ್ಟು ಬಹುಶಃ ಮೈಸೂರು ಜಿಲ್ಲೆಯ ಯಾವ ರಸ್ತೆಗಳು ಕಿತ್ತು ಹೋಗಿಲ್ಲವೇನೋ. ಅದರಲ್ಲೂ ಕೆ.ಆರ್.ನಗರ ಪಟ್ಟಣಕ್ಕೆ ಹೊಂದಿಕೊಂಡಿರುವ ಚಾನಲ್ ಬ್ರಿಡ್ಜ್ ರಸ್ತೆಯಲ್ಲಿ ವಾಹನ ಚಲಾಯಿಸುವುದೇ ಹರಸಾಹಸ. ಕೆ.ಆರ್. ನಗರ ರಸ್ತೆ ಇಷ್ಟು ದುಸ್ಥಿತಿಯಲ್ಲಿದ್ದರೂ ಅಧಿಕಾರಿಗಳು, ಜನಪ್ರತಿನಿಧಿಗಳು ಈ ರಸ್ತೆ ಬಗ್ಗೆ ಗಮನಹರಿಸಿಲ್ಲ. ಈ ರಸ್ತೆಯಲ್ಲಿ ಒಂದು ದಿನ ಪ್ರಯಾಣಿಸಿದರೆ ಎರಡು ದಿನ ಸುಧಾರಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಗಮನಹರಿಸಿ ಕೆ.ಆರ್.ನಗರ ಮುಖ್ಯ ರಸ್ತೆಗೆ ಡಾಂಬರೀಕರಣ ಭಾಗ್ಯ ಕಲ್ಪಿಸಲಿ. **– ಬಿ.ಜಿ.ರಂಗೇಗೌಡ, ಮೈಸೂರು.**

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆ ಗೊಂದಲ ನಿವಾರಿಸಿ

ಮಾನ್ಯರೆ,

ಮಂಡ್ಯದಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. ನಾನಾ ರೀತಿಯ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಚರ್ಚೆಗೆ ಅವಕಾಶ ಕಲ್ಪಿಸಿ ಗೊಂದಲ ಸೃಷ್ಟಿಸಿದ್ದಾರೆ. ಪರಿಷತ್ತಿನ ಇತಿಹಾಸದಲ್ಲಿ ಸಾಹಿತ್ಯ ಕ್ಷೇತ್ರದವರ ಹೊರತಾಗಿ ಬೇರೆ ಕ್ಷೇತ್ರದವರನ್ನು ಅಧ್ಯಕ್ಷರನ್ನಾಗಿ ಮಾಡಿದ ಇತಿಹಾಸ ಇಲ್ಲ. ಇಲ್ಲಿ ಸಾಹಿತಿಗಳ ಹೊರತಾಗಿ ಬೇರೆಯವರಿಗೆ ಅವಕಾಶ ಇಲ್ಲ. ಇಂತಹ ವೇಳೆ ಸಂಪ್ರದಾಯ ಮುರಿಯಬಾರದು. ಸಾಹಿತ್ಯ ಪರಿಷತ್ತು ಈಗಿರುವ ಸಂಪ್ರದಾಯ ಮುಂದುವರೆಸಿ ಸಾಹಿತ್ಯ ಕ್ಷೇತ್ರದವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಂಪ್ರದಾಯ ಗೌರವಿಸಬೇಕು. ಪರಿಷತ್ತಿನ ಅಧ್ಯಕ್ಷರ ಹೇಳಿಕೆಗೆ ಸರ್ಕಾರ ಕಡಿವಾಣ ಹಾಕಬೇಕು. ರಾಜಕಾರಣಿಯಂತೆ ಹೇಳಿಕೆ ಕೊಡುತ್ತಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಪರಿಷತ್ತು ಜೋಶಿ ಅವರ ಆಸ್ತಿ ಅಲ್ಲ. ಕನ್ನಡಿಗರ ಆಸ್ತಿ ಎಂಬುದನ್ನು ಮರೆಯಬಾರದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ನಡವಳಿಕೆಗೆ ಕಡಿವಾಣ ಹಾಕಬೇಕು.

–ದೇಶಹಳ್ಳಿ ರಾಮಚಂದ್ರಾಚಾರಿ, ಕತ್ವಾಡಿಪುರ ಅಗ್ರಹಾರ, ಮೈಸೂರು.

ಸಂಪೂರ್ಣ ಡಿಜಿಟಲ್ ಕರೆನ್ಸಿ ಸಾಧ್ಯವೇ?

ಮಾನ್ಯರೆ,

ಇನ್ನು ಮುಂದೆ ದೇಶದಲ್ಲಿ ನೋಟುಗಳ ಚಲಾವಣೆ ಕ್ರಮೇಣ ತಗ್ಗಲಿದೆ ಹಾಗೂ ದೇಶ ಸಂಪೂರ್ಣವಾಗಿ ಡಿಜಿಟಲೀಕರಣವಾಗಲಿದೆ ಎಂಬ ಸುಳಿವನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಗೌರ್ನರ್ ಇತ್ತೀಚಿನ ಸಮಾರಂಭವೊಂದರಲ್ಲಿ ತಿಳಿಸಿದ್ದಾರೆ. ಕರೆನ್ಸಿ ನೋಟುಗಳ ಹಾಗೂ ನಾಣ್ಯಗಳ ಮುದ್ರಣ ಕೂಡ ಕೆಲವೇ ವರ್ಷಗಳಲ್ಲಿ ನಿಂತು ಹೋಗಲಿದೆ ಎಂಬ ವಿಚಾರವನ್ನು ಸಹ ಅವರು ತಿಳಿಸಿರುತ್ತಾರೆ.

ದೇಶ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕನಸಾದ 'ಡಿಜಿಟಲ್ ಇಂಡಿಯಾ' ದತ್ತ ಹಂತ ಹಂತವಾಗಿ ಸರಿಯುತ್ತಿರುವುದನ್ನು ಗಮನಿಸಬಹುದು. ಈಗಾಗಲೇ ದೇಶದಲ್ಲಿ 'ಡಿಜಿಟಲ್ ಪಾವತಿ' ಅಧಿಕಗೊಳ್ಳುತ್ತಿದ್ದು, ಮುಂದಿನ ವರ್ಷಗಳಲ್ಲಿ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳ ಅಗತ್ಯವೇ ಇಲ್ಲವಾಗಬಹುದು.ಆಗ ದುಬಾರಿ ವೆಚ್ಚದ ನೋಟುಗಳು ಮತ್ತು ನಾಣ್ಯಗಳ ಮುದ್ರಣ ಕೂಡ ನಿಲ್ಲಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ಜನ ಹೊಸ ವಿಧಾನಕ್ಕೆ ಒಗ್ಗಿಕೊಳ್ಳಲು ಸಾಧ್ಯವಾಗದಿರಬಹುದು. ಡಿಜಿಟಲ್ ಪಾವತಿಯಲ್ಲಿ ತಾಂತ್ರಿಕ ತೊಂದರೆ ಅಥವಾ ದೋಷವುಂಟಾದರೆ, ಜನರು ಅನವಶ್ಯಕವಾಗಿ ದಿನಗಟ್ಟಲೇ ಕಾಯಬೇಕಾಗಬಹುದು. ಇದರ ಜೊತೆಗೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಸೈಬರ್ ಕ್ರೈಮ್ ಕೂಡ ನೂರ್ಮಡಿಗೊಳ್ಳಬಹುದು. ನಮ್ಮ ದೇಶ ಮಿಶ್ರ ಅರ್ಥ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಹಾಗೆ, ಡಿಜಿಟಲ್ ಪಾವತಿಗಳ ಜೊತೆ ಜೊತೆಗೆ ಕರೆನ್ಸಿ ನೋಟುಗಳ ಚಲಾವಣೆ ಹಾಗೂ ಬಳಕೆ ಇದ್ದರೆ ಒಳ್ಳೆಯದು. ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಸಂಪೂರ್ಣ ಡಿಜಿಟಲೀಕರಣ ವಿಫಲವಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429-34512

ದೀಪ ಸಾಲು

ಸೆಲ್ಫಿ ಗೀಳು ಎಲ್ಲೆ ಮೀರಿದರೆ ಗೋಳು!



ಕನ್ನಡದಲ್ಲೊಂದು ಮಾತಿದೆ. ಹದಿನೆಂಟು ವರ್ಷಕ್ಕೆ ಕಲಿತ ಚಟ ಅರವತ್ತು ವರ್ಷಕ್ಕೆ ಬರುವ ಕೆಮ್ಮು ಎರಡೂ ಹೋಗೋದು ಕಷ್ಟ ಅಂತ. ಅರವತ್ತರಲ್ಲಿ ಕೆಮ್ಮು ಬಂದರೆ ಹೇಗೋ ಕೆಮ್ಮಿಕೊಂಡೋ! ಕ್ಯಾಕರಿಸಿಕೊಂಡೋ ಬದುಕುವವರನ್ನು ನೋಡಿದ್ದೀವಿ. ಆದರೆ ಈ ಹದಿನೆಂಟನೇ ವಯಸ್ಸಿಗೆ ನಮ್ಮ ಹುಡುಗರು ಕಲಿಯುವ ಕೆಲವು ಚಟಗಳು ಜೀವನ ಪರ್ಯಂತ ಹೋಗೋದಿಲ್ಲವಂತೆ. ಹಾಗಂತ ಯಾರೂ ಹತ್ತಾರು ಚಟಗಳಿಗೆ ಜೋತುಬಿದ್ದು ಸುಖವನ್ನೋ, ಕಷ್ಟವನ್ನೋ ನೋಡಿಯೇ ಬಂದವರು ನಾವೆಲ್ಲ. ಆದರೆ ಈವತ್ತಿನ ಹದಿಹರೆಯದ ಹುಡುಗ–ಹುಡುಗಿಯರಿಗೆ. ಹೊಸದೊಂದು ಚಟ ಶುರುವಾಗಿದೆ. ಅದೇ ಸೆಲ್ಫಿ ಗೀಳು. ಭಾರತದ ಗ್ರಾಮ ಸಮಾಜಕ್ಕೆ ಇವತ್ತಿಗೂ ಈ ಸೆಲ್ಫಿ–ಗಿಲ್ಫಿ ಗೊತ್ತಿರಲಿಲ್ಲ! ಆದರೆ ಈಗ ಗ್ರಾಮ ಸಮಾಜವೂ ಈ ಸೆಲ್ಫಿಯ ಹಿಂದೆ ಬಿದ್ದು ಕರಿಮಣಿ ಮಾಲೀಕ ನೀ'ನಲ್ಲ' ಎಂಬ ಹಾಡಿನ ಗೀಳಿನಲ್ಲಿ ಸೆಲ್ಫಿ ಇರಲಿ ರೀಲ್ಸ್‌ಗಳನ್ನು ಮಾಡಿಕೊಂಡು ತಮ್ಮ ಸಾಂಸಾರಿಕ ಜೀವನಗಳನ್ನು ಕಗ್ಗಂಟು ಮಾಡಿಕೊಂಡ ಹೆಣ್ಣುಮಕ್ಕಳ ವಿಷಯ ಇತ್ತೀಚೆಗೆ ವರದಿಯಾಗುತ್ತಿರುವುದನ್ನು ನೋಡಿದರೆ ಗ್ರಾಮ ಭಾರತವನ್ನೂ ಈ ಸೆಲ್ಫಿ ಗೀಳು–ರೀಲ್ಸ್ ಗೋಳು ಆವರಿಸಿಕೊಂಡಿದೆ. ನಮ್ಮ ಹಳ್ಳಿಯ ಜನಕ್ಕೆ ಊಫಿ ಗೊತ್ತು. ಅದು ಆಟದಲ್ಲಿ ಬಳಸುವ ಪದ. ಈ ಊಜಾಗಕ್ಕೆ ಸೆ ಬಂದು ನಮ್ಮ ತರುಣ ತಲೆಮಾರಿನ ಜಾಯಮಾನಕ್ಕೆ ಹುಚ್ಚೆದ್ದು ಕುಣಿಸುವ ಕಚ್ಚೆ ಕಟ್ಟಿ ಬಿಟ್ಟಿದೆ. ಅವರು ಹೋದಲ್ಲೆಲ್ಲಾ ಕೈಯ್ಯಲ್ಲೊಂದು ಸೆಲ್ಫಿಸ್ಟ್ಯಾಂಡು ತಗುಲಿಸಿಕೊಂಡೇ ಹೋಗುವ ಸಿದ್ಧಸೂತ್ರ'ವೊಂದು ನಮ್ಮ ಯುವ ತಲೆಮಾರಿನ ಹೊಸ ಫ್ಯಾಷನ್ನು. ಯಾವತ್ತಿಗೂ ಯುವಪೀಳಿಗೆ ಅದು ಯಾವುದೇ ದೇಶ ಇರಲಿ. ಯಾವುದೇ ಭಾಗವಿರಲಿ, ಹೊಸತನಕ್ಕೆ ತನ್ನನ್ನು ತಾನು ತೆರೆದುಕೊಳ್ಳುತ್ತದೆ. ಆದರೆ ಹಾಗೆ ತೆರೆದುಕೊಳ್ಳುವ ಹೊತ್ತಿನಲ್ಲಿ ನಮ್ಮ ಯುವಕರ ಉನ್ಮಾದಕ್ಕೆ ಮಿತಿಯಿರಲಿ, ಮೇರೆಯಿರಲಿ. ಉನ್ಮಾದ ಉತ್ಸಾಹಕ್ಕೆ ತಿರುಗಿದರೆ ವಿವೇಕ ಕಣ್ಮರೆಯಾಗುತ್ತದೆ. ಸಾವು ಹೆಡೆಯೆತ್ತುತ್ತದೆ. ಒಮ್ಮೆ ಬಿಡದಿಯ ಬಳಿ ಚಲಿಸುತ್ತಿದ್ದ ರೈಲಿನ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಹೋಗಿ ಮೂವರು ವಿದ್ಯಾರ್ಥಿಗಳು ವಿನಾಕಾರಣ ಸತ್ತು ಹೋಗುವ ವೀಡಿಯೋ ಕ್ಲಿಪ್ ಒಂದು ಎಲ್ಲರ ವಾಟ್ಸಪ್‌ಗಳಲ್ಲಿ ಹರಿದಾಡುತ್ತಿತ್ತು. ಒಮ್ಮೆ ಕನಕಪುರ ತಾಲೂಕಿನ ರಾಮಗೊಂಡ್ಲು ಗ್ರಾಮದಲ್ಲಿ ಕಾಲೇಜು ವಿದ್ಯಾರ್ಥಿಗಳು ಹರಿವ ನೀರಿನ ನಡುವೆ ನಿಂತು ಸೆಲ್ಫಿ ತೆಗೆದುಕೊಳ್ಳುವಾಗ ವಿದ್ಯಾರ್ಥಿಯೊಬ್ಬ ನೀರು ಪಾಲಾದ. ಹೀಗೆ ಪಟ್ಟಿ ಬೆಳೆಸುತ್ತಾ ಹೋದರೆ ಬರಿಯ ಸೆಲ್ಫಿ ಹುಚ್ಚಿಗೆ ಬಲಿಯಾಗಿ ಸತ್ತವರ ಸಂಖ್ಯೆ ಭಾರತವೊಂದರಲ್ಲೇ ಸಾವಿರ ಸಂಖ್ಯೆಯಷ್ಟಿದೆ. ವಿಶ್ವದಲ್ಲಿ ಲೆಕ್ಕವಿಲ್ಲದಷ್ಟು ಜನ ಅಸುನೀಗಿದ್ದಾರೆ. ದೆಹಲಿಯ ಇಂದ್ರಪ್ರಸ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ. ಅಮೆರಿಕಾದ ಕೆಮ್ ಜಿ ಮಿಲಾನ್ ನಡೆಸಿದ ಸಮೀಕ್ಷೆಗಳ ಪ್ರಕಾರ ಸೆಲ್ಫಿ ಗೀಳಿನಿಂದ ಸಾಯುತ್ತಿರುವವರ ಪಟ್ಟಿಯಲ್ಲಿ ಭಾರತ ನಂಬರ್ ಒನ್ ಆಗಿದೆ. ಇದು ನಮಗೆ ಬೇಕಾ? ನಮ್ಮ ಯುವಕರಿಗೆ ತಿಳಿ ಹೇಳುವ ಮಾರ್ಗವಾದರೂ ಯಾವುದು? ಸ್ವಾತಂತ್ರ್ಯ ಪೂರ್ವದಲ್ಲಿದ್ದ ತರುಣ ಪಡೆಯಲ್ಲಿ ಆದರ್ಶ ಅನುಭೂತಿಗಳು ಮೈತುಂಬುತ್ತಿದ್ದವು. ಈಗ ಅವುಗಳ ಜಾಗದಲ್ಲಿ ಹತಾಶೆ, ಅಪಸವ್ಯಗಳು, ಅವಸರ, ಹತಭಾಗ್ಯತನಗಳು ಅಂಕುರಿಸುತ್ತಿವೆ. ಅದಕ್ಕೆ ಅವರು ಕೊಡುತ್ತಿರುವ ಹೆಸರು 'ಸಾಹಸಪ್ರಿಯತೆ'. ಬೆಟ್ಟ ಹತ್ತುವ ಚಾರಣ, ನದಿ ದಾಟುವ ಜಾಣ, ಸರೋವರದಲ್ಲಿ ಮುಳುಗೇಳುವ ಚಾಕಚಕ್ಯತೆ, ಅರಣ್ಯದಲ್ಲಿ ಅಲೆದಾಟ, ಆಟೋವ್ಹೀಲಿಂಗ್ ಹೀಗೆ ಹತ್ತಾರು ರೀತಿಯ ರೋಚಕತೆಗಳಿಗೆ ಮೈಯ್ಯೊಡ್ಡಿಕೊಳ್ಳುವ ನಮ್ಮ ತರುಣ ತಲೆಮಾರು ಅಷ್ಟಕ್ಕೇ ನಿಂತಿದ್ದರೆ ಈ ಅಂಕಣ ಬರೆವ ಅಗತ್ಯವೇ ಇರುತ್ತಿರಲಿಲ್ಲ. ಅವರು ತಮ್ಮ ಸಾಹಸಪ್ರವೃತ್ತಿಯನ್ನು ತಮ್ಮ ಮೊಬೈಲುಗಳ ಕ್ಯಾಮೆರಾದಲ್ಲಿ ಸೆಲ್ಫಿ ತೆಗೆದು ಅದನ್ನು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ಕು, ವಾಟ್ಸಪ್, ಇನ್‌ಸ್ಟಾಗ್ರಾಮ್, ಟ್ವಿಟರ್ ಥರದ ಜಾಗಗಳಲ್ಲಿ ಪೋಸ್ಟಿಂಗ್ ಮಾಡಿಕೊಂಡು ಸಂಭ್ರಮಿಸುವ ಸಲವಾಗಿ ಈ ಸೆಲ್ಫಿ ಗೀಳಿಗೆ ಬಿದ್ದಿದ್ದಾರೆ. ಹಾಗೆ ಸೆಲ್ಫಿ ತೆಗೆದುಕೊಳ್ಳುವಾಗ ಅಪಾಯಕಾರಿಯಾದ ಬೆಟ್ಟದ ತುದಿ, ರಭಸವಾಗಿ ಹರಿವ ಹೊಳೆ, ಚಲಿಸುವ ರೈಲು, ಭಯಾನಕ ಕ್ರೂರ ಮೃಗಗಳ ಹತ್ತಿರ ನಿಂತು ಸೆಲ್ಫಿ ತೆಗೆದುಕೊಳ್ಳುವ ದುಸ್ಸಾಹಸಕ್ಕೆ ಕೈ ಹಾಕುತ್ತಾರೆ. ಹಾಗೆ ಸೆಲ್ಫಿ ತೆಗೆದುಕೊಳ್ಳುವ ಭರದಲ್ಲಿ ಕ್ಯಾಮೆರಾ ಕ್ಲಿಕ್ಕಿಸುವ ಸೂಪರ್ ಪೋಸುಗಳಲ್ಲಿ ಮಿಂಚುವ ಉಮ್ಮೇದಿಗೆ ಬೀಳುತ್ತಾರೆ. ಅದರಲ್ಲಿ ಮೈಮರೆಯುತ್ತಾರೆ! ಅಷ್ಟು ಸಾಕಲ್ಲ! ಮೈಮರೆವು

> ಇವತ್ತಿನ ಸಾಮಾಜಿಕ ಜಾಲತಾಣಗಳು ಎಷ್ಟು ಆಕರ್ಷಣೀಯವಾಗಿವೆ ಎಂದರೆ ನಿಮಗೆ ನಗು ಬರಬಹುದು! ಬೆಳಿಗ್ಗೆ ಏಳುವಾಗಲೇ ಬಲಗಡೆ ಮಗ್ಗುಲಿಂದ ಎದ್ದು ದೇವರಿಗೋ ತಂದೆ–ತಾಯಿಗಳಿಗೋ ಕೈ ಮುಗಿಯುವ ಬದಲು ನಿದ್ದೆಗಣ್ಣಲ್ಲೇ ತಮ್ಮ ಮೊಬೈಲ್ ಹುಡುಕಿ ಹಾಸಿಗೆಯ ಮೇಲೆ ಅದು ಬಿದ್ದಿರುವ ಕಡೆಗೇ ಏಳುತ್ತಾರೆ, ಇವರ ಕೈಯ್ಯಲ್ಲಿ ಮೊಬೈಲಿಲ್ಲದೆ ಎದ್ದ ಕೂಡಲೇ ವಾಟ್ಸಪ್, ಫೇಸ್ ಬುಕ್ಕು ನೋಡದೇ ಹೋದರೆ ಶೌಚಾಲಯದಲ್ಲಿ ಇವರಿಗೆ ಕೂರಲಿಕ್ಕೇ ಆಗದಷ್ಟು ಅವಲಂಬಿತರಾಗಿ ಹೋಗಿರುವ ಈ ಹೊಸ ಫ್ಯಾಂಟಸಿಗಳು ನಮ್ಮ ತರುಣ ತಲೆಮಾರಿನ ನಿತ್ಯ ಜೀವನವನ್ನು ಆಳುತ್ತಿವೆ. ಗ್ಲೋಬಲೈಸೇಷನ್ನಿನ ಈ ಯುಗದಲ್ಲಿ ಬೆಳಗ್ಗೆ ಎದ್ದರೆ ಸೋಷಿಯಲ್ ಮೀಡಿಯಾಗಳಲ್ಲಿ ಯಾರಾದರೊಬ್ಬರ ಜೊತೆ ಜಗಳವಾಡದಿದ್ದರೆ, ಬೇರೆಯವರ ಫೋಟೋಕ್ಕಿಂತ ಮಿಗಿಲಾಗಿ ತಮ್ಮದೊಂದು ಅಪ್‌ಡೇಟೆಡ್ ಪ್ರೊಫೈಲ್ ಪಿಕ್ಚರ್ ಹಾಕಿಕೊಳ್ಳದೇ ಹೋದರೆ, ನಮ್ಮ ತಲೆಮಾರಿಗೆ ಸಮಾಧಾನ ಆಗುವುದಿಲ್ಲ.

ಸೆಲ್ಫಿ ಎಂಬ ಅಕರ್ಷಣೆಯ ಈ ಸುಂಟರಗಾಳಿ ಸಾವಿನ ಪ್ರಪಾತಕ್ಕೆ ತಳ್ಳಿ ತನ್ನ ಸ್ಕೋರ್ ಬೋರ್ಡ್‌ನಲ್ಲಿ ಎಪ್ಪತ್ತಾರು ಎಂದು ದಾಖಲಿಸಿ ಮುಂದಿನ ಬೇಟೆಗೆ ಯಾರದ್ದಾದರೂ ಮೊಬೈಲ್ ಹುಡುಕುತ್ತಿರುತ್ತದೆ. ಇಂಥಾ ಧಾವಂತಕ್ಕೆ ತಳ್ಳುವ ಈ ಸೆಲ್ಫಿ ಗೀಳು ನಮ್ಮ ತರುಣ ತಲೆಮಾರಿನ ಆದ್ಯತೆಯ ವಿಷಯವಾಗುತ್ತಿರುವುದನ್ನು ಒಂದು ಜವಾಬ್ದಾರಿಯುತ ಸಮಾಜ ಸೂಕ್ಷ್ಮವಾಗಿ ಗಮನಿಸಬೇಕು. ಹಿರಿಯರು ಬೈದು ಬುದ್ಧಿ ಹೇಳಬೇಕು. ಬರಹಗಾರರು ಬರೆಯಬೇಕು. ನಟರು ಬೀದಿ ನಾಟಕಗಳ ಮೂಲಕ, ಹಾಡುಗಳ ಮೂಲಕ ಜನಜಾಗೃತಿ ಮೂಡಿಸಬೇಕು. ಹೀಗೆ ಬರೆದು ಮಾತಾಡಿ ದೊಡ್ಡದೊಂದು ಹಂಗಾಮ ಸೃಷ್ಟಿ ಮಾಡಿದ್ದರಿಂದಲೇ 'ಬ್ಲೂವೇಲ್' ಎಂಬ ಗೇಮಿನ ಬಗ್ಗೆ ಶಿಕ್ಷಣ ಇಲಾಖೆ ಆದೇಶವನ್ನೇ ಹೊರಡಿಸಿ ಸಾವಿನ ಕೇಕೆಗೆ ಎದೆ ಯೊಡ್ಡುತ್ತಿದ್ದ ಮಕ್ಕಳ ನಡಿಗೆಯನ್ನು ಶಾಲೆಗಳ ಕಡೆಗೆ ತಿರುಗಿಸಲು ಸಾಧ್ಯವಾಯಿತು. ಎಲ್ಲೋ ನಡೆಯುತ್ತದೆ ಬಿಡು ನಮಗೇನು ಎಂದು ಉಡಾಫೆ ಮಾಡಿಬಿಟ್ಟಿದ್ದರೆ ಬ್ಲೂವೇಲ್ ಮೈಸೂರಿಗೇ ಬಂದು ಬಲಿ ತೆಗೆದುಕೊಂಡು ಕಿರುಚಾಡುತ್ತಿತ್ತು. ಈ ಸೆಲ್ಫಿ ಗೀಳು ಹಾಗೆಯೇ! ನಮ್ಮ ಯುವ ಮನಸ್ಸುಗಳನ್ನು ಸದ್ದಿಲ್ಲದೇ ಆಕರ್ಷಿಸಿದೆ. ತನ್ನ ಕಬಂಧ ಬಾಹುಗಳಲ್ಲಿ ಅವರದ್ದೇ ಚಿತ್ರ ತೋರಿಸಿ ಬಂಧಿಸುತ್ತಿದೆ. ಯುವಕರಿಗೆ ಸಾಹಸಪ್ರವೃತ್ತಿ ವಯೋಸಹಜವಾಗಿ ರಂಗೇರುತ್ತದೆ ನಿಜ ಹಾಗಂತ ಅದನ್ನು ಪ್ರದರ್ಶಿಸುವ ಮೂಲಕ ಎಲ್ಲರ ಗಮನ ಸೆಳೆದು ತಾವು ಮುಂಚೂಣಿಯಲ್ಲಿರಬೇಕು ಎಂದು ಅವರು ಮಾಡುವ ಎಲ್ಲಾ ಪ್ರಯತ್ನಗಳ ಒಟ್ಟು ಮೊತ್ತದ ಈ ಸೆಲ್ಫಿ ಗೀಳನ್ನು ಅಪಾಯದ ಅಂಚಿನಿಂದ ಅರಿವಿನ ತೀರಕ್ಕೆ ತಂದು ನಿಲ್ಲಿಸಬೇಕು. ಆದರೆ ಬಹಳ ಆತಂಕದ ವಿಷಯ ಏನು ಗೊತ್ತ! ಈ ಸೆಲ್ಫಿ ಗೀಳಿನ ಹಿಂದೆ ಬಿದ್ದಿರುವ ಅಸಂಖ್ಯಾತ ಯುವಕರ ವಯಸ್ಸು 15ರಿಂದ 20ರ ಆಸುಪಾಸು. ಅಂದರೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಓದುತ್ತಿರುವ ವಯಸ್ಸು. ಆ ವಯಸ್ಸು ಹೇಗೆ ಎಂದರೆ ಇಂಥವರ ಕೈಗೆ ಐಫೋನು ಕೊಟ್ಟು ಮಗನ ಮೇಲಿನ ಪ್ರೀತಿಗೋ ಮಗಳ ಮೇಲಿನ ಮಮಕಾರಕ್ಕೋ ಸ್ವಲ್ಪ ಸ್ವೇಚ್ಛೆಯಾಗಿರಲು ಬಿಟ್ಟರೆ ಮಗ ನೋಡಬಾರದ್ದನ್ನೆಲ್ಲಾ ನೋಡಿ ಹಾಳಾಗಿ ಹೋದ ಎನ್ನುವ ಮಾತಿಗೆ ಅರ್ಥ ಬರುವ ಹಾಗೆ ಈ ಕಾಲಕ್ಕೆ ಆವತ್ತೇ ನಮ್ಮ ಹಿರಿಯರು ಬರೆದಿಟ್ಟುಬಿಟ್ಟಿದ್ದಾರೆ, ಹದಿನೆಂಟರಲ್ಲಿ ಕಲಿತ ಚಟ ಅರವತ್ತರಲ್ಲಿ ಬರುವ ಕೆಮ್ಮು ಎರಡೂ ಕೂಡ ಎಂದಿಗೂ ಹೋಗುವುದಿಲ್ಲಾಂತ! ಆದರೆ ಇದ್ಯಾವುದಪ್ಪಾ ಈ ಸೆಲ್ಫಿ ಗೀಳು, ಜೀವಂತವಾಗಿದ್ದವನು ತೆಗೆದ ಅವನದೇ ಫೋಟೋ ಅವನ ಮೊಬೈಲಿನಲ್ಲೇ ದಿವಂಗತ ಫಲಕದಂತೆ ನೇತಾಡುತ್ತಿದೆಯಲ್ಲ! ಅದಕ್ಕೇ ಈ ಸೆಲ್ಫಿ ಜಾಗೃತಿ ಮೂಡಿಸಲೇಬೇಕು. ಒಮ್ಮೆ ವಾಟ್ಸಪ್ ಗ್ರೂಪ್‌ಗಳಲ್ಲಿ ಫೋಟೋ ಹುಚ್ಚಿನ ದೃಶ್ಯವೊಂದು ಹರಿದಾಡುತ್ತಿತ್ತು. ಇಬ್ಬರು ಯುವತಿಯರು ಸರೋವರದ ಬಳಿ ಬರುತ್ತಾರೆ. ಒಬ್ಬಳು ಫೋಟೋಗೆ ಫೋಸ್ ಕೊಡುತ್ತಾ ನಿಲ್ಲುತ್ತಾಳೆ. ಎದುರಿಗಿದ್ದ ಅವಳ ಗೆಳತಿ ಫೋಟೋ ತೆಗೆಯುವಷ್ಟರಲ್ಲಿ ಒಂದು ಮೊಸಳೆ ನೀರಿನಲ್ಲಿ ಮಾಯಾವಿಯಂತೆ ಬಂದು ಅನಾಮತ್ತಾಗಿ ಆಕೆಯನ್ನು ಕಚ್ಚಿಕೊಂಡು ನೀರಿನಲ್ಲಿ ಕಣ್ಮರೆಯಾಗುತ್ತದೆ. ಬಹಳಷ್ಟು ಜನರ ವಾಟ್ಸಪ್‌ನಲ್ಲಿ ಇದು ಓಡಾಡಿದೆ.


ಇದು ನಿಜವೋ ಅಥವಾ ಗ್ರಾಫಿಕ್ಸೋ ಎಂಬ ಅನುಮಾನ ಕೂಡ ನನ್ನಂಥವರನ್ನು ಕಾಡಿದ್ದಿದೆ. ಅದೇನೆ ಇರಲಿ ದೇಶದ ನಾನಾ ಭಾಗಗಳಲ್ಲಿ ಇವತ್ತು ಚಿಕ್ಕದೊಂದು ಸೆಲ್ಫಿ ಹುಚ್ಚಿಗೆ ಬಲಿಯಾಗಿ ಅಮೂಲ್ಯವಾದ ಜೀವವನ್ನೇ ಪಣಕ್ಕಿಡುತ್ತಿರುವ ಈ ಯುವಪಡೆಯ ಈ ಚಿತ್ರೋತ್ಸಾಹಕ್ಕೆ ಕೊನೆ ಯಾವಾಗ? ತಂದೆ–ತಾಯಿಗಳು, ತಮ್ಮ ಮಕ್ಕಳ ಕೈಗೆ ಸೆಲ್ ಫೋನು, ಐಫೋನು ಕೊಟ್ಟು ಸಂಯಮ ಮತ್ತು ತಿಳುವಳಿಕೆ ಕಲಿಸದೇ ಹೋದರೆ ಅವರ ಉತ್ಸಾಹ ಮತ್ತು ಸಾಹಸ ಪ್ರವೃತ್ತಿಗಳು ಪ್ರಾಣಕ್ಕೇ ಕಂಟಕ ತರುವುದರಲ್ಲಿ ಸಂದೇಹವಿಲ್ಲ.


2004ರಿಂದ 2016ರವರೆಗೆ ಜಗತ್ತಿನಲ್ಲಿ ದಾಖಲಾದ ಸೆಲ್ಫಿ ಸಾವುಗಳ ಸಂಖ್ಯೆ 127. ಪಾಕಿಸ್ತಾನದಲ್ಲಿ 9, ರಷ್ಯಾದಲ್ಲಿ 6, ಅಮೆರಿಕಾದಲ್ಲಿ 8, ಭಾರತದಲ್ಲಿ 76. 2024ಕ್ಕೆ ದಾಖಲಾದ ಸೆಲ್ಫಿ ಸಾವುಗಳ ಸಂಖ್ಯೆ ಸರಿಸುಮಾರು 379. ಹಾಗೆ ನೋಡಿದರೆ ಬ್ಲೂವೇಲ್ ಗೇಮಿಗಿಂತ ಇದು ಹೆಚ್ಚಾಗಿಯೇ ಬಲಿ ತೆಗೆದುಕೊಂಡಿದೆ. ಎಷ್ಟೋ ಪ್ರವಾಸಿ ತಾಣಗಳು, ಕಣ್ಣಿಗೆ ಎಷ್ಟು ಆಕರ್ಷಣೀಯವೋ ಅಷ್ಟೇ ಅಪಾಯ ಕಾರಿಯೂ ಹೌದು. ಇವತ್ತಿಗೂ ವೈಲ್ಡ್ ಲೈಫ್ ಫೋಟೋಗ್ರಾಫರ್‌ಗಳು ಅರಣ್ಯದಲ್ಲಿ ತಮ್ಮ ಜೀವ ಪಣಕ್ಕಿಟ್ಟು ಕ್ಯಾಮೆರಾಗೆ ಕಣ್ಣಾಗಬೇಕು. ಪ್ರಾಣಿಗಳಿಗೆ ಗೊತ್ತಾಗದ ಹಾಗೆ ಅವುಗಳ ಚಲನವಲನಗಳನ್ನು ಸೆರೆ ಹಿಡಿಯಬೇಕು. ಕೆಲವು ಕ್ರೂರಮೃಗಗಳಿಗೆ ಅಪ್ಪಿತಪ್ಪಿ ಕ್ಯಾಮೆರಾಮೆನ್ ಫೋಟೋ ಕ್ಯಾಮರಾದ ಫ್ಲಾಶ್ ಆನ್ ಮಾಡಿ ಬಿಟ್ಟಿದ್ದರೆ ಕಥೆ ಮುಗೀತು. ಚೀತಾದಂಥ ಪ್ರಾಣಿಗಳ ಕಣ್ಣಿನ ಮೇಲೆ ಕ್ಯಾಮೆರಾದ ಫ್ಲಾಶ್‌ನ ಬೆಳಕು ಬಿತ್ತೆಂದರೆ ಸಾಕು ಮುಂದಿನ ಘಳಿಗೆಯಲ್ಲಿ ಕ್ಯಾಮೆರವೂ ಇಲ್ಲ. ಛಾಯಾಚಿತ್ರಗ್ರಾಹಕನೂ ಇಲ್ಲ. ಸ್ಟ್ರಿಂಗ್ ರೇ ಎಂಬ ಮೊಸಳೆ ಹಿಡಿಯುವ ತಜ್ಞನೊಬ್ಬ ಅವನು ಎಷ್ಟೇ ಪಳಗಿದ್ದರೂ ಕೊನೆಗೆ ಅದರಿಂದಲೇ ಅವನ ಜೀವಕ್ಕೆ ಸಂಚಕಾರ ಬಂತು. ಫೋಟೋ ಗ್ರಫಿಗಿಂತ ಮುಂಚೆ ಅಗತ್ಯ ಮುನ್ನೆಚ್ಚರಿಕೆಗಳನ್ನು ಸೂಕ್ತ ಭದ್ರತಾ ವ್ಯವಸ್ಥೆಯನ್ನು ನೋಡಿಕೊಂಡೇ ಅಖಾಡಕ್ಕಿಳಿಯುತ್ತಾರೆ. ಆದರೆ ನಮ್ಮ ಯುವಕರು ಯಾವ ಅನುಕೂಲಗಳು ಇಲ್ಲದ ಜಾಗಗಳಲ್ಲಿ, ಯಾವ ಮುಂಜಾಗ್ರತೆಗಳೂ ಇಲ್ಲದ ಪ್ರವಾಸಿತಾಣಗಳಲ್ಲಿ ಅಪ್‌ಲೋಡ್ ಮಾಡಲು ಇಂಥಾ ದುಸ್ಸಾಹಸಗಳಿಗೆ ಮುನ್ಸೂಚನೆ ಇಲ್ಲದೆಯೇ ಇಳಿದುಬಿಡುತ್ತಾರೆ. ಮುಂಗಾರು ಮಳೆ ಸಿನಿಮಾವನ್ನು ಜೋಗ್ ಜಲಪಾತದ ನೆತ್ತಿಯ ಮೇಲೆ ಚಿತ್ರೀಕರಿಸಿ ತೋರಿಸಿದ್ದು ನಿಮಗೆ ನೆನಪಿರಬೇಕು. ಅದಾದ ಮೇಲೆ ಎಷ್ಟೋ ಜನ ಹುಡುಗರು ಕೈಯ್ಯಲ್ಲೊಂದು ಮೊಬೈಲು ಹಿಡಿದು ಗಣೇಶನಿಗಿಂತ ತಾವೇನು ಕಮ್ಮಿ ಅಂತ ಜೋಗದ ದಾರಿ ಹಿಡಿದುಬಿಟ್ಟರು. ಅಷ್ಟರಲ್ಲಿ ಎಚ್ಚೆತ್ತ ಅಲ್ಲಿನ ಆಡಳಿತ ಪೂರ್ವಾನುಮತಿಯಿಲ್ಲದೆ ಪ್ರವೇಶಿಸುವಂತಿಲ್ಲ. ಇದು ನಿಷೇಧಿತ ಪ್ರದೇಶ ಅಂತ ಬೋರ್ಡು ತಗುಲಿಸಿದ ಮೇಲೆ ಅನಾಹುತಗಳು ತಪ್ಪಿದವು. ಈಗಲೂ ಕೊಡಗಿನ ಅಭಿಫಾಲ್ಸ್, ಮಲ್ಲತ್‌ಹಳ್ಳಿ ಜಲಪಾತ, ಬನ್ನೇರುಘಟ್ಟ, ಮೈಸೂರು ಮೃಗಾಲಯ, ಶಿವನಸಮುದ್ರ, ಗಗನಚುಕ್ಕಿ, ಭರಚುಕ್ಕಿ ಜಲಪಾತಗಳು ಇನ್ನೂ ಮುಂತಾದ ಪ್ರವಾಸಿ ತಾಣಗಳ ಅಪಾಯಕಾರಿ ಜಾಗಗಳಲ್ಲಿ ಸೆಲ್ಫಿ ತೆಗೆಯಕೂಡದೆಂದು ನಿಷೇಧಿಸಿದೆ. ಇಷ್ಟಾದರೂ ನಮ್ಮ ಯುವಕ–ಯುವತಿಯರು ಚಲಿಸುವ ರೈಲಿಗೆ ಪೋಸು ಕೊಡಲು ಹೋಗಿ ಸೆಲ್ಫಿ ಗೀಳಿಗೆ ಬಲಿಯಾದವರಿದ್ದಾರೆ. ಹರಿವ ನೀರಿಗೆ ಮೈಯ್ಯೊಡ್ಡಿದ್ದಾರೆ. ಪಾಪ! ಮಕ್ಕಳು ಖುಷಿಯಾಗಿರಲಿ ಅಂತ ಐಫೋನ್ ಕೊಡಿಸಿದರೆ ಅದರಿಂದ ಸಿಗುವ ಮಾಹಿತಿ ಸಂಪರ್ಕ ಇತ್ಯಾದಿ ಒಳ್ಳೇ ಅಂಶಗಳನ್ನು ಬಳಸಿಕೊಂಡು ಅದರ ಸರ್ವೀಸ್ ತೆಗೆದುಕೊಳ್ಳುವುದನ್ನು ಬಿಟ್ಟು, ಈ ಸೆಲ್ಫಿ ಹುಚ್ಚು ಮೈಗೆ ಹತ್ತಿಸಿಕೊಂಡು ನೋಡ ನೋಡುತ್ತಿದ್ದಂತೆಯೇ ಜೀವ ಕಳೆದು ಕೊಂಡು ಬಿಟ್ಟರೆ ಹೆತ್ತವರ ಪಾಡೇನು? 'ಪುತ್ರ ಶೋಕಂ ನಿರಂತರಂ' ಎನ್ನುವ ಡಿಕ್ಲರೇಷನ್ನು ಪೋಷಕರ ಕೈಗೆ ಕೊಟ್ಟು ಹೊರಟುಬಿಡುವ ಮಕ್ಕಳು, ಪೋಷಕರು ಮೊಬೈಲ್ ಕೊಡಿಸಿದ ತಪ್ಪಿಗೆ ಮಕ್ಕಳು ವಾಪಸ್ಸು ಬರದ ಜಾಗಗಳಿಗೆ ಹೊರಟುಬಿಡುತ್ತಾರೆ.

ಮುಂಬೈನ ಬೀಚ್‌ನಲ್ಲಿ, ಮಂಗಳೂರು, ಮರವಂತೆ ಬೀಚ್‌ಗಳಲ್ಲಿ ಸೆಲ್ಫಿ ಹುಚ್ಚಿಗೆ ಬಲಿಯಾದವರ ಸಂಖ್ಯೆ ಸಾಕಷ್ಟಿದೆ. ಯಾವ ಫೇಸ್ ಬುಕ್ಕು, ಟ್ವಿಟರ್, ಥ್ರೆಡ್, ವಾಟ್ಸಪ್‌ಗಳು ಈ ಸೆಲ್ಫಿ ಹುಚ್ಚಿಗೆ ಪ್ರೇರೇಪಿಸಿವೆಯೋ ಅವುಗಳನ್ನೇ ವೇದಿಕೆಯನ್ನಾಗಿ ಮಾಡಿಕೊಂಡು ಸೆಲ್ಫಿ ಅಪಾಯದಿಂದ ಮಕ್ಕಳು, ಯುವಕರು ಎಚ್ಚರ ವಹಿಸಬೇಕು ಎಂಬ ಜಾಗೃತಿಯ ಪೋಸ್ಟ್‌ಗಳನ್ನು ಮಾಡಬೇಕು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಈ ಕೆಲಸವನ್ನು ಪೊಲೀಸರೇ ಮಾಡಬೇಕು. ಸರ್ಕಾರವೇ ಮಾಡಬೇಕು. ಸಂಬಂಧಿಸಿದವರೇ ಕೈಗೆತ್ತಿಕೊಳ್ಳಬೇಕು ಎಂದೇನಿಲ್ಲ. ನಾಗರಿಕ ಸಮಾಜದ ವಾರಸುದಾರರಾದ ನಾವೆಲ್ಲರೂ ಇದರ ಪಾಲುದಾರರೇ. ಎಲ್ಲರೂ ಸೇರಿ ಜನಜಾಗೃತಿ ಮೂಡಿಸುವ ಕೆಲಸಕ್ಕೆ ಕೈಹಾಕಿದರೆ ನಮ್ಮ ತರುಣ ತಲೆಮಾರು ಖಂಡಿತಾ ಸ್ಪಂದಿಸುತ್ತದೆ. ಬ್ಲೂವೇಲ್ ಬಂದಾಗ ಹೀಗೆಯೇ ಗಲಾಟೆ ಮಾಡಿ ಓಡಿಸಿದ್ದೇವೆ. ಈಗ ರೈಲು ಹಳಿಯ ಮೇಲೆ, ಕ್ವಾರಿಯ ಸರೋವರದ ನೀರಿನ ಕೆಳಗೆ ಈ ಸೆಲ್ಫಿ ಗೀಳಿನಿಂದ ಅಳಿದುಹೋದ ಯುವಕರ ದುರಂತದ ಛಾಯೆಗಳಿವೆ. ಅದು ಗೊತ್ತಿದ್ದೂ ಗೊತ್ತಿದ್ದೂ ಮತ್ತದೇ ದಾರಿ ಹಿಡಿಯುತ್ತಿರುವ ನಮ್ಮ ಹುಡುಗರಿಗೊಂದಷ್ಟು ಕಿವಿಮಾತು ಹೇಳಿ ಶಾಲೆ ಕಾಲೇಜುಗಳಲ್ಲಿ ಪಾಠದ ನಡುವೆ ಮಕ್ಕಳ ಹಿತದೃಷ್ಟಿಯಿಂದ ಇಂಥ ಅಪಾಯಗಳಿಂದ ದೂರವಿರುವಂತೆ ಅಧ್ಯಾಪಕರು ಎಚ್ಚರಿಸಬೇಕು.

ದುರಂತ ತಪ್ಪಿಸಿ, ಪೋಷಕರ ಧಾವಂತ ನಿಲ್ಲಿಸಿ ಸೆಲ್ಫಿಗೆ ಊಫಿ ಹೇಳಿ ತರುಣ ತಲೆಮಾರಿನ ಖುಷಿಗೆ ಅಂಕೆ ಶಂಕೆಯ ಮುನ್ನೆಚ್ಚರಿಕೆ ನೀಡಿ ಸರಿದಾರಿಗೆ ತಂದರೇನೆ ಚೌಕಟ್ಟು! ಇಲ್ಲದಿದ್ದರೆ ಬಿಕ್ಕಟ್ಟು! ಏನಂತೀರಿ?

ಸೆಲ್ಫಿ ತೆಗೆದುಕೊಳ್ಳುವಾಗ ಕೆರೆ ಕೋಡಿಯಲ್ಲಿ ಕೊಚ್ಚಿ ಹೋಗಿದ್ದ ವಿದ್ಯಾರ್ಥಿನಿ ರಕ್ಷಣೆ





ತುಮಕೂರು: ಮಂದಾರಗಿರಿ ಬೆಟ್ಟದ ಹಿಂಭಾಗದ ಮೈದಾಳ ಕೆರೆಯ ಕೋಡಿ ನೀರಿನಲ್ಲಿ ಭಾನುವಾರ ಸಂಜೆ ಸೆಲ್ಫಿ ತೆಗೆದುಕೊಳ್ಳುವಾಗ ಕೊಚ್ಚಿ ಹೋಗಿದ್ದ ಹಂಸ (20) ಎಂಬ ವಿದ್ಯಾರ್ಥಿನಿಯನ್ನು ರಕ್ಷಣೆ ಮಾಡಲಾಗಿದೆ.

ಸೆಲ್ಫಿ ತೆಗೆದುಕೊಳ್ಳಲು ಹೋದ ವಿದ್ಯಾರ್ಥಿನಿ ಕೆಳಕ್ಕೆ ಬಿದ್ದು ಪೊಟರೆಯೊಂದರಲ್ಲಿ ಸಿಲುಕಿಕೊಂಡಿದ್ದಳು. ಸೋಮವಾರ ಆಕೆಯನ್ನು ಕಾಪಾಡುವಲ್ಲಿ ರಕ್ಷಣಾ ತಂಡ ಯಶಸ್ವಿಯಾಗಿದೆ. ಸುಮಾರು 12 ಗಂಟೆಗಳ ಕಾರ್ಯಾಚರಣೆ ಬಳಿಕ ಯುವತಿ ಬದುಕಿ ಬಂದಿದ್ದಾರೆ. ಗುಬ್ಬಿ ತಾಲೂಕು ಶಿವರಾಂಪುರದ ನಿವಾಸಿ ಸೋಮನಾಥ್ ಅವರ ಪುತ್ರಿ ಹಂಸ ಅವರು ನಗರದ ಎಸ್‌ಐಟಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿನಿ ಯಾಗಿದ್ದಾರೆ. ಮೈದಾಳ ಕೆರೆ ಕೋಡಿಯಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವಾಗ ಕಾಲು ಜಾರಿ ಬಿದ್ದಿದ್ದರು.

ನೀರಿನಲ್ಲಿ ಜಾರಿ ಹೋಗಿ, ಕಲ್ಲಿನ ಪೊಟರೆಯಲ್ಲಿ ಸಿಲುಕಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ತಡರಾತ್ರಿವರೆಗೂ ರಕ್ಷಣಾ ಕಾರ್ಯಾಚರಣೆ ನಡೆಸಿದ್ದರು. ಆದರೆ ಆಕೆ ಸಿಲುಕಿರುವ ಜಾಗಕ್ಕೆ ಹೋಗುವುದು ಸವಾಲಿನ ಕೆಲಸವಾಗಿತ್ತು. ಹತ್ತಕ್ಕೂ ಹೆಚ್ಚು ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಇದು ವಿಜಯೇಂದ್ರನ ಟೀಂ: ಬಿಜೆಪಿ ವಕ್ಫ್ ತಂಡಕ್ಕೆ ಯತ್ನಾಳ್ ಬಹಿಷ್ಕಾರ

ವಿಜಯಪುರ: ಇದು ವಿಜಯೇಂದ್ರನ ತಂಡ. ಇದಕ್ಕೆ ನಮ್ಮ ಬಹಿಷ್ಕಾರ ಇದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಕಿಡಿಕಾರಿದ್ದಾರೆ.

ಜಿಲ್ಲೆಯಲ್ಲಿ ವಕ್ಫ್ ದಂಗಲ್ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರ ಅಹವಾಲು ಸ್ವೀಕರಿಸಲು ಬಿಜೆಪಿಯಿಂದ ಸಂಸದ ಗೋವಿಂದ ಕಾರಜೋಳ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಹಾಲಿ ಸಂಸದ, ಶಾಸಕ ನಾನು ಇದ್ದೇನೆ. ನಮ್ಮನ್ನ ಹೊರಗಿಟ್ಟು ತಂಡ ರಚಿಸಿದ್ದಾರೆ. ಇದು ವಿಜಯೇಂದ್ರನ ತಂಡಕ್ಕೆ ನಾನು ಬಹಿಷ್ಕಾರ ಹಾಕಿದ್ದೇನೆ. ವಕ್ಫ್ ವಿರುದ್ಧ ಮೊದಲು ಹೋರಾಟ ಪ್ರಾರಂಭಿಸಿದ್ದೇ ನಾನು. ವಿಜಯೇಂದ್ರ ನನ್ನನ್ನು ತುಳಿಯಲು ಸಾಧ್ಯವಿಲ್ಲ ಎಂದು ವಾಗ್ದಾಳಿ ನಡೆಸಿದರು.

ರೈತರ ಅಹವಾಲು ಆಲಿಸಲು ಮಾಜಿ ಡಿಸಿಎಂ, ಸಂಸದ ಗೋವಿಂದ ಕಾರಜೋಳ ಹಾಗೂ ಶಾಸಕರ ಸೇರಿ ರಚನೆ ಮಾಡಿದೆ. ತಂಡ ನಾಳೆಯೇ (ಅ.29) ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅಹವಾಲು ಆಲಿಸಲಿದ್ದಾರೆ. ಸಂಸದ ಗೋವಿಂದ ಕಾರಜೋಳ, ಶಾಸಕ ಹರೀಶ್ ಪೂಂಜಾ, ಶಾಸಕ ಮಹೇಶ ಟೆಂಗಿನಕಾಯಿ, ಮಾಜಿ ಎಂಎಲ್‌ಸಿ ಅರುಣ್ ಶಹಾಪುರ ಹಾಗೂ ಮುಖಂಡ ಕಲ್ಮರುಡಪ್ಪ ಸೇರಿದಂತೆ ಹಲವು ಶಾಸಕರನ್ನು ತಂಡ ಒಳಗೊಂಡಿದೆ. ಆದರೆ ವಿಜಯಪುರ ನಗರ ಶಾಸಕನಾಗಿರುವ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಸಂಸದ ರಮೇಶ್ ಜಿಗಜಿಣಗಿಗೆ ತಂಡದಲ್ಲಿ ಸ್ಥಾನವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದು ವಿಜಯೇಂದ್ರ ಟೀಮ್. ಎಲ್ಲಾ ಮುಗಿದ ಮೇಲೆ ಟೀಂ ಮಾಡಿದ್ದಾರೆ. ಇದು ಕಾಟಾಚಾರಕ್ಕೆ ಮಾಡಿದ ಟೀಂ ಹಾಗಾಗಿ ನಾನು ಹಾಗೂ ಸಂಸದರು ಬಿಜೆಪಿ ತಂಡಕ್ಕೆ ಬಹಿಷ್ಕಾರ ಹಾಕಿದ್ದೇವೆ. ಹಿಂದೆ ಯಡಿಯೂರಪ್ಪ ಸಿಎಂ ಇದ್ದಾಗ ಜಮೀರ್ ಅಹ್ಮದ್ ಖಾನ್‌ಗೆ 1,000 ಕೋಟಿ ರೂ. ಅನುದಾನ ನೀಡಿದ್ದರು. ಇದನ್ನು ನಾನು ಪ್ರಸ್ತಾಪಿಸಿ ವಿರೋಧ ಮಾಡಿದ್ದಕ್ಕೆ ಅದನ್ನು ವಾಪಸ್ ಪಡೆದರು. ಪಬ್ಲಿಕ್ ಟಿವಿಯಲ್ಲಿ ರಂಗನಾಥ್ ಇದರ ಬಗ್ಗೆ ಪ್ರಸ್ತಾಪಿಸಿದ ಮೇಲೆ ಹಿಂಪಡೆದರು. ಪೂಜ್ಯ ತಂದೆಯವರು ಕಿರಿಯ ಮಗ ಜಮೀರ್‌ಗೆ ಸಾವಿರ ಕೋಟಿ ರೂ. ಅನುದಾನ ನೀಡಿದ್ದರು. ರೂಪಾಯಿ ಅನುದಾನ ನೀಡಲು ಏನಾದರೂ ತೆಗೆದುಕೊಂಡಿರಬೇಕಲ್ಲ ಎಂದು ಕುಟುಕಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಮಂಗಳವಾರ 29 ಅಕ್ಟೋಬರ್ 2024

ಪದವಿ ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಕ್ರಾಫರ್ಡ್‌ಹಾಲ್ ಮುಂಭಾಗ ಎಐಡಿಎಸ್‌ಓ ವತಿಯಿಂದ ಪದವಿ ಪರೀಕ್ಷೆಯನ್ನು ಮುಂದೂಡುವಂತೆ ಆಗ್ರಹಿಸಿ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಅ.28(ಜಿಎ)–ಪದವಿ ಪರೀಕ್ಷೆಯನ್ನು ಮುಂದೂಡಿ, ಪರೀಕ್ಷಾ ಶುಲ್ಕ ಏರಿಕೆಯನ್ನು ಹಿಂಪಡೆಯ ಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಕ್ರಾಫರ್ಡ್ ಹಾಲ್ ಮುಂದೆ ನೂರಾರು ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷೆ ಚಂದ್ರಕಲಾ ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಯುಜಿ ವಿದ್ಯಾರ್ಥಿಗಳ ಪರೀಕ್ಷಾ ನೋಟಿಫಿಕೇಶನ್ ಪ್ರಕಾರ ನವೆಂಬರ್ 15ರಿಂದ ಪರೀಕ್ಷೆಗಳು ಪ್ರಾರಂಭವಾಗಲಿವೆ ಎಂದು ತಿಳಿಸಿದ್ದಾರೆ. ಆದರೆ, ಕಾಲೇಜುಗಳು ಆಗಸ್ಟ್‌ನಲ್ಲೆ ಪ್ರಾರಂಭವಾದರೂ ಅತಿಥಿ ಉಪನ್ಯಾಸಕರ ಕೊರತೆಯಿಂದಾಗಿ ತರಗತಿಗಳು ನಡೆದಿಲ್ಲ. ಒಂದೂವರೆ ತಿಂಗಳಿನ ನಂತರ ತರಗತಿಗಳು ಪ್ರಾರಂಭವಾಗಿವೆ. ಇದರಿಂದ ಪಠ್ಯಕ್ರಮಗಳ ಬೋಧನೆ ಸಂಪೂರ್ಣವಾಗಿ ಮುಗಿದಿಲ್ಲ. ಪಠ್ಯಕ್ರಮ ಪೂರ್ಣಗೊಳ್ಳದೆ ಪರೀಕ್ಷೆ ನಡೆಸುವುದು ಅವೈಜ್ಞಾನಿಕ. ಇದು ವಿದ್ಯಾರ್ಥಿಗಳ ಮೇಲೆ ಒತ್ತಡವನ್ನು ಉಂಟು ಮಾಡುತ್ತದೆ. ಆದ್ದರಿಂದ ಪರೀಕ್ಷೆಗಳನ್ನು ಮುಂದೂಡಬೇಕು ಎಂದು ಆಗ್ರಹಿಸಿದರು.

ಪದವಿ ಪರೀಕ್ಷೆಯ ಶುಲ್ಕ ಪ್ರತಿ ವರ್ಷವೂ ಮನಸೋ ಇಚ್ಛೆ ಏರಿಕೆಯಾಗುತ್ತಿದೆ. ಸರ್ಕಾರಿ ಪದವಿ ಕಾಲೇಜುಗಳನ್ನು ಅರಸಿ ಬರುವ ಬಡ ವಿದ್ಯಾರ್ಥಿಗಳಿಂದ 2,000 ರೂ. ಪರೀಕ್ಷಾ ಶುಲ್ಕ ಸಂಗ್ರಹ ಮಾಡುತ್ತಿದ್ದಾರೆ. ತೃತೀಯ ಸೆಮಿಸ್ಟರ್ ಓದುತ್ತಿರುವ ಮತ್ತು ಪದವಿಯನ್ನೇ ಮುಗಿಸಿರುವ ವಿದ್ಯಾರ್ಥಿಗಳಿಗೆ ಯಾವುದೇ ಸೆಮಿಸ್ಟರ್‌ನ ಅಂಕಪಟ್ಟಿಯೇ ಸಿಕ್ಕಿಲ್ಲವಾದರೂ ಅಂಕಪಟ್ಟಿಯ ಶುಲ್ಕವನ್ನು ಪ್ರತಿ ವರ್ಷವೂ ಕಟ್ಟಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಈ ಶುಲ್ಕ ಪ್ರತಿ ವರ್ಷವೂ ಏರಿಕೆ ಆಗುತ್ತಿದೆ. ಆದ್ದರಿಂದ ಹೆಚ್ಚುವರಿ ಶುಲ್ಕವನ್ನು ಈ ಕೂಡಲೇ ಕೈ ಬಿಡಬೇಕು ಮತ್ತು ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಅಂಕಪಟ್ಟಿಗಳನ್ನು ವಿತರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ನಿತಿನ್, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಹೇಮ, ಅಂಜಲಿ, ಅಭಿಷೇಕ್, ಮಹಾರಾಜ, ಮಹಾರಾಣಿ ಕಾಲೇಜಿನ ವಿದ್ಯಾರ್ಥಿಗಳಾದ ಗುರುರಾಜ್, ಸತೀಶ್, ಸಂತೋಷ್, ಜ್ಞಾನೇಶ್, ಹರ್ಷತ್, ಭೂಮಿಕ, ಅರ್ಚನಾ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಜ್ಯದಲ್ಲೀಗ ವಕ್ಫ್ ಬೋರ್ಡ್‌ನಿಂದ ಲ್ಯಾಂಡ್ ಜಿಹಾದ್ ನಡೆಯುತ್ತಿದೆ

- ವಿಪಕ್ಷ ನಾಯಕ ಆರ್.ಅಶೋಕ್ ಆರೋಪ
- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆಗೆ ಆಗ್ರಹ

ಬೆಂಗಳೂರು, ಅ.28(ಕೆಎಂಶಿ)– ಬಡ ರೈತರ ಜಮೀನುಗಳನ್ನು ಕಬಳಿಸಲು ವಕ್ಫ್ ಬೋರ್ಡ್‌ನಿಂದ 'ಲ್ಯಾಂಡ್ ಜಿಹಾದ್' ಪ್ರಯತ್ನ ನಡೆಯುತ್ತಿರುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ಸ್ಪಷ್ಟೀಕರಣ ನೀಡಬೇಕೆಂದು ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ಆರ್.ಅಶೋಕ್ ಇಂದಿಲ್ಲಿ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಕರ್ನಾಟಕದ ಒಂದು ಸಮುದಾಯಕ್ಕೆ ಸೇರಿದ್ದು ಎಂಬಂತೆ ಆಡಳಿತ ಮಾಡುತ್ತಿದೆ. ತುಷ್ಟೀಕರಣ ರಾಜಕಾರಣದಿಂದ ಹಿಂದೂಗಳ ಮೇಲೆ ಹಲ್ಲೆ ಹೆಚ್ಚುತ್ತಿದೆ, ಗಣೇಶ ವಿಸರ್ಜನೆಗೆ ಅವಕಾಶವಿಲ್ಲ, ಹಿಂದೂಗಳು ಜೈ ಶ್ರೀರಾಮ್ ಎನ್ನುವಂತಿಲ್ಲ, ಹಿಂದೂಗಳಿಗೆ ಭದ್ರತೆ ಇಲ್ಲದಂತಾಗಿದೆ. ವಿಜಯಪುರ ಜಿಲ್ಲೆಯ ಹೊನವಾಡ ಗ್ರಾಮದಲ್ಲಿ ಸುಮಾರು 12 ಸಾವಿರ ಹಾಗೂ ಇಡೀ ಜಿಲ್ಲೆಯಲ್ಲಿ ಒಟ್ಟಾರೆಯಾಗಿ 15 ಸಾವಿರ ಎಕರೆ ಭೂಮಿ ಕಬಳಿಸಲು ವಕ್ಫ್ ಬೋರ್ಡ್ ಯೋಜನೆ ರೂಪಿಸಿದೆ. ಇದಕ್ಕಾಗಿ ಕಂದಾಯ ಇಲಾಖೆಯಿಂದ 139 ರೈತರಿಗೆ ತಿಳಿವಳಿಕೆ ನೋಟಿಸ್ ನೀಡಲಾಗಿದೆ. ಇದು ಸರ್ಕಾರದಿಂದಲೇ ನಡೆಯುತ್ತಿರುವ ಲ್ಯಾಂಡ್ ಜಿಹಾದ್ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದಲ್ಲಿ ಬಾಂಬ್ ಸ್ಫೋಟ ಘಟನೆ, ಪಾಕಿಸ್ತಾನ ಪರ ಜೈಕಾರ, ಲವ್ ಜಿಹಾದ್‌ನಿಂದ ಹಿಂದೂ ಯುವತಿಯರು ಸಾಯುತ್ತಿದ್ದು, ಈಗ ಲ್ಯಾಂಡ್ ಜಿಹಾದ್ ಆರಂಭವಾಗಿದೆ ಎಂದಿದ್ದಾರೆ. ಕಳೆದ ತಿಂಗಳು ವಿಜಯಪುರ ಜಿಲ್ಲೆಗೆ ಬಂದಿದ್ದ ಸಚಿವ ಜಮೀರ್ ಅಹ್ಮದ್, ಗೆಜೆಟ್ ಆಗಿರುವ ಆಸ್ತಿಗಳಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಲು ಮೌಖಿಕ ಆದೇಶ ಮಾಡಿದ್ದಾರೆ. ಈ ಮೂಲಕ ಸರ್ಕಾರದಿಂದಲೇ ಅಧಿಕೃತವಾಗಿ ಒತ್ತುವರಿ ನಡೆಯುತ್ತಿದೆ. ಈ ಹಿಂದೆ ಟಿಪ್ಪು ಸುಲ್ತಾನ್, ಔರಂಗಜೇಬ್‌ನಂತಹ ಮತಾಂಧರು ಹಿಂದೂಗಳ ಭೂಮಿ, ಉದ್ಯೋಗ, ಬದುಕು ಕಿತ್ತುಕೊಂಡು ಮತಾಂತರ ಮಾಡಿದ್ದರು, ಈಗ ರೈತರ ಭೂಮಿ ಕಿತ್ತುಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.



ಸಚಿವ ಜಮೀರ್ ಅಹ್ಮದ್, ಆಧುನಿಕ ಟಿಪ್ಪು ಸುಲ್ತಾನ್ ಆಗಲು ಹೊರಟಿದ್ದಾರೆ. ಈ ರೀತಿ ಬಡ ರೈತರ ಭೂಮಿ ಕಸಿದು, ಮುಖ್ಯಮಂತ್ರಿ ಆಗುವ ಯೋಜನೆ ರೂಪಿಸಲಾಗಿದೆ. ಒಂದು ಕಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾ ನಿವೇಶನ ಲೂಟಿ ಮಾಡಿದರೆ, ಮತ್ತೊಂದೆಡೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬ ಸಿಎ ನಿವೇಶನ ಲೂಟಿ ಮಾಡುತ್ತಿದೆ. ಈಗ ಜಮೀರ್ ಅಹಮದ್ ಸಹ ಈ ಪಟ್ಟಿಗೆ ಸೇರಿ ಭೂಮಿ ಕೊಳ್ಳೆ ಹೊಡೆದು ವಕ್ಫ್‌ಗೆ ಸೇರಿಸಲು ತಂತ್ರ ಮಾಡಿದ್ದಾರೆ. ವಕ್ಫ್ ಆಸ್ತಿ ಹೆಸರಿನಲ್ಲಿ ಲ್ಯಾಂಡ್ ಜಿಹಾದ್ ಮಾಡಲು ಹೊರಟಿರುವ ಕಾಂಗ್ರೆಸ್ ಸರ್ಕಾರದ ದೌರ್ಜನ್ಯ ವಿರೋಧಿಸಿ ವಿಜಯಪುರದ ರೈತರು ಈ ವರ್ಷ ದೀಪಾವಳಿ ಆಚರಿಸದಿರಲು ನಿರ್ಧರಿಸಿದ್ದಾರೆ. ಅನ್ನ ನೀಡುವ ರೈತರ ಭೂಮಿಗೆ ಕನ್ನ ಹಾಕಿ, ರೈತರ ಮನೆ ದೀಪ ಕಸಿದುಕೊಂಡ ಕಾಂಗ್ರೆಸ್ ಸರ್ಕಾರಕ್ಕೆ ಅನ್ನದಾತರ ಶಾಪ ತಟ್ಟದೇ ಇರದು.

ಮಾಹಿತಿ ನೀಡಲು ನಿರಾಕರಣೆ: ಕೇಂದ್ರದ ಉದ್ದೇಶಿತ ವಕ್ಫ್ ಕಾಯ್ದೆ ತಿದ್ದುಪಡಿ ಪ್ರಸ್ತಾವಕ್ಕೆ ರಾಜ್ಯ ವಕ್ಫ್ ಬೋರ್ಡ್ ವಿರೋಧ ವ್ಯಕ್ತಪಡಿಸಿದೆ. ವಕ್ಫ್ ಬೋರ್ಡ್ ಆಡಳಿತ ಮಂಡಳಿ ಸಭೆಯಲ್ಲಿ ತಿದ್ದುಪಡಿ ಕಾಯ್ದೆ ವಿರೋಧಿಸಿ ನಿರ್ಣಯ ಕೈಗೊಳ್ಳಲಾಗಿದೆ, ಕೇಂದ್ರ ಸರ್ಕಾರ ಜಂಟಿ ಸಂಸದೀಯ ಸಮಿತಿ ರಚಿಸಿ, ಎಲ್ಲ ವಕ್ಫ್ ಬೋರ್ಡ್‌ಗಳಿಂದ ಮಾಹಿತಿ ಕೇಳಿದೆ. ಆದರೆ ಕರ್ನಾಟಕದ ವಕ್ಫ್ ಬೋರ್ಡ್ ಇದನ್ನು ವಿರೋಧಿಸಿದೆ, ನಾವು ಮಾಹಿತಿ ಕೊಡಲ್ಲ, ನಮ್ಮದು ಸ್ವಾಯತ್ತ ಸಂಸ್ಥೆ ಎಂದು ಸಚಿವ ಜಮೀರ್ ಅಹಮದ್ ಹೇಳಿದ್ದಾರೆ.

ಬೋರ್ಡ್‌ನ ಹಳೆಯ ಎಲ್ಲ ನಿಯಮ, ಕಾನೂನುಗಳಿಗೆ ಪ್ರಧಾನಿ ಮೋದಿ ಸರ್ಕಾರ ಬದಲಾವಣೆ ತರಲು ಮುಂದಾಗಿದೆ, ಇದಕ್ಕೂ ಮುನ್ನ ಆದಷ್ಟು ಪ್ರಮಾಣದಲ್ಲಿ ಕರ್ನಾಟಕದಲ್ಲಿ ಭೂಮಿ ಕಬಳಿಸಬೇಕೆಂಬ ಉದ್ದೇಶದಿಂದ ಲ್ಯಾಂಡ್ ಜಿಹಾದ್ ನಡೆಸಲಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಮುಸ್ಲಿಮರಿಗೆ ಭೂಮಿ ಕಬಳಿಕೆ ಮಾಡಿಕೊಡುವ ಬದಲು, ಕೇಂದ್ರ ಸರ್ಕಾರದ ಜಂಟಿ ಸಲಹಾ ಸಮಿತಿ ಜೊತೆ ಚರ್ಚೆ ಮಾಡಲಿ, ಸ್ವತಂತ್ರವಾಗಿ ಕ್ರಮ ಕೈಗೊಳ್ಳುವ ಅಧಿಕಾರ ಯಾರಿಗೂ ಇಲ್ಲ, ವಿಜಯಪುರ ಜಿಲ್ಲೆಯಲ್ಲಿ ದೇವಸ್ಥಾನ, ಗುಡಿಗಳು ಇವೆ, ಎಷ್ಟು ದೇವಾಲಯಗಳಿಗೆ ನೋಟಿಸ್ ನೀಡಲಾಗಿದೆ ಎಂಬುದನ್ನು ಸರ್ಕಾರ ಬಹಿರಂಗಪಡಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಕುರಿತು ಸ್ಪಷ್ಟನೆ ನೀಡಬೇಕು, ಇದು ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ಇತ್ತೇ ಎಂಬುದನ್ನು ತಿಳಿಸಬೇಕು, ರೈತರು ಕಂಗಾಲಾಗಿದ್ದಾರೆ, ಹಿಂದೂಗಳಿಗೆ ಭಯ ಶುರುವಾಗಿದೆ, ಈ ಸಮಯದಲ್ಲಿ ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಂಡು ಜನರಿಗೆ ಸೂಕ್ತ ಮಾಹಿತಿ ಹಾಗೂ ಸ್ಪಷ್ಟೀಕರಣ ನೀಡಬೇಕು ಎಂದು ಆರ್.ಅಶೋಕ್ ಒತ್ತಾಯಿಸಿದ್ದಾರೆ.

ಟಾಟಾ ವಿಮಾನ ತಯಾರಿಕಾ ಸಂಕೀರ್ಣಕ್ಕೆ ಪ್ರಧಾನಿ ಮೋದಿ, ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಚಾಲನೆ



ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಗುಜರಾತ್‌ನ ವಡೋದರಾದಲ್ಲಿ ಟಾಟಾ ಏರ್ ಬಸ್ ತಯಾರಿಕಾ ಘಟಕವನ್ನು ಉದ್ಘಾಟಿಸಿದರು.

ವಡೋದರಾ: ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಗುಜರಾತ್‌ನ ವಡೋದರಾ ನಗರದಲ್ಲಿ ಟಾಟಾ ಏರ್ ಬಸ್ ತಯಾರಿಕಾ ಘಟಕವನ್ನು ಉದ್ಘಾಟಿಸಿದರು.

ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ಕ್ಯಾಂಪಸ್‌ನಲ್ಲಿ ಸಿ–295 ವಿಮಾನ ತಯಾರಿಕಾ ಸಂಕೀರ್ಣವನ್ನು ಸ್ಥಾಪಿಸಲಾಗಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಅ–295 ಸೌಲಭ್ಯ ನವ ಭಾರತದ ಕೆಲಸದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ನಾನು ಗುಜರಾತ್ ಸಿಎಂ ಆಗಿದ್ದಾಗ ವಡೋದರಾದಲ್ಲಿ ರೈಲು ಬೋಗಿಗಳ ತಯಾರಿಕೆ ಕಾರ್ಖಾನೆ ಸ್ಥಾಪಿಸಲು ನಿರ್ಧರಿಸಲಾಗಿತ್ತು. ಇಂದು ನಾವು ಆ ಕಾರ್ಖಾನೆಯಲ್ಲಿ ತಯಾರಿಸಿದ ಮೆಟ್ರೋ ಕೋಚ್‌ಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ಭವಿಷ್ಯದಲ್ಲಿ ಇಲ್ಲಿನ ಕಾರ್ಖಾನೆಯಲ್ಲಿ ತಯಾರಾದ ವಿಮಾನಗಳನ್ನು ಇತರ ದೇಶಗಳಿಗೂ ರಫ್ತು ಮಾಡುವ ಭರವಸೆಯಿದೆ ಎಂದರು.

ಸ್ಪೇನ್ ಪ್ರಧಾನಿ ಸ್ಯಾಂಚೆಜ್ ಮಾತನಾಡಿ, ಹೊಸ ಕೈಗಾರಿಕಾ ತಾಣದ ಪ್ರಾಮುಖ್ಯತೆಯನ್ನು ಒತ್ತಿಹೇಳಿದರು. ಟಾಟಾ ಸಮೂಹವನ್ನು "ದೈತ್ಯರಲ್ಲಿ ದೈತ್ಯ" ಎಂದು ಗುಣಗಾನ ಮಾಡಿದರು. ಇಂದು ನಾವು ಅತ್ಯಾಧುನಿಕ ಕೈಗಾರಿಕಾ ಸೌಕರ್ಯವನ್ನು ಮಾತ್ರ ಅಧಿಕೃತವಾಗಿ ಉದ್ಘಾಟಿಸುತ್ತಿಲ್ಲ. ಏರ್‌ಬಸ್ ಮತ್ತು ಟಾಟಾ ನಡುವಿನ ಈ ಪಾಲುದಾರಿಕೆಯು ಭಾರತೀಯ ಏರೋಸ್ಪೇಸ್ ಉದ್ಯಮದ ಪ್ರಗತಿಗೆ ಕೊಡುಗೆ ನೀಡುತ್ತದೆ. ಅಲ್ಲದೇ ಇತರ ಯುರೋಪಿಯನ್ ಕಂಪನಿಗಳ ಆಗಮನಕ್ಕೆ ಹೊಸ ಬಾಗಿಲು ತೆರೆಯುತ್ತದೆ ಎಂದರು.

ಟಾಟಾ ಬಹುಶಃ ಭಾರತೀಯ ಕೈಗಾರಿಕಾ ಕ್ಷೇತ್ರದ ಬಲವಾಗಿದೆ. ಇದರ ಉತ್ಪನ್ನಗಳು ಮತ್ತು ಸೇವೆಗಳು ಗ್ರಹದ ಮೇಲಿನ ಪ್ರತಿಯೊಂದು ದೇಶದಲ್ಲಿಯೂ ಇವೆ. ಸ್ಪೇನ್‌ಗಾಗಿ, ಏರ್‌ಬಸ್ ಒಕ್ಕೂಟದ ಅವಿಭಾಜ್ಯ ಅಂಗವಾಗಿರುವುದರಿಂದ, ಅದು ಪ್ರತಿನಿಧಿಸುವ ಮೌಲ್ಯಗಳನ್ನು ರಕ್ಷಿಸುತ್ತದೆ. ಇದು ಯುರೋಪಿನ ಸಹಕಾರ, ಆಧುನಿಕತೆ ಹಾಗೂ ಪ್ರಗತಿಯನ್ನು ಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ಇದಕ್ಕೂ ಮುನ್ನಾ, ಉಭಯ ದೇಶಗಳ ಪ್ರಧಾನಿ ಭರ್ಜರಿ ರೋಡ್‌ಶೋ ನಡೆಸಿದರು. ವಿಮಾನ ನಿಲ್ದಾಣದಿಂದ ಟಾಟಾ ವಿಮಾನ ತಯಾರಿಕಾ ಸಂಕೀರ್ಣದವರೆಗೂ 2.5 ಕಿ.ಮೀ ದೂರ ತೆರೆದ ಜೀಪ್‌ನಲ್ಲಿ ಪ್ರಯಾಣಿಸಿದ ಉಭಯ ದೇಶಗಳ ನಾಯಕರನ್ನು ಮಾರ್ಗದ ಎರಡೂ ಬದಿಗಳಲ್ಲಿ ನಿಂತಿದ್ದ ಜನರು ಹರ್ಷೋದ್ಗಾರ ಮತ್ತು ಘೋಷಣೆ ಕೂಗುವುದರೊಂದಿಗೆ ಸ್ವಾಗತಿಸಿದರು. ಭಾರತದ ಶ್ರೀಮಂತ ಸಂಸ್ಕೃತಿಯನ್ನು ಪ್ರದರ್ಶಿಸುವ ವಿವಿಧ ಕಲಾವಿದರ ಪ್ರದರ್ಶನ ಆಕರ್ಷಣೀಯವಾಗಿತ್ತು. ವಿಮಾನ ತಯಾರಿಕೆ ಸಂಕೀರ್ಣ ಉದ್ಘಾಟನೆ ನಂತರ ಉಭಯ ನಾಯಕರು ದ್ವಿಪಕ್ಷೀಯ ಸಭೆ ನಡೆಸಲು ಐತಿಹಾಸಿಕ ಲಕ್ಷ್ಮಿ ವಿಲಾಸ್ ಅರಮನೆಗೆ ತೆರಳಿದರು.

2021ರ ಸೆಪ್ಟೆಂಬರ್‌ನಲ್ಲಿ ಭಾರತ 56 ಸಿ–295 ವಿಮಾನಗಳನ್ನು ಸೇರ್ಪಡೆಗೊಳಿಸಲು ಏರ್ ಬಸ್ ಡಿಫೆನ್ಸ್ ಮತ್ತು ಸ್ಪೇನ್ ಸಂಸ್ಥೆಯೊಂದಿಗೆ ರೂ. 21 ಸಾವಿರ ಕೋಟಿ ಒಪ್ಪಂದಕ್ಕೆ ಸಹಿ ಹಾಕಿತ್ತು. ಈ ಒಪ್ಪಂದದ ಪ್ರಕಾರ ಸ್ಪೇನ್ ಮುಂದಿನ 4 ವರ್ಷಗಳಲ್ಲಿ 16 ಯುದ್ಧ ವಿಮಾನಗಳನ್ನು ರವಾನಿಸಲಾಗಿದೆ. ಉಳಿದ 40 ವಿಮಾನಗಳನ್ನು 2 ಕಂಪನಿಗಳ ನಡುವಿನ ಒಪ್ಪಂದದ ಭಾಗವಾಗಿ ಈಗ ಉದ್ಘಾಟಿಸಲಾದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್‌ನಲ್ಲಿ ತಯಾರಿಸಲಾಗುತ್ತದೆ.

ಪಿಡಿಓಗಳು ಆರೋಗ್ಯ ತಪಾಸಣೆ; ಕಾರ್ಯಾಗಾರಕ್ಕೆ ಹಾಜರಾಗುವಂತೆ ಸೂಚನೆ

ಮೈಸೂರು,ಅ.28–ಜಿಲ್ಲಾ ಪಂಚಾಯತಿ ವ್ಯಾಪ್ತಿಗೊಳಪಡುವ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಅ.29ರಂದು ಬೆಳಗ್ಗೆ 08 ಗಂಟೆಗೆ ಜಿಲ್ಲಾ ಪಂಚಾಯತಿ ಕಚೇರಿಯ ಮುಖ್ಯ ಸಭಾಂಗಣದಲ್ಲಿ ಆಯೋಜಿಸಿರುವ 'ಆರೋಗ್ಯ ತಪಾಸಣೆ' ಹಾಗೂ ಬೆಳಗ್ಗೆ 10 ಗಂಟೆಗೆ ಏರ್ಪಡಿಸಿರುವ ಕಾರ್ಯಾಗಾರಕ್ಕೆ ಹಾಜರಾಗುವಂತೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಯನ ತರಬೇತಿ ಶಿಬಿರ

ಮೈಸೂರು, ಅ. 28– ಮೈಸೂರಿನ ಪದ್ಮಪಾಣಿ ಲಲಿತಕಲಾ ಅಕಾಡೆಮಿ ವತಿಯಿಂದ ನ.4ರಿಂದ 25ರವರೆಗೆ ಗಾಯನ ತರಬೇತಿ ಶಿಬಿರವನ್ನು ಮೈಸೂರು ವಿವಿ ಗಾಂಧಿ ಭವನದಲ್ಲಿ ಪ್ರತಿದಿನ ಸಂಜೆ 5ರಿಂದ 6.30 ರವರೆಗೆ ನಡೆಸಲಾಗುವುದು. ಶಿಬಿರದಲ್ಲಿ ಜನಪದ, ತತ್ವಪದ, ಭಾವಗೀತೆ, ದೇಶಭಕ್ತಿ ಗೀತೆ, ಪರಿವರ್ತನ ಗೀತೆ, ಪ್ರಗತಿಪರ ಗೀತೆ, ಪ್ರಕೃತಿ ಗೀತೆ, ವ್ಯಕ್ತಿ ವಿಕಸನ ಗೀತೆ, ವಚನಗಳು ಮುಂತಾದ ಪ್ರಕಾರದ ಹಾಡುಗಳನ್ನು ನುರಿತ ಅನುಭವಿ ಗಾಯಕರಿಂದ ರಾಗ, ತಾಳ, ಲಯ, ಶೃತಿಬದ್ಧವಾಗಿ ಕಲಿಸಿಕೊಡಲಾಗುವುದು. ಶಿಬಿರಕ್ಕೆ 10 ರಿಂದ 30ನೇ ವಯಸ್ಸಿನವರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಮೊ. 9590405072, 7619507455 ಸಂಪರ್ಕಿಸಬಹುದು.

ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಅ. 28– ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಅ.31 ರಂದು ಬೆಳಗ್ಗೆ 10 ಗಂಟೆಯಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನ ಸೇವಾ ಸಮಿತಿಗೆ ಮೊದಲ ಬಹುಮಾನ



ಮೈಸೂರಿನ ಕನ್ನೇಗೌಡನಕೊಪ್ಪಲು ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನ ಸೇವಾ ಸಮಿತಿಗೆ 2024ರ ಮೈಸೂರು ದಸರಾ ಫಲಪುಷ್ಪ ಪ್ರದರ್ಶನದಲ್ಲಿ ದೇವಸ್ಥಾನದ ಗಾರ್ಡನ್‌ಗೆ ಮೊದಲನೇ ಬಹುಮಾನ ಲಭಿಸಿದೆ. ಚಿತ್ರದಲ್ಲಿ ಸೇವಾ ಸಮಿತಿಯ ಅಧ್ಯಕ್ಷ ಎಸ್.ಬಾಲು, ಗೌರವ ಅಧ್ಯಕ್ಷ ರಾಜಣ್ಣ, ಎಂ.ಶಿವಕುಮಾರ್, ಉಪಾಧ್ಯಕ್ಷ ಕುಮಾರಗೌಡ, ಕಾರ್ಯದರ್ಶಿ ರಮೇಶ್, ಖಜಾಂಚಿ ಪುಟ್ಟಸ್ವಾಮಿ, ಪ್ರಧಾನ ಕಾರ್ಯದರ್ಶಿ ಬ್ಯಾಂಕ್ ರಾಜ, ಕೆ.ದೇವೇಗೌಡ, ಸದಸ್ಯರಾದ ಸಿ.ರಮೇಶ್, ಚೆನ್ನಪ್ಪ, ಜಗದೀಶ್, ಶ್ರೀನಿವಾಸ್, ಶಂಬಣ್ಣ, ರಾಜ್‌ಕುಮಾರ್ ಇತರರಿದ್ದಾರೆ.

ಇಂದು ಜಾಗತಿಕ ಆಯುರ್ವೇದದ ಆವಿಷ್ಕಾರಗಳು, ಮಹಿಳಾ ಸಬಲೀಕರಣಕ್ಕಾಗಿ ಆಯುರ್ವೇದ ಘೋಷ ವಾಕ್ಯ ಕಾರ್ಯಕ್ರಮ

ಮೈಸೂರು,ಅ.28– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಆಯುಷ್ ಇಲಾಖೆ, 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಸಹಯೋಗದೊಂದಿಗೆ ಜಾಗತಿಕ ಆಯುರ್ವೇದದ ಆವಿಷ್ಕಾರಗಳು ಮತ್ತು ಮಹಿಳಾ ಸಬಲೀಕರಣಕ್ಕಾಗಿ ಆಯುರ್ವೇದ ಎಂಬ ಘೋಷ ವಾಕ್ಯದೊಂದಿಗೆ ಕಾರ್ಯಕ್ರಮವನ್ನು ಅ.29ರಂದು ಬೆಳಗ್ಗೆ 9ಕ್ಕೆ ಕೆಜಿಕೊಪ್ಪಲಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ರೇಷ್ಮೆ ಸಚಿವ ಕೆ.ವೆಂಕಟೇಶ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಎಚ್.ಡಿ. ಕೋಟೆ ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿ ಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಸುನಿಲ್ ಬೋಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್ ಡಿ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್ ಗೌಡ ಹಾಗೂ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ ಮತ್ತು ಕೆ.ವಿವೇಕಾನಂದ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ'

ಮೈಸೂರು,ಅ.28– ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದ ವತಿಯಿಂದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಅ.29ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ'ಯ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮಾನಸಿಕ ಕಾರ್ಯಕ್ರಮಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಾಟೆ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



ಮೈಸೂರು ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಬಿಟಿಎಲ್ ವಿದ್ಯಾವಾಹಿನಿ ಶಾಲೆಯ ಸೋನಾಲ್‌ಕುಮಾರ್ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿನಿ ಯಶಸ್ವಿನಿ–ದ್ವಿತೀಯ, ಎಂ.ವರ್ಷಿಣಿ–ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ವಿಜೇತರನ್ನು ಮುಖ್ಯೋಪಾಧ್ಯಾಯ ಚೇತನ್ ಕುಮಾರ್, ಮುಖ್ಯೋಪಾಧ್ಯಾಯಿನಿ ಸಬಾಹತ್ ಸುಲ್ತಾನ್, ದೈಹಿಕ ಶಿಕ್ಷಕ ಸನತ್‌ಕುಮಾರ್, ಪ್ರಸಾದ್ ಅಭಿನಂದಿಸಿದ್ದಾರೆ.

ಸಿದ್ದರಾಮಯ್ಯ ಒಳಗೊಂಡ ಮುಡಾ ನಿವೇಶನ ಹಂಚಿಕೆ ಹಗರಣ

ಮೈಸೂರಿನ ಆರ್‌ಟಿಐ ಕಾರ್ಯಕರ್ತ ಗಂಗರಾಜು ಇಡಿ ವಿಚಾರಣೆಗೆ ಹಾಜರು



ಬೆಂಗಳೂರು, ಅ.28(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ಆರ್‌ಟಿಐ ಕಾರ್ಯಕರ್ತ ಗಂಗರಾಜು ಸೋಮವಾರ ಬೆಂಗಳೂರಿನ ಇಡಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಿದ್ದರು.

ಬೆಂಗಳೂರಿನ ಶಾಂತಿನಗರದ ಜಾರಿ ನಿರ್ದೇಶನಾಲಯದ ಕಚೇರಿಗೆ ಇಂದು ಬೆಳಿಗ್ಗೆ ಹಾಜರಾದ ಗಂಗರಾಜು ಮುಡಾ ಹಗರಣದ ಬಗ್ಗೆ ದಾಖಲಾತಿ ಸಮೇತ ಮಾಹಿತಿ ನೀಡಿದರು.

ಇಡಿ ತನಿಖೆ ಬಗ್ಗೆ 'ಮೈಸೂರು ಮಿತ್ರ'ನಿಗೆ ವಿವರ ನೀಡಿದ ಗಂಗರಾಜು, ಮುಡಾ ಹಗರಣದ ಬಗ್ಗೆ ಇಂದು ಇಡಿ ಅಧಿಕಾರಿಗಳ ತಂಡ ಮೈಸೂರು ಹಾಗೂ ಬೆಂಗಳೂರಿನಲ್ಲಿ ದಾಳಿ ನಡೆಸಿತ್ತು. ದಾಳಿ ನೇತೃತ್ವ ವಹಿಸಿದ್ದ ಇಡಿ ಸಹಾಯಕ ನಿರ್ದೇಶಕ ಮುರುಳಿ ಕಣ್ಣನ್ ಕಚೇರಿಯಲ್ಲಿ ಇರಲಿಲ್ಲ. ಇದರಿಂದ ಇಡಿ ಉನ್ನತ ಅಧಿಕಾರಿಯೊಬ್ಬರು ನನ್ನಿಂದ ಮಾಹಿತಿ ಪಡೆದರು ಎಂದು ತಿಳಿಸಿದರು.

ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರ ಕೆಸರೆ ಸರ್ವೆ ನಂಬರ್ 464ರ 3.16 ಎಕರೆ ಭೂಮಿಗೆ ಸಂಬಂಧಿಸಿದ ದಾಖಲಾತಿ, ಶೇಕಡ 50:50 ಅನುಪಾತದಲ್ಲಿ 14 ನಿವೇಶನ ಪಡೆದ ದಾಖಲಾತಿ ಸೇರಿದಂತೆ ಹಲವು ದಾಖಲಾತಿಗಳನ್ನು ಪಡೆದರು. ಪ್ರಮುಖವಾಗಿ ಇಡಿ ಬಳಿ ಇಲ್ಲದ, ಅವರಿಗೆ ಅವಶ್ಯವಿರುವ ನನ್ನ ಬಳಿ ಇದ್ದ ದಾಖಲಾತಿಗಳನ್ನು ಕೇಳಿ ಪಡೆದರು ಎಂದು ಹೇಳಿದರು.

ಅಲ್ಲದೆ ಬಿಲ್ಡರ್ ಮಂಜುನಾಥ್ ಪಿಎ ನಡೆಸಿರುವ ಹಣದ ವ್ಯವಹಾರದ ವಿಡಿಯೋ ಕೂಡ ಪಡೆದರು. ಮತ್ತಷ್ಟು ದಾಖಲಾತಿಗಳ ಅವಶ್ಯವಿದ್ದು, ಯಾವುದನ್ನು ಪ್ರಮುಖವಾಗಿ ನೀಡಬೇಕು ಎಂಬುದನ್ನು ಪಟ್ಟಿ ಮಾಡಿಕೊಳ್ಳಿ. ಶುಕ್ರವಾರದ ವೇಳೆಗೆ ದೂರವಾಣಿ ಕರೆ ಮಾಡುತ್ತೇವೆ. ಆಗ ಮತ್ತೊಮ್ಮೆ ಇಡಿ ಕಚೇರಿಗೆ ಬಂದು ದಾಖಲಾತಿ ಸಮೇತ ಮಾಹಿತಿ ನೀಡಿ ಎಂದು ತಿಳಿಸಿದರು ಎಂದು ಹೇಳಿದರು.

ಒಟ್ಟಾರೆ ಇಡಿ ತನಿಖೆ ಚುರುಕಿನಿಂದ ನಡೆಯುತ್ತಿದ್ದು, ಮುಂದಿನ ದಿನದಲ್ಲಿ ಇದು ಗಂಭೀರ ಸ್ವರೂಪ ಪಡೆಯಲಿದೆ ಎಂದು ಗಂಗರಾಜು ತಿಳಿಸಿದರು.

ರಂಗ, ಜಾನಪದ ನೃತ್ಯಗಳ ತರಬೇತಿ ಶಿಬಿರ

ಮೈಸೂರು,ಅ.28–ಮೈಸೂರಿನ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನ. 5ರಿಂದ 16ರವರೆಗೆ ರಂಗಭೂಮಿ, ಕರ್ನಾಟಕದ ಮೂಲ ಜನಪದ ನೃತ್ಯಗಳ ತರಬೇತಿ ಶಿಬಿರ ಹಮ್ಮಿಕೊಂಡಿದೆ. ಶಿಬಿರವು ಪ್ರತಿದಿನ ಸಂಜೆ 4.30ರಿಂದ 6ರವರೆಗೆ ಕಲಾಮಂದಿರದ ಆವರಣದಲ್ಲಿ ನಡೆಯಲಿದೆ. ಮಾಹಿತಿಗೆ ಮೊ.7019441509 ಸಂಪರ್ಕಿಸಿ.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ



ಹಿರಿಯ ಸಾಹಿತಿ ಪ್ರೊ.ಬಿ.ಜಯಪ್ರಕಾಶಗೌಡ, ಕವಿಯತ್ರಿ ಡಾ.ಲತಾ ರಾಜಶೇಖರ್, ಯುವ ಬರಹಗಾರ ಸತೀಶ್ ಜವರೇಗೌಡ ಅವರಿಗೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಅ.28(ಎಸ್‌ಪಿಎನ್)– ಒಂದು ಕಾಲಕ್ಕೆ ಮಂಡ್ಯ ಜಿಲ್ಲೆ ಮೈಸೂರಿನ ಭಾಗವಾಗಿತ್ತು. ತರುವಾಯ ವಿಭಜನೆಗೊಂಡು ಜಿಲ್ಲಾ ಕೇಂದ್ರವಾಗಿ ಮಂಡ್ಯ ಗುರುತಿಸಿಕೊಂಡರೂ ಇವೆರಡು ಜಿಲ್ಲೆಗಳು ಅಭಿವೃದ್ಧಿ, ಕಲೆ ಹಾಗೂ ಶೈಕ್ಷಣಿಕ ವಿಚಾರದಲ್ಲಿ ಅವಳಿ ಸೋದರರಿದ್ದಂತೆ ಎಂದು ಹಿರಿಯ ಸಾಹಿತಿ ಪ್ರೊ.ಬಿ. ಜಯಪ್ರಕಾಶಗೌಡ ಅಭಿಪ್ರಾಯಪಟ್ಟರು.

ಮೈಸೂರು ಜಗನ್ಮೋಹನ ಅರಮನೆಯಲ್ಲಿ ಕುವೆಂಪು ಕಲಾನಿಕೇತನ, ಸ್ನೇಹ ಶ್ರೀರಕ್ಷಾ ಸಂಗೀತ, ನೃತ್ಯ, ಸಾಂಸ್ಕೃತಿಕ ಅಕಾಡೆಮಿ ಸಹಯೋಗದೊಂದಿಗೆ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ಅಂಗವಾಗಿ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಹಾಗೂ ಕರ್ನಾಟಕ ಸಾಂಸ್ಕೃತಿಕ ಕಲಾ ಸಂಭ್ರಮ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿ, ಮಾತನಾಡಿದರು.

ಮೈಸೂರು ಸಂಸ್ಥಾನ, ಮಂಡ್ಯ ಜಿಲ್ಲೆಯ ರೈತರ ಅಭಿವೃದ್ಧಿಗೆ ಹಾಗೂ ನೀರಾವರಿ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆ ನೀಡಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿಯಲ್ಲಿ ಕೆಆರ್‌ಎಸ್ ಅಣೆಕಟ್ಟು ಕಟ್ಟುವ ಮೂಲಕ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಮೈಸೂರು ಸಂಸ್ಥಾನದ ಜನತೆ ಶೈಕ್ಷಣಿಕವಾಗಿ ಮುಂದುವರೆಯಲು ಮೈಸೂರು ವಿವಿ ಸ್ಥಾಪನೆ, ಕೈಗಾರಿಕೆಗಳ ಸ್ಥಾಪನೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಜನಾನುರಾಗಿದ್ದರು. ಪ್ರಸ್ತುತ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ವೀಕರಿಸಲು ನಾನು ಎಷ್ಟು ಅರ್ಹನು ಎಂಬುದನ್ನು ನಾನೇ ಪ್ರಶ್ನೆ ಮಾಡಿಕೊಳ್ಳಬೇಕಿದೆ ಎಂದರು.

ಒಂದು ಕಾಲಕ್ಕೆ ಮೈಸೂರಿನ ಭಾಗವಾಗಿದ್ದ ಮಂಡ್ಯ, ಇಂದು ಜಿಲ್ಲಾ ಕೇಂದ್ರವಾಗಿ ವಿಭಜನೆಗೊಂಡರೂ ಮೈಸೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ವಾಸಿಸುವ ಜನರು ಅಣ್ಣ–ತಮ್ಮಂದಿರಂತೆ. ಹಾಗಾಗಿ ಶೈಕ್ಷಣಿಕ, ಕೈಗಾರಿಕೆ ಹಾಗೂ ಸಾಂಸ್ಕೃತಿಕವಾಗಿ ಮೈಸೂರಿನ ಜನತೆ, ಮಂಡ್ಯ ಜಿಲ್ಲೆಯವರು ಜೊತೆ ಜೊತೆಗೆ ಸಾಗಬೇಕು ಎಂದ ಅವರು, ತಮ್ಮ ದಂಪತಿ ಜೀವನ ಆಧಾರವಾಗಿಟ್ಟುಕೊಂಡು ಕವಿತೆ ಬರೆದು ನಾಡಿನ ಮನೆಮಾತಾಗಿರುವ 'ಮೈಸೂರು ಮಲ್ಲಿಗೆ' ಖ್ಯಾತಿಯ ಕೆ.ಎಸ್.ನರಸಿಂಹಸ್ವಾಮಿ ಅವರು ವಾಸವಿದ್ದ ಮನೆಯನ್ನು ರಿಪೇರಿ ಮಾಡಿಸಿ, ಸಾಂಸ್ಕೃತಿಕ ಕೇಂದ್ರವಾಗಿಸಲು ಮೈಸೂರು ಮತ್ತು ಮಂಡ್ಯ ಜಿಲ್ಲೆ ಜನತೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸೇವಾ ರತ್ನ ಪ್ರಶಸ್ತಿ ಪ್ರದಾನ: ಈ ವೇಳೆ ಆದರ್ಶ ಸುಗಮ ಸಂಗೀತ ಸಂಸ್ಥೆಯ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಜಿ.ಪಿ.ಓ. ಚಂದ್ರು, ವರುಣ ಗ್ರಾಪಂ ಮಾಜಿ ಸದಸ್ಯ ಗವಿಸಿದ್ದು, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಎಸ್.ಚಂದ್ರಶೇಖರ್, ರೇಣುಕಾ ಗಂಗಪ್ಪ ಮಲ್ಲಾರಿ, ಸಿ.ಜಿ.ಗಂಗಾಧರ್, ಹೆಚ್.ಎನ್.ಲೋಕೇಶ್, ನಗರಪಾಲಿಕೆ ಮಾಜಿ ಸದಸ್ಯೆ ಎಂ.ಪ್ರಮೀಳಾ ಭರತ್, ಸಂಗೀತ ಕಲಾವಿದ ನೀಲಕಂಠ ಹಳಿಮನಿ ಜೇವರ್ಗಿ ಅವರಿಗೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ 'ಸಮಾಜ ಸೇವಾರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಾಲ್ವಡಿ ಹೆಸರಿನಲ್ಲಿ ಪ್ರಶಸ್ತಿ: ಈ ವೇಳೆ ಹಿರಿಯ ಸಾಹಿತಿ ಪ್ರೊ.ಬಿ.ಜಯಪ್ರಕಾಶ್‌ಗೌಡ, ಕವಿಯತ್ರಿ ಡಾ.ಲತಾ ರಾಜಶೇಖರ್, ಯುವ ಸಾಹಿತಿ ಟಿ.ಸತೀಶ್ ಜವರೇಗೌಡರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದರ ಜೊತೆಗೆ ಹತ್ತು ಸಾವಿರ ನಗದು, ಬೆಳ್ಳಿ ಪದಕ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ನಂತರ ಕುವೆಂಪು ರಚಿತ, ಮಾಲತೇಶ ಬಡಿಗೇರ ನಿರ್ದೇಶನದ ಛಾಯಾ ಭಾರ್ಗವಿ ನಿರ್ವಹಿಸಿರುವ 'ಸ್ಮಶಾನ ಕುರುಕ್ಷೇತ್ರ' ನಾಟಕ ಪ್ರದರ್ಶನಗೊಂಡಿತು. ನಂದಗೋಕುಲ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಕಲಾವಿದರು ಸಮೂಹ ನೃತ್ಯ ರೂಪಕ ಪ್ರದರ್ಶಿಸಿದರು. ಜೂನಿಯರ್ ಪುನೀತ್ ರಾಜ್‌ಕುಮಾರ್ ಹಾಗೂ ರವಿ ಚಂದ್ರನ್ ಅವರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಹಿರಿಯ ಕಲಾವಿದ ಕಿಕ್ಕೇರಿ ಕೃಷ್ಣಮೂರ್ತಿ ತಂಡದವರು ಕುವೆಂಪು ಕವಿತೆಗಳನ್ನು ಹಾಡಿ, ಪ್ರೇಕ್ಷಕರ ಮನಗೆದ್ದರು. ವೇದಿಕೆಯಲ್ಲಿ ತುಮಕೂರಿನ ಕುಂಚಿಟಿಗರ ಮಹಾ ಸಂಸ್ಥಾನ ಮಠದ ಶ್ರೀ ಹನುಮಂತನಾಥ ಸ್ವಾಮೀಜಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಗೌರವಾಧ್ಯಕ್ಷ ಹೆಚ್.ಕೆ.ರಾಮು, ರಾಷ್ಟ್ರಕವಿ ಕುವೆಂಪು ಕಲಾನಿಕೇತನದ ಅಧ್ಯಕ್ಷ ಕುವೆಂಪು ಪ್ರಕಾಶ್ ಉಪಸ್ಥಿತರಿದ್ದರು.

> ❝ ಮೊದಲನೇ ಬಾರಿ ಮುಖ್ಯಮಂತ್ರಿಗಳಾಗಿದ್ದ ವೇಳೆ ಸಿದ್ದರಾಮಯ್ಯನವರು ಕುವೆಂಪು ಜನ್ಮದಿನದ ಪ್ರಯುಕ್ತ ಸರ್ಕಾರದ ವತಿಯಿಂದ ವಿಶ್ವಮಾನವ ದಿನಾಚರಣೆ ಮಾಡಲಾಗುವುದು ಎಂದು ಘೋಷಣೆ ಮಾಡಿದ್ದರು. ಆದರೆ, ಈ ಘೋಷಣೆ ಇಂದಿಗೂ ಘೋಷಣೆಯಾಗಿಯೇ ಉಳಿದಿದೆ. ಈಗಲಾದರೂ ರಾಜ್ಯ ಸರ್ಕಾರ ಕುವೆಂಪು ಜನ್ಮ ದಿನದಂದು 'ವಿಶ್ವಮಾನವ ದಿನಾಚರಣೆ' ಆಚರಿಸಲಿ ಹಾಗೂ ಮಂಡ್ಯದಲ್ಲಿ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅದೇ ಜಿಲ್ಲೆಯವರಾದ ಮಹಾಕವಿಯತ್ರಿ ಹಾಗೂ ಏಳು ಮಹಾಕಾವ್ಯಗಳ ರಚಿಸಿ ನಾಡಿನ ಮನೆಮಾತಾಗಿರುವ ಡಾ.ಲತಾ ರಾಜಶೇಖರ್, ಈ ಬಾರಿಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡುವಂತೆ ಆಗ್ರಹಿಸಿದರು.
>
> **–ಕುವೆಂಪು ಪ್ರಕಾಶ್, ಅಧ್ಯಕ್ಷರು, ರಾಷ್ಟ್ರಕವಿ ಕುವೆಂಪು ಕಲಾನಿಕೇತನ**

ಸುತ್ತಿಗೆಯಿಂದ ತಲೆಗೆ ಹೊಡೆದು ಯುವಕನ ಭೀಕರ ಹತ್ಯೆ

ಪಾಂಡವಪುರ: ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ಮಲಗಿದ್ದ ವ್ಯಕ್ತಿಯ ತಲೆಗೆ ಸುತ್ತಿಗೆಯಿಂದ ಹೊಡೆದು ಕೊಲೆಗೈದಿರುವ ಘಟನೆ ತಾಲೂಕಿನ ಚಿನಕುರಳಿಯಲ್ಲಿ ಭಾನುವಾರ ತಡರಾತ್ರಿ ನಡೆದಿದೆ.

ನಾಗಮಂಗಲ ತಾಲೂಕಿನ ಬೆಳ್ಳೂರು ಕ್ರಾಸ್ ಸಮೀಪದ ನಿವಾಸಿ ಅರವಿಂದ್(24) ಮೃತ ವ್ಯಕ್ತಿ. ಅದೇ ಗ್ರಾಮದ ವಿಜಯ್ ಕೊಲೆ ಮಾಡಿ ಪೊಲೀಸರಿಗೆ ಶರಣಾಗಿರುವ ಆರೋಪಿ. ಅರವಿಂದ್ ಹಾಗೂ ಕೊಲೆ ಆರೋಪಿ ವಿಜಯ್ ಇಬ್ಬರು ಸೋದರ ಸಂಬಂಧಿಗಳಾಗಿದ್ದು, ಕ್ವಾರೆ ಕೆಲಸಕ್ಕೆಂದು ಚಿನಕುರಳಿ ಗ್ರಾಮಕ್ಕೆ ಆಗಮಿಸಿದ್ದರು. ಅರವಿಂದ್ ಪತ್ನಿ ಸಮೇತವಾಗಿ ಹಲವು ದಿನಗಳ ಹಿಂದೆಯೇ ಚಿನಕುರಳಿಗೆ ಆಗಮಿಸಿ ಅಲ್ಲಿಯೇ ಮನೆಮಾಡಿಕೊಂಡು ಕ್ವಾರೆ ಕೆಲಸ ಮಾಡುತ್ತಿದ್ದರು. ಆರೋಪಿ ವಿಜಯ್ ಇತ್ತೀಚೆಗೆ ಚಿನಕುರಳಿ ಗ್ರಾಮಕ್ಕೆ ಆಗಮಿಸಿದ್ದು ಇಬ್ಬರು ಬೇರೆಬೇರೆ ಕ್ವಾರೆ ಕೆಲಸ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು.


ಅರವಿಂದ್ ಪತ್ನಿ ಗರ್ಭಿಣಿಯಾಗಿದ್ದ ಹಿನ್ನೆಲೆಯಲ್ಲಿ ಆಕೆಯನ್ನು ಅರವಿಂದ್ ತವರು ಮನೆಗೆ ಕಳುಹಿಸಿ ಒಬ್ಬನೇ ವಾಸವಾಗಿದ್ದ. ಕೊಲೆ ಆರೋಪಿ ವಿಜಯ್‌ಗೆ ಕಳೆದ ಒಂದು ವರ್ಷದ ಹಿಂದೆ ಕೊಟ್ಟಿದ್ದ 75 ಸಾವಿರ ಹಣವನ್ನು ಹಿಂದಿರುಗಿಸುವಂತೆ ಅರವಿಂದ್ ಪದೇಪದೆ ಒತ್ತಾಯಿಸಿದ್ದ ಎನ್ನಲಾಗಿದೆ. ಅಲ್ಲದೆ ಅರವಿಂದ್ ಕೊಲೆ ಆರೋಪಿ ವಿಜಯ್ ಹೆಸರಿನಲ್ಲಿ ಲೋನ್(ಸಾಲದ) ಮೇಲೆ ಬೈಕ್ ಖರೀದಿಸಿದ್ದು ಬೈಕ್ ಸಾಲಕಟ್ಟುವಂತೆ ಅರವಿಂದ್‌ಗೆ ವಿಜಯ್ ಒತ್ತಾಯಿಸಿ ಅರವಿಂದ್ ಬಳಿಯಿಂದ ಬೈಕ್ ಕಿತ್ತುಕೊಂಡಿದ್ದ.

ಈ ವಿಚಾರವಾಗಿ ಇಬ್ಬರ ನಡುವೆ ಹಾಗಾಗ್ಗೆ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ. ಇದೇ ವಿಚಾರವಾಗಿ ಭಾನುವಾರ ರಾತ್ರಿ ಇಬ್ಬರ ನಡುವೆ ಗಲಾಟೆ ನಡೆದಿದೆ. ಆ ನಂತರ ರಾತ್ರಿ ಅರವಿಂದ್ ಸ್ನೇಹಿತ ಏಳುಮಲೈ ಮನೆಯಲ್ಲಿ ಮಲಗಿದ್ದ ಸಂದರ್ಭದಲ್ಲಿ ಅಲ್ಲಿಗೆ ಆಗಮಿಸಿದ ವಿಜಯ್, ಕಲ್ಲು ಹೊಡೆಯುವ ಸುತ್ತಿಗೆಯಿಂದ ಗಾಢ ನಿದ್ರೆಯಲ್ಲಿದ್ದ ಅರವಿಂದ್ ತಲೆಗೆ ಬಲವಾಗಿ ಹೊಡೆದಿದ್ದಾನೆ. ಇದರಿಂದ ಅರವಿಂದ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಬಳಿಕ ಏಳುಮಲೈನನ್ನು ಎಬ್ಬಿಸಿ ಅರವಿಂದ್ ಮೃತಪಟ್ಟಿರುವ ಮಾಹಿತಿ ತಿಳಿಸಿ, ನಂತರ ಮನೆಯ ಬಾಗಿಲು ಹೊರಗಿನಿಂದ ಬೀಗ ಹಾಕಿಕೊಂಡು ಸ್ವಂತ ಗ್ರಾಮ ನಾಗಮಂಗಲ ತಾಲೂಕಿನ ಬೆಳ್ಳೂರು ಕ್ರಾಸ್ ಬಳಿಯ ತಿರುಮಲಪುರ ಗ್ರಾಮಕ್ಕೆ ತೆರಳಿ ಮನೆಯವರಿಗೆ ಮಾಹಿತಿ ಮುಟ್ಟಿಸಿ ಬಳಿಕ ಬೆಳ್ಳೂರು ಪೊಲೀಸರಿಗೆ ಶರಣಾಗಿದ್ದಾನೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಮೃತದೇಹವನ್ನು ಪಾಂಡವಪುರ ಉಪವಿಭಾಗೀಯ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ. ಘಟನಾ ಸ್ಥಳಕ್ಕೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್‌ಪಿ ಮುರಳಿ, ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ, ಸಬ್ ಇನ್ಸ್‌ಪೆಕ್ಟರ್ ಉಮೇಶ್ ಸೇರಿದಂತೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರಾಜಮನೆತನಕ್ಕೆ ರಾಜ್ಯ ಸರ್ಕಾರದಿಂದ ಕಿರುಕುಳ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ



ಚನ್ನಪಟ್ಟಣ ವಿಧಾನಸಭೆಯ ಕೂಡ್ಲೂರು ಗ್ರಾಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿದ ಕೇಂದ್ರ ಸಚಿವ ಕುಮಾರಸ್ವಾಮಿ.

ಮಂಡ್ಯ,ಅ.28(ಮೋಹನ್‌ರಾಜ್)– ಮೈಸೂರು ರಾಜಮನೆತನದ ಬಗ್ಗೆ ಈ ಸರ್ಕಾರ ದ್ವೇಷ ಸಾಧನೆ ಮಾಡುತ್ತಿದ್ದು, ರಾಜ್ಯದ ಅಭಿವೃದ್ಧಿಗೆ ಮಹೋನ್ನತ ಕೊಡುಗೆ ನೀಡಿರುವ ಆ ಕುಟುಂಬಕ್ಕೆ ಕಿರುಕುಳ ನೀಡುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಚನ್ನಪಟ್ಟಣ ವಿಧಾನಸಭೆ ಕ್ಷೇತ್ರಕ್ಕೊಳಪಟ್ಟ ಮಂಡ್ಯಕ್ಕೆ ಹೊಂದಿಕೊಂಡಂತಿರುವ ಕೂಡ್ಲೂರು ಗ್ರಾಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿದ ಅವರು, ಚಾಮುಂಡೇಶ್ವರಿ ತಾಯಿ ಅರಸು ಮನೆತನದ ದೇವತೆ. ಅವರ ಕುಟುಂಬದ ಆರಾಧ್ಯ ದೈವ. ಅವರ ಮನೆತನದಿಂದ ದೇವರನ್ನು ದೂರ ಮಾಡುವ ಕೇಡಿನ ಕೆಲಸವನ್ನು ಸರ್ಕಾರ ಮಾಡುತ್ತಿದೆ ಚಾಮುಂಡೇಶ್ವರಿ ಪುಣ್ಯಕ್ಷೇತ್ರ ಅರಸರ ಉಸ್ತುವಾರಿಯಲ್ಲಿಯೇ ಇತ್ತು. ಆ ಕ್ಷೇತ್ರದ ಅಭಿವೃದ್ಧಿಗೆ ಒಡೆಯರ್ ಸಾಕಷ್ಟು ಕೆಲಸ ಮಾಡಿದ್ದಾರೆ. ರಾಜ್ಯದ ಅಭಿವೃದ್ಧಿಗೆ, ನೀರಾವರಿ, ಶಿಕ್ಷಣ, ಕೈಗಾರಿಕಾಭಿವೃದ್ಧಿಗೆ ಮಹಾರಾಜರು ಅನನ್ಯ ಕೊಡುಗೆ ನೀಡಿದ್ದಾರೆ. ಅಂತಹ ಕುಟುಂಬಕ್ಕೆ ಸಿದ್ದರಾಮಯ್ಯ ಸರ್ಕಾರ ಇನ್ನಿಲ್ಲದ ಕಿರುಕುಳ ಕೊಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಉಸ್ತುವಾರಿಯನ್ನು ರಾಜಮನೆತನ ಬಹಳ ಉತ್ತಮವಾಗಿ ನಿರ್ವಹಣೆ ಮಾಡುತ್ತಿತ್ತು. ತಾಯಿಯ ಸನ್ನಿಧಾನದಲ್ಲಿ ನಡೆಯುತ್ತಿದ್ದ ಕೈಂಕರ್ಯಗಳನ್ನು ಶ್ರದ್ಧಾ ಭಕ್ತಿಗಳಿಂದ ನೋಡಿಕೊಳ್ಳುತ್ತಿತ್ತು. ಅಂತಹ ಕುಟುಂಬಕ್ಕೆ ದಕ್ಕಿದ್ದ ದೇವರ ಸೇವೆ ಅವಕಾಶವನ್ನು ಸಿದ್ದರಾಮಯ್ಯ ಸರ್ಕಾರ ಕಿತ್ತುಕೊಂಡಿದೆ. ಕಾಂಗ್ರೆಸ್ ನಾಯಕರು ನನ್ನನ್ನು ನಿಂದನೆ ಮಾಡಿಕೊಂಡು ಪ್ರಚಾರ ಮಾಡುತ್ತಿದ್ದಾರೆ. ನಾನು ಅಭಿವೃದ್ಧಿ ವಿಚಾರ ಇಟ್ಟುಕೊಂಡು ಪ್ರಚಾರ ಮಾಡುತ್ತಿದ್ದೇನೆ. ಅವರಿಗೂ ನನಗೂ ಇರುವ ವ್ಯತ್ಯಾಸ ಇಷ್ಟೇ ಎಂದು ಕಿಡಿಕಾರಿದರು.

ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಚನ್ನಪಟ್ಟಣ–ರಾಮನಗರ ನಡುವೆ ಬೃಹತ್ ಕೈಗಾರಿಕೆ ಒಂದನ್ನು ಸ್ಥಾಪನೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ನನ್ನ ಮೇಲೆ ನಂಬಿಕೆ ಇರಿಸಿ ಭಾರಿ ಕೈಗಾರಿಕೆ ಹಾಗೂ ಉಕ್ಕು ಖಾತೆಗಳನ್ನು ನೀಡಿದ್ದಾರೆ. ಎರಡೂ ಮಹತ್ವದ ಖಾತೆಗಳಾಗಿದ್ದು, ದೇವರ ಅನುಗ್ರಹ, ಜನರ ಆಶೀರ್ವಾದದಿಂದ ಸಿಕ್ಕಿರುವ ಈ ಅವಕಾಶದಿಂದ ರಾಮನಗರ ಜಿಲ್ಲೆಯ ಜನರಿಗೆ ಏನಾದರೂ ಒಳ್ಳೆಯದು ಮಾಡುತ್ತೇನೆ ಎಂದು ಹೇಳಿದರು.

ಯೋಗೇಶ್ವರ್ ಅವರಿಗೆ ನಾವು ಟಿಕೆಟ್ ಕೊಡುತ್ತೇವೆ ಎಂದೆವು. ಬಿಜೆಪಿ ಕೂಡ ಟಿಕೆಟ್ ಕೊಡಲು ಮುಂದಾಗಿತ್ತು. ಬಿಜೆಪಿ ವರಿಷ್ಠ ನಾಯಕರ ಮಾತಿಗೆ ತಲೆಬಾಗಿ ನಾವು ಚನ್ನಪಟ್ಟಣ ಕ್ಷೇತ್ರವನ್ನು ಬಿಟ್ಟುಕೊಡಲು ನಿರ್ಧಾರ ಮಾಡಿದ್ದೆವು. ಆದರೆ, ಎಲ್ಲರ ಮಾತನ್ನು ಧಿಕ್ಕರಿಸಿ ಅವರು ಕಾಂಗ್ರೆಸ್ ಸೇರಿಕೊಂಡರು. ಈಗ ನೋಡಿದರೆ ಹಾದಿಬೀದಿಯಲ್ಲಿ ಸುಳ್ಳು ಪ್ರಚಾರ ಮಾಡಿಕೊಂಡು ಓಡಾಡುತ್ತಿದ್ದಾರೆ ಎಂದು ದೂರಿದರು.

ನನ್ನ ಬಗ್ಗೆ, ನನ್ನ ತಂದೆಯ ಬಗ್ಗೆ ಬಹಳ ಕೀಳುಮಟ್ಟದ ಭಾಷೆ ಬಳಕೆ ಮಾಡಿಕೊಂಡು ಟೀಕೆ ಮಾಡುತ್ತಿದ್ದಾರೆ. ಅವರ ಪದ ಬಳಕೆಯ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಚನ್ನಪಟ್ಟಣ ಜನರೇ ತೀರ್ಪು ಕೊಡುತ್ತಾರೆ. ಕುಮಾರಸ್ವಾಮಿ ಅವರಿಗೆ ಚನ್ನಪಟ್ಟಣದಲ್ಲಿ ಎಷ್ಟು ಕೆರೆಗಳು ಇವೆ ಎಂಬುದೇ ಗೊತ್ತಿಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿ ಹೇಳಿದ್ದಾರೆ. ಆದರೆ, ನಾನು ಏನು ಮಾಡಿದ್ದೇನೆ ಎಂಬುದು ಹಳ್ಳಿಗಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ ಎಂದು ತಿರುಗೇಟು ನೀಡಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಅವರ ಸಂಪುಟದಲ್ಲಿ ಕುಮಾರಸ್ವಾಮಿ ಅವರು ಅತ್ಯಂತ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಬರೀ ಭ್ರಷ್ಟಾಚಾರದಲ್ಲಿ ನಿರತವಾಗಿದೆ. ಅಧಿಕಾರಕ್ಕೆ ಬಂದಾಗಿನಿಂದ ಹಗರಣಗಳಲ್ಲಿಯೇ ಮುಳುಗಿದೆ. ಅದರಲ್ಲಿ ಮುಡಾ ಹಗರಣದ ವಿರುದ್ಧ ಬೆಂಗಳೂರಿನಿಂದ ಮೈಸೂರುವರೆಗೂ ನಡೆದ ಪಾದಯಾತ್ರೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರೂ ಪ್ರಮುಖ ಪಾತ್ರ ವಹಿಸಿದ್ದರು. ಅವರಿಗೆ ಮುಂದೆ ಒಳ್ಳೆಯ ನಾಯಕನಾಗಿ ಬೆಳೆಯುವ ಎಲ್ಲಾ ಅವಕಾಶಗಳು ಇವೆ. ಅಂತಹ ಅವಕಾಶಕ್ಕೆ ಚನ್ನಪಟ್ಟಣದ ಜನರೇ ನಾಂದಿ ಹಾಡಬೇಕು ಎಂದು ಹೇಳಿದರು.

ಹೆಣ್ಣು ಭ್ರೂಣ ಹತ್ಯೆ ಸಮಾಜಕ್ಕೆ ಅಂಟಿರುವ ಶಾಪ

ನ್ಯಾಯಾಧೀಶರಾದ ಸುಧೀರ್ ವಿಷಾದ



ಜಾಗೃತಿ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದ ಜೆಎಂಎಫ್‌ಸಿ ಸಿವಿಲ್ ನ್ಯಾಯಾಲಯದ ಹಿರಿಯಶ್ರೇಣಿ ನ್ಯಾಯಾಧೀಶ ಸುಧೀರ್.

ಕೆ.ಆರ್.ಪೇಟೆ,ಅ.28– ತಾಯಿಯಾಗಿ, ಮಡದಿಯಾಗಿ, ಸಹೋದರಿಯಾಗಿ ಹೆಣ್ಣನ್ನು ಒಪ್ಪುವ ನಾವು ಮಗಳಾಗಿ ಏಕೆ ಹೆಣ್ಣನ್ನು ಒಪ್ಪಿ ಸ್ವೀಕರಿಸಬಾರದು. ಹೆಣ್ಣು ಸಮೃದ್ಧಿ ಹಾಗೂ ಶಾಂತಿಯ ಸಂಕೇತವಾದ್ದರಿಂದ ಪೋಷಕರು ಹೆಣ್ಣು–ಗಂಡು ಎಂದು ಭೇದ ಭಾವ ಮಾಡದೇ ಇಬ್ಬರನ್ನೂ 'ಮಾನವಾಗಿ ಕಂಡು ಶಿಕ್ಷಣ ಜ್ಞಾನದ ಬೆಳಕಿನ ಶಕ್ತಿಯನ್ನು ಕೊಡಿಸಿ ಸಾಧನೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಪಟ್ಟಣದ ಜೆಎಂಎಫ್‌ಸಿ ಸಿವಿಲ್ ನ್ಯಾಯಾಲಯದ ಹಿರಿಯ ಶ್ರೇಣಿ ನ್ಯಾಯಾಧೀಶ ಸುಧೀರ್ ಅವರು ಮನವಿ ಮಾಡಿದರು.

ಅವರು ಪಟ್ಟಣದ ಗ್ರಾಮಭಾರತಿ ಸಮೂಹ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಅಂತರ ರಾಷ್ಟ್ರೀಯ ಹೆಣ್ಣು ಮಗು ದಿನ ಹಾಗೂ ಮಾನಸಿಕ ಆರೋಗ್ಯ ದಿನದ ಅಂಗವಾಗಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ನಾಗರಿಕ ಸಮಾಜದಲ್ಲಿ ಇಂದು ಹೆಣ್ಣಿಗೆ ಹೆಣ್ಣೇ ಶತ್ರುವಾಗಿ ಕಾಡುತ್ತಿದ್ದಾಳೆ, ಹೆಣ್ಣು ಮಗುವು ಭೂಮಿಯ ಮೇಲೆ ಹುಟ್ಟುವ ಹಕ್ಕಿಗಾಗಿ ಇಂದು ಆಂದೋಲನ ನಡೆಸಬೇಕಾದ ವಾತಾವರಣ ನಿರ್ಮಾಣವಾಗಿದೆ. ಸಾಮಾಜಿಕ ಪಿಡುಗಾಗಿ ನಮ್ಮನ್ನು ಕಾಡುತ್ತಿರುವ ಹೆಣ್ಣು ಭ್ರೂಣ ಹತ್ಯೆಯು ಇಂದು ಸರ್ವೇ ಸಾಮಾನ್ಯವಾಗಿದೆ. ನಮ್ಮ ರಾಜ್ಯದಲ್ಲಿ ಮಂಡ್ಯ ಜಿಲ್ಲೆಯಲ್ಲಿಯೇ ಅತೀ ಹೆಚ್ಚಿನ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿರುವುದು ವಿಷಾದದ ಸಂಗತಿಯಾಗಿದೆ. ಹೆಣ್ಣು ಭ್ರೂಣ ಹತ್ಯೆಯು ನಾಗರೀಕ ಸಮಾಜಕ್ಕೆ ಅಂಟಿರುವ ಶಾಪವಾಗಿದ್ದು, ಶಿಕ್ಷಾರ್ಹ ಅಪರಾಧವೆಂಬ ಸತ್ಯವು ಗೊತ್ತಿದ್ದರೂ ವಿದ್ಯಾವಂತ ಸಮೂಹವೇ ಹೆಣ್ಣು ಭ್ರೂಣ ಹತ್ಯೆಗೆ ಮುಂದಾಗಿದೆ. ಭ್ರೂಣ ಹತ್ಯೆಯಿಂದಾಗಿ ಗಂಡು ಮತ್ತು ಹೆಣ್ಣು ಮಕ್ಕಳ ಜನನ ಪ್ರಮಾಣದಲ್ಲಿ ಹಾಗೂ ಲಿಂಗಾನುಪಾತದಲ್ಲಿ ಏರುಪೇರಾಗುತ್ತಿರುವ ಕಾರಣದಿಂದ ಹೆಣ್ಣು ಮಕ್ಕಳ ಕೊರತೆಯು ಸಮಾಜದಲ್ಲಿ ಎದುರಾಗಿದೆ. ಹೆಣ್ಣು ರಾಷ್ಟ್ರದ ಶಕ್ತಿಯಾಗಿದ್ದು, ದೇಶದ ಸಮಗ್ರವಾದ ಅಭಿವೃದ್ಧಿಯಲ್ಲಿ ಹೆಣ್ಣು ಮಕ್ಕಳ ಪಾತ್ರವು ನಿರ್ಣಾಯಕವಾಗಿರುವುದರಿಂದ ಹೆಣ್ಣು ಮಕ್ಕಳನ್ನು ಗೌರವಿಸಿ ಅವರಿಗೆ ನೀಡಬೇಕಾದ ಗೌರವ ಹಾಗೂ ಸ್ಥಾನಮಾನವನ್ನು ನೀಡಿ ಹೆಣ್ಣು ಮಕ್ಕಳ ಅಭಿವೃದ್ಧಿಗೆ ಹಾಗೂ ನಾರಿಶಕ್ತಿಗೆ ಪ್ರತಿಯೊಬ್ಬರೂ ಸಹಕಾರ ನೀಡಬೇಕು ಎಂದು ಸುಧೀರ್ ಕರೆ ನೀಡಿದರು.

ಗಾಂಧಿ ಗ್ರಾಮ ಪುರಸ್ಕಾರದಲ್ಲಿ ಅನ್ಯಾಯ

ಗ್ರಾಪಂ ಸದಸ್ಯ ಮಧುಸೂದನ್ ಆರೋಪ

ಮಂಡ್ಯ: ಕೇಂದ್ರ ಸರ್ಕಾರದಿಂದ ಅತ್ಯುತ್ತಮ ಗ್ರಾಮ ಪಂಚಾಯಿತಿಗಳಿಗೆ ಕೊಡಮಾಡುವ 2023–24ನೇ ಸಾಲಿನ ಜಿಲ್ಲಾ ಮಟ್ಟದ ಗಾಂಧಿ ಗ್ರಾಮ ಪುರಸ್ಕಾರ ಆಯ್ಕೆಯಲ್ಲಿ ಹೆಮ್ಮನಹಳ್ಳಿ ಗ್ರಾಮ ಪಂಚಾಯಿತಿಗೆ ಅನ್ಯಾಯವಾಗಿದೆ ಎಂದು ಗ್ರಾ.ಪಂ ಸದಸ್ಯ, ವಕೀಲ ಮಧುಸೂದನ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 134 ಪ್ರಶ್ನಾವಳಿಗಳ ಮೂಲಕ ಗ್ರಾಪಂಗಳಿಗೆ ಅಂಕಗಳನ್ನು ನೀಡಿ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗುವುದು, ಈ ಅಂತಿಮ ಪಟ್ಟಿಯಲ್ಲಿ ಹೆಮ್ಮನಹಳ್ಳಿ, ಭಾರತೀನಗರ, ಮತ್ತು ಕದಲೂರು ಗ್ರಾ.ಪಂಗಳ ಹೆಸರುಗಳಿದ್ದು, ನಮಗಿಂತ ಕಡಿಮೆ ಅಂಕ ಪಡೆದ ಭಾರತೀನಗರ ಗ್ರಾಪಂ ಆಯ್ಕೆ ಮಾಡಿದ್ದಾರೆ ಎಂದು ದೂರಿದರು.

ಈ ಆಯ್ಕೆಯ ವಿರುದ್ಧ ಜಿ.ಪಂ ಸಿಇಓ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಿದ್ದು, ಜಿ.ಪಂ ಸಿಇಓ ಅವರು ಗ್ರಾ.ಪಂ ಅಧ್ಯಕ್ಷರು ಹಾಗೂ ಪಿಡಿಓಗಳ ಜೊತೆ ಜಿಪಂನಲ್ಲಿ ಸಭೆ ನಡೆಸಿದ್ದು, ಹೆಮ್ಮನಹಳ್ಳಿ, ಭಾರತೀನಗರ ಗ್ರಾ.ಪಂಗಳ ಅಂಕಗಳನ್ನು ಪರಿಶೀಲನೆ ನಡೆಸಲಾಗಿದ್ದು, ಹೆಮ್ಮನಹಳ್ಳಿ ಗ್ರಾ.ಪಂಗೆ 21 ಹೆಚ್ಚು ಅಂಕಗಳು ಲಭಿಸಿರುವುದು ದೃಢಪಟ್ಟಿದೆ ಎಂದರು.

ಭಾರತೀನಗರ ಗ್ರಾಪಂಗೆ ಅಂಕ ದೊರೆಯದ ಹಲವು ಭಾಗಗಳಿಗೆ 2 ದಿನಗಳಲ್ಲಿ ಕೃತಕ ದಾಖಲಾತಿ ಸೃಷ್ಟಿಸಿ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಿದ್ದು, ಇದು ಮೇಲಧಿಕಾರಿಗಳ ಮಟ್ಟದಲ್ಲಿ ನಡೆದಿರುವ ವಂಚನೆಯು ಅಕ್ರಮವಾಗಿದೆ ಎಂದು ಗಂಭೀರ ಆರೋಪ ಮಾಡಿದರು.

ಅಧಿಕಾರಿ ಮಟ್ಟದಲ್ಲಿ ಅನ್ಯಾಯವಾಗಿದ್ದು, ಈ ಸಂಬಂಧ ಅಧಿಕಾರಿಗಳು ನ್ಯಾಯ ದೊರಕಿಸಿಕೊಡದೇ ಹೋದಲ್ಲಿ ನ್ಯಾಯಾಲಯದ ಮೆಟ್ಟಿಲು ಏರುವುದಾಗಿ ಇದೇ ಸಂದರ್ಭದಲ್ಲಿ ಎಚ್ಚರಿಸಿದರು.

ಗೋಷ್ಠಿಯಲ್ಲಿ ಹೆಮ್ಮನಹಳ್ಳಿ ಗ್ರಾ.ಪಂ ಅಧ್ಯಕ್ಷೆ ವೀಣಾ, ಸದಸ್ಯರಾದ ಕಮಲಾಕ್ಷಿ, ಹೆಚ್.ಸಿ.ಉಮೇಶ್, ನಾಗೇಶ್, ಹೆಚ್.ಕೆ. ನಂದೀಶ್‌ಗೌಡ ಇದ್ದರು.

ಅರ್ಜಿ ಆಹ್ವಾನ

ಮಂಡ್ಯ,ಅ.28– 2025–26ನೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜುಗಳ ಸ್ನಾತಕ ಪೂರ್ವ ಹಾಗೂ ಸ್ನಾತಕೋತ್ತರ ಕೋರ್ಸುಗಳ ತಾತ್ಕಾಲಿಕ ಸಂಯೋಜನೆ ನವೀಕರಿಸಲು/ಹೊಸಕೋರ್ಸ್/ವಿಷಯ/ ಭಾಷೆಗಳು /ವಿದ್ಯಾರ್ಥಿಗಳ ಪ್ರವೇಶಾತಿ/ ಹೆಚ್ಚುವರಿ/ ಇಳಿಕೆ ಪ್ರವೇಶಾತಿ ಮಿತಿ, ತಾತ್ಕಾಲಿಕ ಸಂಯೋಜನೆಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಲು ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ. ಸಂ:08232–358788 ಸಂಪರ್ಕಿಸಬಹುದಾಗಿದೆ ಎಂದು ಮಂಡ್ಯ ವಿವಿ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಇಡಿ ಬೇಟೆ

ಪ್ರಭಾವಿ ಸಚಿವ ರೊಬ್ಬರೊಂದಿಗೆ ವ್ಯವಹಾರಿಕವಾಗಿ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಅಲ್ಲದೇ ಹಿರಿಯ ರಾಜಕಾರಣಿಯೊಬ್ಬರ ಆಪ್ತರಾಗಿದ್ದಾರೆ. ಇವರು ಮುಡಾದಲ್ಲಿ ಶೇ. 50:50 ಅನುಪಾತದಡಿ ಅಕ್ರಮವಾಗಿ ಹಂಚಿಕೆಯಾದ ನಿವೇಶನಗಳ ವಿಚಾರದಲ್ಲಿ ಮುಡಾದ ಹಿಂದಿನ ಆಯುಕ್ತರಾದ ನಟೇಶ್ ಮತ್ತು ದಿನೇಶ್‌ಕುಮಾರ್ ಅವಧಿಯಲ್ಲಿ ವ್ಯಾಪಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬ ಆರೋಪವಿದೆ.

ಮಂಜುನಾಥ್ ಅವರು ಎನ್. ಕಾರ್ತಿಕ್ ಡೆವಲಪರ್ಸ್‌ನ ಮಾಲೀಕನಾಗಿದ್ದು, ಮೈಸೂರಿನಲ್ಲಿ 'ಕಾರ್ತಿಕ್ ಬಡಾವಣೆ' ಹೆಸರಿನಲ್ಲಿ ಲೇಔಟ್ ನಿರ್ಮಿಸಿದ್ದಾರೆ ಎಂದು ಹೇಳಲಾಗಿದೆ. ಇವರು ಮುಡಾದ ಹಿಂದಿನ ಆಯುಕ್ತರಾದ ನಟೇಶ್ ಮತ್ತು ದಿನೇಶ್‌ಕುಮಾರ್ ಅವರಿಗೆ ಮೈಸೂರಿನ ರಾಜರಾಜೇಶ್ವರಿನಗರ ಮತ್ತು ಜೆ.ಪಿ.ನಗರದ ಕಚೇರಿಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿದ್ದರೂ ಎಂಬ ಆರೋಪವೂ ಇದೆ. ಶೇ. 50:50ರ ಅನುಪಾತದಡಿ ಜಿಪಿಎ ಮೂಲಕ ನಿವೇಶನ ಮಂಜೂರು ಮಾಡಿಸಿಕೊಂಡು ಅದರಲ್ಲಿ ಕೆಲ ನಿವೇಶನಗಳನ್ನು ಪ್ರಭಾವಿ ರಾಜಕಾರಣಿಗಳ ಸಂಬಂಧಿಕರು ಅಥವಾ ಬೆಂಬಲಿಗರಿಗೆ ಸೆಟಲ್‌ಮೆಂಟ್ ಡೀಡ್ ಮೂಲಕ ಪರಭಾರೆ ಮಾಡಿದ್ದರು ಎಂದು ಕೆಲವರು ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಇಂದು ಮಂಜುನಾಥ್ ಅವರ ಬೆಂಗಳೂರಿನ ಡಾಲರ್ಸ್ ಕಾಲೋನಿ ಮನೆ, ಕಚೇರಿ, ಮಂಡ್ಯದ ಸುಭಾಷ್‌ನಗರದ ಕಚೇರಿ, ಮೈಸೂರಿನ ರಾಜರಾಜೇಶ್ವರಿನಗರದ ದೀಪಾ ವೈನ್ಸ್ ಎದುರಿಗಿರುವ ಕಚೇರಿ, ದಟ್ಟಗಳ್ಳಿ, ಮನೆ, ಜೆ.ಪಿ. ನಗರದ ಕಚೇರಿ ಮತ್ತು ಬನ್ನೂರು ರಸ್ತೆಯ ಭುಗತಹಳ್ಳಿ ಸಮೀಪವಿರುವ ಫಾರಂಹೌಸ್ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಮುಡಾ ಮಾಜಿ ಆಯುಕ್ತ ನಟೇಶ್ ಮನೆ ಶೋಧಿಸಿದ ಇಡಿ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಶೇ. 50:50ರ ಅನುಪಾತದಡಿ ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ ಎಂಬ ಆರೋಪದಡಿ ಕಾರ್ಯಾಚರಣೆಗಿಳಿದಿರುವ ಇಡಿ ಅಧಿಕಾರಿಗಳು ಸೋಮವಾರ ಮುಂಜಾನೆ ಬೆಂಗಳೂರಿನ ಮಲ್ಲೇಶ್ವರಂ 10ನೇ ಕ್ರಾಸ್‌ನಲ್ಲಿರುವ ಮುಡಾದ ಹಿಂದಿನ ಆಯುಕ್ತ ಡಾ. ಡಿ.ಬಿ.ನಟೇಶ್ ನಿವಾಸದ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಬಿ.ಎಂ. ಪಾರ್ವತಿಯವರಿಗೆ 14 ನಿವೇಶನಗಳನ್ನು ಮಂಜೂರು ಮಾಡಿರುವುದು ನಟೇಶ್ ಅವರೇ ಆಗಿರುವುದರಿಂದ ಈ ಸಂಬಂಧ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಯಿತು ಎಂದು ಹೇಳಲಾಗಿದೆ. 1ಅಲ್ಲದೇ ಇವರ ಅವಧಿಯಲ್ಲೇ ಶೇ. 50:50ರ ಅನುಪಾತದಡಿ ನಿವೇಶನಗಳ ಮಂಜೂರಾತಿ ಕಾರ್ಯ ಆರಂಭವಾಯಿತು ಎಂದು ಹೇಳಲಾಗಿದ್ದು, ಇಡಿ ಅಧಿಕಾರಿಗಳು ತಮಗೆ ಲಭ್ಯವಿದ್ದ ದಾಖಲೆಗಳ ಆಧಾರದ ಮೇರೆಗೆ ಹಲವಾರು ನಿವೇಶನಗಳಿಗೆ ಸಂಬಂಧಿಸಿದಂತೆ ನಟೇಶ್ ಅವರನ್ನು ವಿಚಾರಣೆಗೊಳಪಡಿಸಿದ್ದಾರೆ.

ಇಡಿ ಅಧಿಕಾರಿಗಳು ದಾಳಿ ನಡೆಸಿದ ವೇಳೆ ನಟೇಶ್ ಮನೆಯಲ್ಲಿ ಇರಲಿಲ್ಲ ಎಂದು ಹೇಳಲಾಗಿದ್ದು, ಅಧಿಕಾರಿಗಳು ಅವರ ಮೊಬೈಲ್‌ಗೆ ಕರೆ ಮಾಡಿ ಕರೆಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ. ಇಡಿ ಅಧಿಕಾರಿಗಳು ನಟೇಶ್ ನಿವಾಸದಲ್ಲಿ ರಾತ್ರಿ 11 ಗಂಟೆವರೆಗೂ ಪರಿಶೀಲನೆ ನಡೆಸಿ, ಇಂದಿನ ದಾಳಿಯನ್ನು ಮುಕ್ತಾಯಗೊಳಿಸಿ ತೆರಳುವಾಗ 4 ಬ್ಯಾಗ್‌ಗಳಲ್ಲಿ ಮಹತ್ವದ ದಾಖಲೆಗಳನ್ನು ಕೊಂಡೊಯ್ದಿದ್ದಾರೆ.

ಜಿ.ಟಿ.ದಿನೇಶ್‌ಕುಮಾರ್ ಪರಾರಿ!

ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ತನಿಖೆ ನಡೆಸುತ್ತಿರುವ ಇಡಿ ಅಧಿಕಾರಿಗಳು ದಾಳಿ ನಡೆಸಿದ ಬೆನ್ನಲ್ಲೇ ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಪರಾರಿಯಾದರೆಂದು ಮೂಲಗಳು ತಿಳಿಸಿವೆ.

ಇಂದು ಮುಂಜಾನೆ 6 ಗಂಟೆ ಸುಮಾರಿನಲ್ಲಿ ಬೆಂಗಳೂರಿನ ಬಾಣಸವಾಡಿಯ ದೀಪಿಕಾ ರಾಯಲ್ ಅಪಾರ್ಟ್‌ಮೆಂಟ್‌ನಲ್ಲಿರುವ ದಿನೇಶ್‌ಕುಮರ್ ಫ್ಲಾಟ್ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಅಪಾರ್ಟ್‌ಮೆಂಟ್‌ನ ಉದ್ಯಾನವನದಲ್ಲಿ ವಾಯುವಿಹಾರ ಮಾಡುತ್ತಿದ್ದ ದಿನೇಶ್‌ಕುಮಾರ್, ತಮ್ಮ ಪ್ಲಾಟ್ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂಬ ವಿಚಾರ ತಿಳಿದು ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಹೇಳಲಾಗಿದ್ದು, ಅವರ ಮೊಬೈಲ್ ಕೂಡ ಸ್ವಿಚ್‌ಆಫ್ ಆಗಿದೆ ಎನ್ನಲಾಗಿದೆ.

ಮುಡಾ ಆಯುಕ್ತರಾಗಿ 2022ರಲ್ಲಿ ದಿನೇಶ್ ಕುಮಾರ್ ಅಧಿಕಾರ ವಹಿಸಿಕೊಂಡಿದ್ದರು. ಶೇ. 50:50ರ ಅನುಪಾತದಡಿ ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬ ಆರೋಪದ ಮೇರೆಗೆ ಯಾವುದೇ ಸ್ಥಳ ತೋರಿಸದೇ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಕಲೆವೇ ದಿನಗಳಲ್ಲಿ ಹಾವೇರಿ ವಿವಿಯ ಕುಲಸಚಿವ ಹುದ್ದೆಯನ್ನು ಅವರಿಗೆ ನೀಡಲಾಗಿತ್ತು. ಈ ವಿಚಾರ ಭಾರೀ ವಿವಾದಕ್ಕೆ ಕಾರಣವಾಗುತ್ತಿದ್ದಂತೆಯೇ ದಿನೇಶ್‌ಕುಮಾರ್ ಅವರನ್ನು ಸರ್ಕಾರ ಅಮಾನತು ಮಾಡಿ, ಒಂದೆರಡು ದಿನದಲ್ಲೇ ಅಮಾನತ್ತನ್ನು ಹಿಂಪಡೆದಿತ್ತು. ಮುಡಾದಲ್ಲಿ ನಡೆದಿದ್ದ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಆಗಿಂದಾಗ್ಗೆ ಹಲವಾರು ವರದಿಗಳನ್ನು ಪ್ರಕಟಿಸುವ ಮೂಲಕ 'ಮೈಸೂರು ಮಿತ್ರ' ಹಗರಣವನ್ನು ಬಯಲಿಗೆಳೆದಿತ್ತು ಎಂಬುದನ್ನು ಸ್ಮರಿಸಬಹುದಾಗಿದೆ.

ಮನೆ ಮೇಲೂ ಇಡಿ ದಾಳಿ

ರಾಕೇಶ್ ಪಾಪಣ್ಣ ಮನೆಯಲ್ಲೇ ಇದ್ದರು. ಅವ ರನ್ನು ಇಡಿ ಅಧಿಕಾರಿಗಳು ತೀವ್ರ ವಿಚಾ ರಣೆಗೊಳಪಡಿಸಿದರು. ಕಾರನ್ನು ದೂರ ದಲ್ಲೇ ನಿಲುಗಡೆ ಮಾಡಿ ಬಂದಿದ್ದ ದಾಳಿ ನಡೆಸಿದ ಮೂವರು ಅಧಿಕಾರಿಗಳು, ತಮ್ಮ ಗುರುತಿನ ಚೀಟಿ ತೋರಿಸಿ 'ನಾವು ಇಡಿ ಅಧಿಕಾರಿಗಳು ಸರ್ಚ್ ವಾರಂಟ್ ನೊಂದಿಗೆ ಬಂದಿದ್ದೇವೆ' ಎಂದು ಹೇಳುತ್ತಿದ್ದಂತೆಯೇ ಗಲಿಬಿಲಿಗೊಂಡ ರಾಕೇಶ್ ಪಾಪಣ್ಣ, ಸಾವರಿಸಿಕೊಂಡು, ವಿಚಾರಣೆಗೆ ಸಹಕರಿಸುತ್ತಿದ್ದಾರೆ.

ಮನೆಯಲ್ಲಿ ಸ್ಥಿರಾಸ್ತಿಗಳ ದಾಖಲೆ ಪತ್ರಗಳು, ಚೆಕ್ ಬುಕ್‌ಗಳು, ಬ್ಯಾಂಕ್ ಪಾಸ್‌ಬುಕ್‌ಗಳು, ಇನ್ನಿತರ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡು, ಹಿನಕಲ್ ಸರ್ವೆ ನಂಬರ್ ಭೂಮಿ ಹೇಗೆ ಬಂತು, ಮುಡಾ ಸ್ವಾಧೀನಪಡಿಸಿ ಪರಿಹಾರ ನೀಡಿದ ಮಾಹಿತಿ, ಉಳಿಕೆ ಜಮೀನಿಗೆ ಪರ್ಯಾಯವಾಗಿ ನಿವೇಶನ ಪಡೆದ ಪ್ರಕ್ರಿಯೆ, ಕ್ರಯಪತ್ರ ನೋಂದಣಿ ಕುರಿತಂತೆ ಅಧಿಕಾರಿಗಳು ರಾಕೇಶ್ ಪಾಪಣ್ಣರಿಂದ ಅಗತ್ಯ ಮಾಹಿತಿ ಕಲೆಹಾಕಿದರು. ಇದು ಮಾತ್ರವಲ್ಲದೇ, ಶೇ. 50:50ರ ಅನುಪಾತದಲ್ಲಿ ಹಂಚಿಕೆಯಾದ ಹಲವಾರು ನಿವೇಶನಗಳ ವಿಚಾರದಲ್ಲೂ ರಾಕೇಶ್ ಪಾಪಣ್ಣ ಭಾಗಿಯಾಗಿದ್ದಾರೆ ಎಂಬುದು ಆರಂಭಿಕ ಪರಿಶೀಲನೆ ವೇಳೆ ತಿಳಿದುಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ತಮ್ಮ ವಿಚಾರಣೆಯನ್ನು ತೀವ್ರಗೊಳಿಸಿದ್ದಾರೆ. ಮಧ್ಯಾಹ್ನ ಊಟವನ್ನೂ ಅಲ್ಲಿಗೆ ತರಿಸಿಕೊಂಡ ಅಧಿಕಾರಿಗಳು ರಾತ್ರಿ 11 ಗಂಟೆವರೆಗೂ ಪರಿಶೀಲನೆ ನಡೆಸಿ ಇಂದಿನ ಕಾರ್ಯಾಚರಣೆಯನ್ನು ಮುಕ್ತಾಯಗೊಳಿಸಿದ್ದಾರೆ. ಆದರೆ, ಇಡಿಯ ಮೂವರು ಸಿಬ್ಬಂದಿ ರಾಕೇಶ್ ಪಾಪಣ್ಣ ನಿವಾಸದಲ್ಲೇ ಉಳಿದುಕೊಂಡಿದ್ದು, ಅಧಿಕಾರಿಗಳು ಮಾತ್ರ ನಿರ್ಗಮಿಸಿದ್ದಾರೆ. ನಾಳೆ (ಮಂಗಳವಾರ) ಇಡಿ ಅಧಿಕಾರಿಗಳು ರಾಕೇಶ್ ಪಾಪಣ್ಣ ಮನೆಯಲ್ಲಿ ಕಾರ್ಯಾಚರಣೆ ಮುಂದುವರೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶೇ. 50:50ರ ಅನುಪಾತದಡಿ ಮುಡಾದಿಂದ ಹಲವರು ನಿವೇಶನಗಳನ್ನು ಅಕ್ರಮವಾಗಿ ಪಡೆದಿರುವ ಬಗ್ಗೆ 'ಮೈಸೂರು ಮಿತ್ರ' ವಿವರವಾದ ವರದಿ ಪ್ರಕಟಿಸಿದ್ದನ್ನು ಸ್ಮರಿಸಬಹುದು.

ಸಂಪುಟ ಸಭೆ ತೀರ್ಮಾನ

ಚುನಾವಣಾ ಸಂದರ್ಭ ದಲ್ಲಿ ರಾಜ್ಯದ ಜನತೆಗೆ ನೀಡಿದ ಭರವಸೆ ಯಂತೆ ನಮ್ಮ ಸರ್ಕಾರ ಒಳಮೀಸಲಾತಿ ತರಲು ತೀರ್ಮಾನಿಸಿದೆ. ನೇಮಕಗೊಳ್ಳುವ ಆಯೋಗಕ್ಕೆ ಸರ್ಕಾರವೇ ಮಾಹಿತಿಗಳನ್ನು ನೀಡಲಿದೆ. ಅದರ ಆಧಾರದ ಮೇಲೆ ಆಯೋಗ, ಒಳಮೀಸಲಾತಿ ವಿಭಜನೆ ಮಾಡಿ ವರದಿ ನೀಡಲಿದ್ದು, ಅದನ್ನು ನಾವು ಅನುಷ್ಠಾನಗೊಳಿಸುತ್ತೇವೆ ಎಂದು ಸಚಿವರು ಒಕ್ಕೊರಲಿನಿಂದ ಹೇಳಿದರು.

ಶಾಶ್ವತ ಹಿಂದುಳಿದ ವರ್ಗಗಳ ಆಯೋಗಗಳಾದ ಕಾಂತರಾಜ್ ಮತ್ತು ಜಯಪ್ರಕಾಶ್ ಹೆಗಡೆ ನೇತೃತ್ವದ ಆಯೋಗಗಳು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಪ್ರಮಾಣದ ಮೇಲೆ ನೀಡಿರುವ ವರದಿಯ ದತ್ತಾಂಶಗಳು ಒಳಮೀಸಲಾತಿ ಕಲ್ಪಿಸಲು ಸಹಕಾರಿಯಾಗಲಿದೆ. ದತ್ತಾಂಶಗಳಲ್ಲಿ ಏನಿದೆ ಎಂಬುದು ನಮಗೆ ತಿಳಿದಿಲ್ಲ. ವರದಿ ಸಂಪುಟದ ಮುಂದೆ ಮಂಡಿಸಿದ ನಂತರ ಮಾಹಿತಿ ದೊರೆಯಲಿದೆ, ಅದೇನೇ ಇರಲಿ, ಇನ್ನು ಮೂರು ತಿಂಗಳಲ್ಲಿ ದಲಿತ ಪಂಗಡಗಳಿಗೆ ಒಳಮೀಸಲಾತಿ ಕಲ್ಪಿಸುವುದಾಗಿ ತಿಳಿಸಿದರು. ಕಳೆದ ಮೂರು ದಶಕಗಳ ಹಿಂದೆ ಒಳಮೀಸಲಾತಿಗೆ ಹೋರಾಟ ನಡೆಸಿದ ಸಂದರ್ಭದಲ್ಲಿ ಎಚ್.ಎಂ.ಕೃಷ್ಣ ನೇತೃತ್ವದ ಸರ್ಕಾರ ಒಳಮೀಸಲಾತಿ ಆಯೋಗ ರಚಿಸಿತ್ತು. ಆಯೋಗವು ಪರಿಶಿಷ್ಟ ಜಾತಿಗಳಿಗೆ ಇದ್ದ ಶೇಕಡ 15ರ ಮೀಸಲಾತಿಯನ್ನು ಎಡಗೈಗೆ ಶೇಕಡ 6, ಬಲಗೈಗೆ ಶೇಕಡ 5.5, ಅಸ್ಪೃಶ್ಯ ಉಪಜಾತಿಗಳಿಗೆ ಶೇಕಡ 3 ಹಾಗೂ ಈ ಮೂರೂ ಗುಂಪುಗಳಿಗೆ ಸೇರದ ಜಾತಿಗಳಿಗೆ ಶೇಕಡ ಒಂದರಷ್ಟು ಮೀಸಲಾತಿ ನೀಡಬಹುದು ಎಂದು 2012ರಲ್ಲಿ ಸದಾನಂದಗೌಡ ನೇತೃತ್ವದ ಸರ್ಕಾರಕ್ಕೆ ಶಿಫಾರಸು ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಸಚಿವ ಸಂಪುಟ ಅನುಮೋದನೆ

ದೇಶಿಯ ಪ್ರವಾಸಿಗರನ್ನು ಆಕರ್ಷಿಸುವ ಮೂಲಕ ದೇಶಿ ಪ್ರವಾಸಿಗರ ಭೇಟಿಯಲ್ಲಿ ದೇಶದಲ್ಲಿಯೇ ಮೊದಲ 3 ರಾಜ್ಯಗಳಲ್ಲಿ ಒಂದಾಗುವುದು ನಮ್ಮ ಗುರಿಯಾಗಿದೆ ಎಂದರು. ವಿಸ್ತೃತ ಚರ್ಚೆಯ ನಂತರ ಸಚಿವ ಸಂಪುಟವು ಕರ್ನಾಟಕ ಪ್ರವಾಸೋದ್ಯಮ ನೀತಿ 2024–29 ಅನ್ನು ಅನುಮೋದಿಸಿದೆ ಮತ್ತು ಹೊಸ ನೀತಿಯಡಿಯಲ್ಲಿ ಸಹಾಯಧನ ಮತ್ತು ಅನುದಾನವನ್ನು ಬಿಡುಗಡೆ ಮಾಡಲು ಒಪ್ಪಿಗೆ ನೀಡಿದೆ ಎಂದು ಎಚ್.ಕೆ. ಪಾಟೀಲ್ ತಿಳಿಸಿದರು.

ಕರ್ನಾಟಕ ಪ್ರವಾಸೋದ್ಯಮದ ಹೊಸ ನೀತಿಯು ಪ್ರವಾಸೋದ್ಯಮ ಕ್ಷೇತ್ರವನ್ನು ಅತ್ಯಂತ ಆದ್ಯತೆಯ ಉತ್ಸಾಹದಾಯಕ ಮತ್ತು ಪುಷ್ಟೀಕರಿಸಿದ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಸಮಾಜದ ಎಲ್ಲಾ ಸ್ತರಗಳ ಬಡ, ಮಧ್ಯಮ ವರ್ಗದ ಮತ್ತು ಮೇಲ್ಮಧ್ಯಮ ವರ್ಗದ ಹಾಗೂ ಗಣ್ಯ ವರ್ಗದ ಪ್ರವಾಸಿ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಹೊಸ ನೀತಿಯನ್ನು ರಚಿಸಲಾಗಿದೆ ಎಂದರು. ಶಾಲಾ–ಬಾಲಕರ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ, ಕೃಷಿ ಪ್ರವಾಸ, ಆರೋಗ್ಯ ಕ್ಷೇತ್ರದ ಹೊಸ ಅನುಭವಗಳ ಘಜಟಟಟಿಛ ಪ್ರವಾಸೋದ್ಯಮ, ಆಧ್ಯಾತ್ಮಿಕ, ಯಾತ್ರಾತೀರ್ಥಗಳ ಪ್ರವಾಸ, ಪಾರಂಪರಿಕ ತಾಣಗಳ ಭೇಟಿ ಅಧ್ಯಯನ ಪ್ರವಾಸ, ಸಾಹಸ ಪ್ರವಾಸೋದ್ಯಮದ ಜೊತೆಗೆ ವಿರಾಮ, ವಿನೋದ, ಜ್ಞಾನಾರ್ಜನೆ, ಮನಃಶಾಂತಿ, ವಿಶ್ರಾಂತಿ ಮುಂತಾದವುಗಳಿಗಾಗಿ ಸಮಗ್ರವಾದ ನೀತಿಯೊಂದನ್ನು ರೂಪಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು. ಈ ಹೊಸ ನೀತಿಯು ಕರ್ನಾಟಕದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆಗಳನ್ನು ಆಕರ್ಷಿಸಲು, ವಿದೇಶಿ ವಿನಿಮಯ ಗಳಿಕೆಯನ್ನು ಹೆಚ್ಚಿಸಲು, ಉದ್ಯೋಗವನ್ನು ಸೃಷ್ಟಿಸಲು, ಕರ್ನಾಟಕದ ಜನರಿಗೆ ಸಾಮಾಜಿಕ–ಆರ್ಥಿಕ ಉನ್ನತಿಯನ್ನು ಸುಗಮಗೊಳಿಸಲು ಮತ್ತು ರಾಜ್ಯದ ಜಿಎಸ್‌ಡಿಪಿಗೆ ಪ್ರವಾಸೋದ್ಯಮ ಕ್ಷೇತ್ರದ ಕೊಡುಗೆಯನ್ನು ಹೆಚ್ಚಿಸಲು ಮೂಲಭೂತ ಬಲವಾದ ಅಡಿಪಾಯವನ್ನು ಒದಗಿಸುತ್ತದೆ ಎಂದರು.

ಪಾಲಿಕೆಯಾಗಿ ಮೇಲ್ದರ್ಜೆಗೆ

ಅಭಿಯಾನದಡಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳನ್ನು ಇನ್ನೂ ಒಂದು ವರ್ಷದವರೆಗೆ ಮುಂದುವರಿಸ ಲಾಗುವುದು ಎಂದರು.

ರಾಜ್ಯ ಗೃಹ ನಿರ್ಮಾಣ ಮಂಡಳಿ ಆನೇಕಲ್ ಸಮೀಪ 100 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಬಹುಮಹಡಿ ಸಮುಚ್ಚಯ ಕಟ್ಟಡಗಳನ್ನು ನಿರ್ಮಿಸಲು ಸಭೆ ಸಮ್ಮತಿಸಿದೆ.

ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಗೆ 127 ಕೋಟಿ ರೂ. ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡಿರುವುದಲ್ಲದೆ, ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ಕಲ್ಪಿಸಲು ಆದ್ಯತೆ ನೀಡಲಾಗುವುದು. 33 ವೃತ್ತಿ ಶಿಕ್ಷಕರಿಗೆ ಬಡ್ತಿ ನೀಡಲು ಸಮ್ಮತಿಸಿರುವ ಸಂಪುಟ, ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ತುರ್ತು ವಿಲೇವಾರಿಗಾಗಿ ರಾಜ್ಯದಲ್ಲಿ 33 ಹೊಸ ಪೊಲೀಸ್ ಠಾಣೆಗಳ ಸ್ಥಾಪನೆಗೆ ಅನುಮೋದನೆ ನೀಡಿದೆ. ಯೋಜನೆಗೆ ತಗಲುವ ವೆಚ್ಚವನ್ನು ಸಮಾಜ ಕಲ್ಯಾಣ ಹಾಗೂ ಗೃಹ ಇಲಾಖೆ ತಲಾ ಶೇಕಡ 50ರಷ್ಟು ಭರಿಸಲಿದೆ ಎಂದರು. ನೂತನ ಪ್ರವಾಸೋದ್ಯಮ ನೀತಿಗೆ ಅನುಮೋದನೆ ನೀಡಿರುವ ಸಂಪುಟ ಸಾಹಸ, ಕೃಷಿ, ಕರಾವಳಿ, ಪಾರಂಪರಿಕ, ಪರಿಸರ, ಶೈಕ್ಷಣಿಕ ಪ್ರವಾಸೋದ್ಯಕ್ಕೆ ಒತ್ತು ನೀಡಲಾಗುವುದು ಎಂದರು. ಇಡೀ ರಾಷ್ಟ್ರದಲ್ಲಿ ಪ್ರವಾಸೋದ್ಯಮದಲ್ಲಿ ಕರ್ನಾಟಕ ಐದನೇ ಸ್ಥಾನಕ್ಕೆ ಬರಬೇಕು ಮತ್ತು ವಿದೇಶಿ ಪ್ರವಾಸಿಗರ ಆಕರ್ಷಣೆ ಗಮನದಲ್ಲಿಟ್ಟುಕೊಂಡು ಈ ನೀತಿ ಜಾರಿಗೊಳಿಸಲಾಗುತ್ತಿದೆ.

ಕನ್ನಡ ಪತ್ರಿಕೆಗಳನ್ನು ಓದುವುದರಿಂದ ಭಾಷಾಶಕ್ತಿ ವೃದ್ಧಿಯಾಗುತ್ತದೆ

ಶಾಸಕ ಟಿ.ಎಸ್.ಶ್ರೀವತ್ಸ ಸಲಹೆ




ದಸರಾ ವಸ್ತುಪ್ರದರ್ಶನದಲ್ಲಿ ಕನ್ನಡ ದಿನಪತ್ರಿಕೆಗಳನ್ನು ಓದುವ ಅಭಿಯಾನ ನಡೆಯಿತು.

ಮೈಸೂರು, ಅ.28(ಎಂಕೆ)– ಪ್ರತಿನಿತ್ಯ ಕನ್ನಡ ದಿನಪತ್ರಿಕೆಗಳನ್ನು ಓದುವುದರಿಂದ ಸಾಮಾನ್ಯ ಜ್ಞಾನದ ಜೊತೆಗೆ ಭಾಷಾ ಶಕ್ತಿ ವೃದ್ಧಿಯಾಗಲಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ತಿಳಿಸಿದರು.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ದಿವಂಗತ ಆರ್.ಚಂದ್ರಶೇಖರ್ ಅವರ 20ನೇ ವರ್ಷದ ಸ್ಮರಣಾರ್ಥ ಸಂದೀಪ್ ಸ್ನೇಹ ಬಳಗ ವತಿಯಿಂದ ಆಯೋಜಿಸಿದ್ದ ಕನ್ನಡ ಪತ್ರಿಕೆಗಳನ್ನು ಓದುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದಸರಾ ವಸ್ತುಪ್ರದರ್ಶನ ವೀಕ್ಷಣೆಗೆ ಆಗಮಿಸುವ ಸಾರ್ವಜನಿಕರು, ಪ್ರವಾಸಿಗರು ಹಾಗೂ ಮಳಿಗೆದಾರರು ಪ್ರತಿದಿನ ಕನ್ನಡ ಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ಪ್ರಸ್ತುತ ದಿನಮಾನದಲ್ಲಿ ನಡೆಯುವ ಘಟನೆಗಳ ಜ್ಞಾನದ ಜೊತೆಗೆ ಭಾಷಾ ಶಕ್ತಿಯೂ ಬೆಳೆಯಲಿದೆ ಎಂದರು.

ಶಿಕ್ಷಣ, ಉದ್ಯಮ, ಆಹಾರ, ಆರೋಗ್ಯ, ಕ್ರೀಡೆ, ಮನರಂಜನೆ, ಸಾಂಸ್ಕೃತಿಕ, ಸರ್ಕಾರದ ಕಾರ್ಯಕ್ರಮಗಳು, ರಾಜಕೀಯ, ಸಾಮಾಜಿಕ, ಧಾರ್ಮಿಕ, ಪರಿಸರ ಸೇರಿದಂತೆ ಸಾಕಷ್ಟು ವಿಷಯಗಳ ಬಗ್ಗೆ ಪತ್ರಿಕೆಗಳಲ್ಲಿ ಮಾಹಿತಿ ದೊರೆಯಲಿದೆ. ಆದ್ದರಿಂದ ಪ್ರತಿಯೊಬ್ಬರು ಪ್ರತಿನಿತ್ಯ ಕನ್ನಡ ದಿನಪತ್ರಿಕೆಗಳನ್ನ ಓದುವ ಅಭ್ಯಾಸ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು. ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಕಸಾಪ ಚಂದ್ರಶೇಖರ್, ಪ್ರಾಧಿಕಾರ ಮ್ಯಾನೇಜರ್ ವೆಂಕಟೇಶ್, ಬಸವ ಬಳಗದ ಚಾಮುಂಡಿಪುರಂ ಅಧ್ಯಕ್ಷ ಸಂದೀಪ್, ಮುಖಂಡರಾದ ಅಹಮದ್, ವೆಂಕಟೇಶ್, ಶಂಕರ್, ನಿರೂಪಕ ಅಜಯ್ ಶಾಸ್ತ್ರಿ, ಗಾಯತ್ರಿ, ಸಂತೋಷ್, ಪಾರ್ವತಿ ಮತ್ತಿತರರಿದ್ದರು.

ಮೂರು ಕ್ಷೇತ್ರಗಳ ಉಪಚುನಾವಣೆ ಗೆಲ್ಲಲು ಸಚಿವರಿಗೆ ಟಾಸ್ಕ್



ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚನ್ನಪಟ್ಟಣದ ಚುನಾವಣೆ ಕುರಿತು ಲೆಕ್ಕಾಚಾರ ಹಾಕುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾವೇರಿ ಜಿಲ್ಲೆಯ ಶಿಗ್ಗಾವಿ ಕ್ಷೇತ್ರದ ಉಪ ಚುನಾವಣೆ ಮೇಲೆ ಕಣ್ಣಿಟ್ಟಿದ್ದಾರೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಎದುರಾಗಿದ್ದ ಬಂಡಾಯದ ಬಿಸಿ ತಣ್ಣಗಾಗಿದೆ. ನವೆಂಬರ್ 13ರಂದು ನಡೆಯುವ ಉಪ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಬೇಕು ಎಂದು ಸಿದ್ದರಾಮಯ್ಯ ಸಚಿವರಿಗೆ ವಿಶೇಷ ಟಾಸ್ಕ್ ನೀಡಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಭಾನುವಾರ ಸಿಎಂ ನಿವಾಸ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವರು, ಸಂಸದರು, ಶಾಸಕರು ಸೇರಿದಂತೆ 100 ಪ್ರಮುಖ ನಾಯಕರೊಂದಿಗೆ ವರ್ಚುವಲ್ ಸಭೆ ನಡೆಸಿ ಪಕ್ಷದ ಕುರಿತು ಚರ್ಚೆ ನಡೆಸಿದರು. ಪ್ರತಿ ಕ್ಷೇತ್ರದಲ್ಲಿ ಇಬ್ಬರು ಸ್ಥಳೀಯರ ಒಳಗೊಂಡ ಐದು ಸದಸ್ಯರ ತಂಡಗಳ ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿರುತ್ತವೆ, ಈ ತಂಡ ಸಿಎಂ, ಡಿಸಿಎಂ ಮತ್ತು ಸುರ್ಜೆವಾಲಾ ಅವರಿಗೆ ವರದಿ ಮಾಡುತ್ತದೆ, ಪಕ್ಷದ ಅಭ್ಯರ್ಥಿಗಳಿಗಾಗಿ ಕೆಲಸ ಮಾಡುವ ಸ್ಥಳೀಯರ ತಂಡ ಪ್ರತಿಯೊಬ್ಬ ನಾಯಕರ ಚಲನವಲನಗಳ ಬಗ್ಗೆ ಮಾಹಿತಿ ನೀಡುತ್ತದೆ. ಯಾವುದೇ ಕಾಂಗ್ರೆಸ್ ನಾಯಕರು ಪ್ರತಿಸ್ಪರ್ಧಿ ನಾಯಕರೊಂದಿಗೆ ಕೈಜೋಡಿಸಿದ್ದಾರೆಯೇ ಎಂದು ಕಂಡುಹಿಡಿಯುವುದು ತಂಡದ ವಿಶೇಷ ಆದೇಶವಾಗಿದೆ.

ವೀರನಾರಿಯರ ಪ್ರತೀಕ ಕಿತ್ತೂರು ರಾಣಿ ಚೆನ್ನಮ್ಮ

ಹಿರಿಯ ಸಾಹಿತಿ ಬನ್ನೂರು ರಾಜು ಬಣ್ಣನೆ



ಮೈಸೂರಿನ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ, ಕಿತ್ತೂರು ವಿಜಯೋತ್ಸವ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಬನ್ನೂರು ರಾಜು ಉದ್ಘಾಟಿಸಿದರು.

ಮೈಸೂರು, ಅ.28– ಕನ್ನಡ ನಾಡಿನ ಸ್ವಾಭಿಮಾನದ ಸಂಕೇತವಾಗಿ ಬ್ರಿಟಿಷರ ವಿರುದ್ಧ ಸಿಡಿದೆದ್ದು ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಯಾಡಿದ ಕಿತ್ತೂರು ರಾಣಿ ಚೆನ್ನಮ್ಮ ನಮ್ಮ ನಾಡಿನ ಚಾರಿತ್ರಿಕ ವೀರನಾರಿಯರ ಪ್ರತಿರೂಪವೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಬಣ್ಣಿಸಿದರು.

ಮೈಸೂರಿನ ಚಾಮರಾಜ ಮೊಹಲ್ಲಾದ ನ್ಯೂ ಸಯ್ಯಾಜಿರಾವ್ ರಸ್ತೆಯ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆ ಮತ್ತು ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗ ಸಂಯುಕ್ತ ಆಶ್ರಯದಲ್ಲಿ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಮತ್ತು ಕಿತ್ತೂರು ವಿಜಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಧಾನ ಭಾಷಣಕಾರರಾಗಿ ಮಾತನಾಡಿದ ಅವರು, ವಾಸ್ತವವಾಗಿ ವೀರನಾರಿ ಕಿತ್ತೂರು ಚೆನ್ನಮ್ಮ ಜನಿಸಿದ್ದು ನವೆಂಬರ್ 23ರಂದು ಆಗಿದ್ದರೂ ಬ್ರಿಟಿಷರ ಸೈನ್ಯದ ವಿರುದ್ಧ ಪ್ರಪ್ರಥಮವಾಗಿ ಹೋರಾಟ ಮಾಡಿ ದಿಗ್ವಿಜಯ ಸಾಧಿಸಿದ ಕಿತ್ತೂರು ಚೆನ್ನಮ್ಮನ ವಿಜಯೋತ್ಸವ ದಿನವಾದ ಅಕ್ಟೋಬರ್ 23ರನ್ನೇ ನಮ್ಮ ಸರ್ಕಾರ ಕಿತ್ತೂರು ರಾಣಿ ಚೆನ್ನಮ್ಮನ ಜಯಂತಿಯಾಗಿ ರಾಜ್ಯಾದ್ಯಂತ ಅಭಿಮಾನದಿಂದ ಆಚರಿಸುತ್ತಿದೆ ಎಂದರು.

ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದೇ ವೇಳೆ 10ನೇ ತರಗತಿಯ ವಿದ್ಯಾರ್ಥಿನಿ ಕು. ಪ್ರೀತಿ ಅವರು ಕಿತ್ತೂರು ರಾಣಿ ಚೆನ್ನಮ್ಮನ ವಿರೋಚಿತ ಮಾತುಗಳನ್ನು ಪ್ರತಿಧ್ವನಿಸುವ ಏಕಪಾತ್ರಾಭಿನಯವನ್ನೂ ಮತ್ತು 8ನೇ ತರಗತಿಯ ವಿದ್ಯಾರ್ಥಿನಿ ಕು. ಬಿ.ಚೈತ್ರ ಅವರು ಸಂಗೊಳ್ಳಿ ರಾಯಣ್ಣನ ಧೀರೋದಾತ್ತ ಏಕಪಾತ್ರಾಭಿನಯ ನೆರೆದವರ ಗಮನ ಸೆಳೆಯಿತು. ಇಂತಹ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿದರು. ಮುಖ್ಯ ಶಿಕ್ಷಕ ಎಚ್.ಎಸ್.ತಿಪ್ಪೇಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಸೌಭಾಗ್ಯ, ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಶಿಕ್ಷಕರಾದ ಹೆಚ್.ಪಿ.ಹರೀಶ್, ಶಿವು, ಎಂ.ಚೇತನ, ಉಷಾ, ಮಂಗಳ ಗೌರಮ್ಮ ಮತ್ತಿತರರು ಉಪಸ್ಥಿತರಿದ್ದರು.

ಶಾಸಕ ಜಿ.ಟಿ.ದೇವೇಗೌಡರಿಂದ ಡಿಎಂಜಿ ಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿವಿಧ ಕಟ್ಟಡ ಉದ್ಘಾಟನೆ





ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಗ್ರಾಮಗಳಲ್ಲಿ ವಿವಿಧ ಕಟ್ಟಡಗಳನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು,ಅ.28– ತಾಲೂಕಿನ ದೊಡ್ಡ ಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಗ್ರಾಮಗಳಲ್ಲಿ ವಿವಿಧ ಕಟ್ಟಡಗಳ ಉದ್ಘಾಟನೆ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆಯನ್ನು ಶಾಸಕ ಜಿ.ಟಿ.ದೇವೇಗೌಡರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ ಸೋಮವಾರ ನೆರವೇರಿಸಿದರು.

ಮಾದಳ್ಳಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಿದ ಶೌಚಾಲಯ, ಅಂಗನವಾಡಿ ಕಟ್ಟಡ, ಕಟ್ಟೆಹುಂಡಿ ಗ್ರಾಮದ ಅಂಗನವಾಡಿ ಕಟ್ಟಡ, ಕುಡಿಯುವ ನೀರಿನ ಟ್ಯಾಂಕ್, ಮಾಣಿಕ್ಯಪುರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ನೂತನ ಕಟ್ಟಡ, ಶೆಟ್ಟಿನಾಯಕನಹಳ್ಳಿಯಲ್ಲಿ ಜಲಜೀವನ ಮಿಷನ್ ಅಡಿ ನಿರ್ಮಿಸಿದ ಕುಡಿಯುವ ನೀರಿನ ಟ್ಯಾಂಕ್, ದೊಡ್ಡಟ್ಟಿಹುಂಡಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡ, ಉದ್ಘಾಟಿಸಿದರು. ಡಿ.ಎಂ.ಜಿ ಹಳ್ಳಿಯಲ್ಲಿ ಬಸ್ ನಿಲ್ದಾಣ ಹಾಗೂ ಸಿಸಿ ರಸ್ತೆಗೆ ಶಂಕುಸ್ಥಾಪನೆ ನೆರವೇರಿಸಿದರು.

ಬಳಿಕ ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಗ್ರಾಮಗಳ ಮೂಲಸೌಕರ್ಯಕ್ಕೆ ಗ್ರಾಮ ಪಂಚಾಯಿತಿ ಸದಸ್ಯರು ಒಕ್ಕೊರಲಿನಿಂದ ಕೆಲಸ ಮಾಡುತ್ತಿದ್ದು, ಅದಕ್ಕೆ ತಕ್ಕಂತೆ ಪಿಡಿಓ ಕೂಡ ಪೂರಕವಾಗಿ ಅಭಿವೃದ್ಧಿ ಮಾಡುತ್ತಿರುವುದು ಪ್ರಶಂಸನೀಯ ಎಂದರು.

ಗ್ರಾಮಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗಬೇಕಿದ್ದರೂ ನನ್ನನ್ನು ಭೇಟಿಯಾಗಿ ಅಹವಾಲು ನೀಡಬಹುದು. ಗ್ರಾಮಗಳಿಗೆ ಭೇಟಿ ನೀಡಿದ್ದಾಗ ಪಡಿತರ ಚೀಟಿ ಹಾಗೂ ಮನೆ ಇಲ್ಲವೆಂದು ಜನರ ಮನವಿ ಮಾಡಿದ್ದಾರೆ. ಗ್ರಾಮಕ್ಕೆ ಸ್ಮಶಾನ ಅಭಿವೃದ್ಧಿಪಡಿಸುವಂತೆ ಕೇಳಿದ್ದಾರೆ. ಮುಂದಿನ ದಿನಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

> “ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸಿರುವ ಅಂಗನವಾಡಿ, ಶಾಲಾ ಶೌಚಾಲಯ ಸೇರಿದಂತೆ ಇನ್ನಿತರ ಕಟ್ಟಡಗಳನ್ನು ಅತ್ಯಂತ ಸಂತೋಷದಿಂದ ಉದ್ಘಾಟಿಸಿದ್ದೇನೆ. ಇದೇ ರೀತಿ ನರೇಗಾ ಯೋಜನೆಯಡಿ ಅನೇಕ ಕಾಮಗಾರಿಗಳನ್ನು ಕೈಗೊಂಡರೆ ಗ್ರಾಮಗಳ ಅಭಿವೃದ್ಧಿಗೆ ಅನುಕೂಲವಾಗಲಿದೆ.
>
> **–ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ಕ್ಷೇತ್ರ**

ರೈತರೂ ತಾವು ವ್ಯವಸಾಯ ಮಾಡುವ ಕೃಷಿ ಜಮೀನುಗಳನ್ನು ಮಾರಾಟ ಮಾಡಬಾರದು. ನೀವೂ ವ್ಯವಸಾಯ ಮಾಡಿ, ಮಕ್ಕಳಿಗೂ ವ್ಯವಸಾಯ ಮಾಡಲು ವರ್ಗಾಯಿಸಿ. ಈ ಹಿಂದೆ ಜಮೀನು ಮಾರಿಕೊಂಡವರು ಇಂದು ಬಿಕ್ಕಟ್ಟಿಗೆ ಸಿಲುಕಿದ್ದಾರೆ. ಕೃಷಿ ಜೊತೆಗೆ ಹೈನುಗಾರಿಕೆಯನ್ನು ಕೈಗೊಂಡು ಜೀವನ ನಡೆಸಿ ಎಂದು ಕಿವಿಮಾತು ಹೇಳಿದರು. ಇದೇ ವೇಳೆ ಗ್ರಾಮ ಪಂಚಾಯಿತಿ ವತಿಯಿಂದ ಅಂಗವಾಡಿಗಳಿಗೆ ವಿವಿಧ ಸಾಮಗ್ರಿಗಳನ್ನು ವಿತರಿಸಲಾಯಿತು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಸುಮಿತ್ರಾ ಮಾದಪ್ಪ, ಉಪಾಧ್ಯಕ್ಷೆ ಪ್ರಭಾ, ತಾಪಂ ಇಓ ಸಿ.ಕೃಷ್ಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ರುಕ್ಮಾಂಗದ, ಮಾಜಿ ಅಧ್ಯಕ್ಷ ಬಸವರಾಜು, ಎಪಿಎಂಸಿ ಸದಸ್ಯ ಕೋಟೆ ಹುಂಡಿ ಮಹದೇವು ಸೇರಿದಂತೆ ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕನ್ನಡ ಹೋರಾಟಗಾರರಿಗೆ ಸ್ಥಾನ ಕಲ್ಪಿಸಲು ಆಗ್ರಹ



ಎಸ್.ಬಾಲಕೃಷ್ಣ

ಮೈಸೂರು, ಅ.28(ಜಿಎ)– ರಾಜ್ಯ ಸರ್ಕಾರ ಕೊಡುವ ರಾಜ್ಯಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯ ಆಯ್ಕೆ ಸಮಿತಿಗೆ ಕನ್ನಡ ಹೋರಾಟಗಾರರನ್ನು ನೇಮಕ ಮಾಡಬೇಕು ಎಂದು ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಆಗ್ರಹಿಸಿದ್ದಾರೆ.

ಈಗಾಗಲೇ ರಾಜ್ಯೋತ್ಸವ ಪ್ರಶಸ್ತಿಯಲ್ಲಿ ಕನ್ನಡ ಹೋರಾಟಗಾರರನ್ನು ಹೊರತುಪಡಿಸಿ ಎಲ್ಲಾ ಕ್ಷೇತ್ರದವರಿಗೂ ಅವಕಾಶ ನೀಡಲಾಗಿದೆ. ಇದರಿಂದಾಗಿ ಹೋರಾಟಗಾರರನ್ನು ಪ್ರಶಸ್ತಿಗೆ ಆಯ್ಕೆ ಮಾಡಲು ಸಮಿತಿಯಲ್ಲಿ ಸದಸ್ಯರೇ ಇಲ್ಲ ಎಂದಿರುವ ಅವರು, ನಾಡು ನುಡಿ ಜಲ ಇನ್ನಿತರ ವಿಷಯಕ್ಕೆ ಆಪತ್ತು ಬಂದಾಗ ಬೀದಿಗಿಳಿದು ಹೋರಾಟ ಮಾಡುವುದು ಚಳುವಳಿಗಾರರು ಈಗಾಗಲೇ ವಿವಿಧ ಕ್ಷೇತ್ರದಲ್ಲಿ ಆಯ್ಕೆ ಪಟ್ಟಿಯಲ್ಲಿ ಇರುವವರು ಸಾಹಿತ್ಯ, ಕ್ರೀಡೆ, ಶಿಕ್ಷಣ, ರಂಗಭೂಮಿ, ಇವರ್ಯಾರು ಸಹ ಬೀದಿಗಿಳಿದು ಹೋರಾಟ ಮಾಡುವುದಿಲ್ಲ. ಇವರಿಗೆ ತೊಂದರೆ ಆದರೆ ಚಳುವಳಿಗಾರರ ಭೇಟಿ ಮಾಡಿ ನಮಗೆ ನ್ಯಾಯ ಕೊಡಿಸಿ ಎಂದು ಅಂಗಲಾಚುತ್ತಾರೆ. ರಾಜಕಾರಣಿಗಳು ಸಹ ಚಳುವಳಿಗಾರರ ಆಶ್ರಯ ಬಯಸುತ್ತಾರೆ.

ನಾಡು, ನುಡಿ ಜಲದ ಬಗ್ಗೆ ಹೋರಾಟ ಮಾಡುವವರನ್ನು ಪ್ರಶಸ್ತಿಗಾಗಿ ಹೋರಾಟಗಾರರೇ ಆಯ್ಕೆ ಮಾಡಿದರೆ ಹೆಮ್ಮೆಯ ವಿಷಯವಾಗುತ್ತಿತ್ತು. ಆದರೆ, ಸರ್ಕಾರ ಚಳವಳಿಗಾರರನ್ನು ಕಡೆಗಣಿಸುತ್ತಿರುವುದು ಎಷ್ಟು ಸರಿ? ನಮ್ಮ ಭಾಷೆಗಾಗಿ ನಾಡು, ನುಡಿ ಜಲಕ್ಕಾಗಿ ಕನ್ನಡ ಶಾಲೆಗಳನ್ನು ಉಳಿಸುವುದಕ್ಕಾಗಿ ಬೀದಿಗಿಳಿದು ಹೋರಾಟ ಮಾಡಿದವರಿಗೆ ಪೋಲಿಸ್‌ನವರು ಕೇಸು ದಾಖಲು ಮಾಡಿ ನ್ಯಾಯಾಲಯಕ್ಕೆ ಅಲೆಯುವಂತೆ ಮಾಡಿದ್ದಾರೆ. ಕೇಸು ದಾಖಲಾಗಿದ್ದರು ಸಹ ಅಂಜದೆ ಬರುತ್ತಿದ್ದೇವೆ. ನಮ್ಮ ಕುಟುಂಬದವರ ಹತ್ತಿರ ಛೀಮಾರಿ ಹಾಕಿಸಿಕೊಂಡು ನಿಮಗೇಕೆ ಬೇಕು ಇವೆಲ್ಲ ಎಂದರು ನಾವುಗಳು ಬಿಡುತ್ತಿಲ್ಲ. ಸರ್ಕಾರ ಹೋರಾಟಗಾರರನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು ಎಷ್ಟು ಸರಿ ಎಂದು ಪತ್ರಿಕಾ ಪ್ರಕಟಣೆ ಮೂಲಕ ಪ್ರಶ್ನಿಸಿದ್ದಾರೆ.

ನ.17ರಂದು ವಿಶೇಷ ಮಕ್ಕಳಗಾಗಿ ‘ತಾರೇ ಜಮೀನ್ ಪರ್’ ಕಾರ್ಯಕ್ರಮ

ಮೈಸೂರು, ಅ.28(ಜಿಎ)–ರೋಟರಿ ಮೈಸೂರು ವತಿಯಿಂದ ನ.17ರಂದು ಬೆಳಗ್ಗೆ 7.30ರಿಂದ ಸಂಜೆ 6ರವರೆಗೆ ನಗರದ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ವಿಶೇಷ ಮಕ್ಕಳಿಗಾಗಿ ‘ತಾರೇ ಜಮೀನ್ ಪರ್’ ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಜಿ ಗವರ್ನರ್ ಹಾಗೂ ಉದ್ಯಮಿ ಗುರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ವಿಶೇಷ ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರತ್ಯೇಕವಾಗಿ ಹಾಗೂ ಸಾಮೂಹಿಕವಾಗಿ ಪಾಲ್ಗೊಂಡು ಕಲೆ, ನಟನೆ, ನಾಟಕ, ಛದ್ಮವೇಷ, ಚಿತ್ರಕಲೆ, ನೃತ್ಯಗಳನ್ನು ಪ್ರದರ್ಶಿಸಲು ಅವಕಾಶ ನೀಡಲಾಗುತ್ತಿದ್ದು, ಸುಮಾರು 900 ಮಕ್ಕಳು ಪಾಲ್ಗೊಳ್ಳುತ್ತಿದ್ದಾರೆ. ಇವರಿಗೆ ತಿಂಡಿ, ಊಟದ ವ್ಯವಸ್ಥೆ ಮಾಡಲಾಗಿದೆ. ವಿಶೇಷ ಮಕ್ಕಳು ಒಂದು ದಿನವನ್ನು ಅತ್ಯಂತ ತೃಪ್ತಿದಾಯಕ ಹಾಗೂ ಸಂತೋಷಭರಿತರಾಗಿ ಕಳೆಯುವಂತೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಎಂ.ಸಿ.ಎಸ್.ಮನೋಹರ್, ಕಾರ್ಯದರ್ಶಿ ಕೆ.ಎನ್.ಸುಹಾಸ್, ಅಧ್ಯಕ್ಷ ಎನ್.ಪ್ರವೀಣ್, ಪೊನ್ನಣ್ಣ ಮೊದಲಾದವರು ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಅ.28– ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದ ನಿರ್ವಹಣಾ ಕಾಮಗಾರಿ ನಿಮಿತ್ತ ಅ.29ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಭುಗತಹಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಶೃಂಗೇರಿ ಶ್ರೀಗಳ ಸನ್ಯಾಸ ಸ್ವೀಕಾರ ಸುವರ್ಣ ಮಹೋತ್ಸವ ಅಂಗವಾಗಿ ಪುಸ್ತಕ ವಿತರಣೆ



ಶ್ರೀ ಶೃಂಗೇರಿ ಶಾರದಾ ಪೀಠದ ಶ್ರೀ ಭಾರತೀ ತೀರ್ಥ ಸ್ವಾಮೀಜಿ ಸನ್ಯಾಸ ಸ್ವೀಕಾರ ಸುವರ್ಣ ಮಹೋತ್ಸವದ ಅಂಗವಾಗಿ ಮೈಸೂರಿನ ಸುಬ್ಬಣ್ಣ ಸಾರ್ವಜನಿಕ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಲೇಖನ ಸಾಮಗ್ರಿ ವಿತರಿಸಲಾಯಿತು.

ಮೈಸೂರು, ಅ.28(ಎಸ್‌ಬಿಡಿ)– ಶ್ರೀ ಶೃಂಗೇರಿ ಶಾರದಾ ಪೀಠದ ಶ್ರೀ ಭಾರತೀ ತೀರ್ಥ ಸ್ವಾಮೀಜಿ ಸನ್ಯಾಸ ಸ್ವೀಕಾರ ಸುವರ್ಣ ಮಹೋತ್ಸವದ ಅಂಗವಾಗಿ ಎಸ್.ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಸಹಯೋಗದಲ್ಲಿ ವಿದ್ಯಾರಣ್ಯ ಪುರಂನಲ್ಲಿರುವ ಸುಬ್ಬಣ್ಣ ಸಾರ್ವಜನಿಕ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಜಗದ್ಗುರು ಅಭಿನವ ವಿದ್ಯಾತೀರ್ಥರ ಶಿಷ್ಯರಾಗಿ 1974ರಲ್ಲಿ ಸನ್ಯಾಸತ್ವ ಸ್ವೀಕರಿಸಿದ ಶ್ರೀ ಭಾರತೀ ತೀರ್ಥ ಸ್ವಾಮೀಜಿಯವರು, ಹಿರಿಯ ಜಗದ್ಗುರುಗಳೊಂದಿಗೆ ಧರ್ಮ ಪ್ರಚಾರಕ್ಕಾಗಿ ದೇಶದ ಉದ್ದಗಲಕ್ಕೂ ಸಂಚರಿಸಿದರು. ಬಳಿಕ ತಾವೇ ಹಲವು ಬಾರಿ ಧರ್ಮ ಪ್ರಚಾರ ಯಾತ್ರೆ ನಡೆಸಿದ್ದಾರೆ. ಮಠದಲ್ಲಿ ಎಲ್ಲಾ ಭಕ್ತರಿಗೂ ಅನ್ನ ದಾಸೋಹದ ಜೊತೆಗೆ ನಿತ್ಯ ಸಾವಿರಾರು ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಕಲ್ಪಿಸುತ್ತಿದ್ದಾರೆ. ಶ್ರೀ ಶೃಂಗೇರಿ ಪೀಠದಿಂದ ಹಲವು ರೀತಿಯಲ್ಲಿ ಸಾಮಾಜಿಕ ಸೇವಾ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ ಎಂದು ಬಣ್ಣಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್ ಮಾತನಾಡಿ, ಜಗದ್ಗುರು ಶ್ರೀ ಭಾರತಿ ತೀರ್ಥ ಮಹಾ ಸನ್ನಿಧಾನಗಳವರು ಶ್ರೀ ಶಾರದಾ ಪೀಠದ 36ನೇ ಪೀಠಾಧಿಪತಿಗಳಾಗಿ 50 ವರ್ಷಗಳಿಂದ ಸನಾತನ ಧರ್ಮದ ರಕ್ಷಣೆಗೆ ಅವಿಸ್ಮರಣೀಯ ಸೇವೆ ನೀಡಿದ್ದಾರೆ. ಸನ್ಯಾಸ ಸ್ವೀಕಾರ ಸ್ವರ್ಣ ಮಹೋತ್ಸವದ ಸುಸಂದರ್ಭದಲ್ಲಿ ಶ್ರೀ ಶಂಕರ ಭಗವಾದ್ಪಾದ ಆಚಾರ್ಯರ 32 ಅಡಿ ಎತ್ತರದ ಸುಮಾರು 750 ಟನ್ ತೂಕದ ಭವ್ಯ ಶಿಲಾಮೂರ್ತಿ ಲೋಕಾರ್ಪಣೆ ಮಾಡಿರುವುದು ಸಂತಸದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯರಾದ ಮ.ವಿ.ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಜೆಡಿಎಸ್ ಮುಖಂಡ ಎಸ್.ಪ್ರಕಾಶ್ ಪ್ರಿಯದರ್ಶನ್, ಕಡಕೋಳ ಜಗದೀಶ್, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ವಿಕ್ರಂ ಅಯ್ಯಂಗಾರ್, ಅಜಯ್‌ಶಾಸ್ತ್ರಿ, ಕೆ.ಎಂ.ನಿಶಾಂತ್, ಎಂ.ವಿ.ನಾಗೇಂದ್ರಬಾಬು, ಟಿ.ಎಸ್.ಅರುಣ್, ರಂಗನಾಥ್, ಪ್ರಶಾಂತ್, ಕೆ.ಜೆ.ರಮೇಶ್, ನಂದೀಶ್ ನಾಯಕ್, ಶ್ರೀಕಾಂತ್ ಕಶ್ಯಪ್, ವೀರಭದ್ರಸ್ವಾಮಿ, ಶ್ರೀಧರ್, ಛಾಯಾ, ಯಶವಂತ್‌ಕುಮಾರ್, ಮಹೇಶ್, ರಾಜೇಶ್, ಅಕ್ಷಯ್ ಪ್ರಿಯದರ್ಶನ್, ಹರ್ಷಿತ್ ಎಸ್.ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಕೇಂದ್ರ ಸಚಿವ ವಿ.ಸೋಮಣ್ಣ ಮೈಸೂರು ಪ್ರವಾಸ



ಮೈಸೂರು,ಅ.28–ರೈಲ್ವೆ ಹಾಗೂ ಜಲ ಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಅ.29ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅ.29ರಂದು ಬೆಳಗ್ಗೆ 9.30 ಗಂಟೆಗೆ ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ, ಮಾನಸಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಲಾಗಿರುವ ರೋಜ್‌ಗಾರ್ ಮೇಳದಲ್ಲಿ ಭಾಗವಹಿಸಲಿದ್ದು, ಮಧ್ಯಾಹ್ನ 3.30 ಗಂಟೆಗೆ ಬೆಂಗಳೂರಿಗೆ ತೆರಳಲಿದ್ದಾರೆ.

ಇಂದು ಕ್ಲಸ್ಟರ್ ಔಟ್‌ರೀಚ್ ಕಾರ್ಯಕ್ರಮ

ಮೈಸೂರು,ಅ.28– ಎಂಎಸ್‌ಎಂಇಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವುದು (RAMP) ಯೋಜನೆಯಡಿಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕರ್ನಾಟಕ ಸರ್ಕಾರ, ಎಂಎಸ್‌ಎಂಇ ಸೌಲಭ್ಯ ಕಚೇರಿ ಭಾರತ ಸರ್ಕಾರ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (ಸಿಡ್ಬಿ), ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ (ವಿಟಿಪಿಸಿ) ಮತ್ತು ಕಾಸಿಯಾ ಸಹಯೋಗದಲ್ಲಿ ಅ.29ರಂದು ಮಧ್ಯಾಹ್ನ 3 ಗಂಟೆಗೆ ಹೋಟೆಲ್ ದಿ ಪ್ರೆಸಿಡೆಂಟ್‌ನಲ್ಲಿ ಎಂಎಸ್‌ಎಂಇ ಕ್ಲಸ್ಟರ್ ಔಟ್‌ರೀಚ್ ಕಾರ್ಯಕ್ರಮ ಆಯೋಜಿಸಲಾಗಿದೆ. ಹೂಟಗಳ್ಳಿ ನಗರಸಭೆ ಪೌರಾಯುಕ್ತ ಚಂದ್ರಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಾಸಿಯಾ ಅಧ್ಯಕ್ಷ ರಾಜಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಎಂಎಸ್‌ಎಂಇ ಸೌಲಭ್ಯ ಕಚೇರಿ ಜಂಟಿ ನಿರ್ದೇಶಕ, ಹೆಚ್‌ಓ ಡಾ.ಕೆ.ಸಾಕ್ರೆಟಿಸ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕೆ ಶಿವಲಿಂಗಯ್ಯ,ಸಿಡ್ಬಿಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಆಲ್ಬರ್ಟ್ ಜೆರ್ಮಿ ಹಾಗೂ ರಫ್ತು ಸೌಲಭ್ಯ ಕೇಂದ್ರದ ಉಪನಿರ್ದೇಶಕಿ ಮೇಘಲಾ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜೆಸಿಐ ಕಮಲ್ ಪಾತ್ರ ಪ್ರಶಸ್ತಿ



ಮೈಸೂರಿನ ಜೆಕೆ ಗೋಲ್ಡನ್ ರಾಯಭಾರ ಕಚೇರಿಯಲ್ಲಿ ನಡೆದ ಜೆಸಿಐ ಜೋನ್–ಕಾನ್–2024 ಕಾರ್ಯಕ್ರಮದಲ್ಲಿ ವಿಎಸ್‌ಜಿ ಗ್ರೂಪ್ ಆಫ್ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕ ಕಾರ್ತಿಕ್ ಗಣಪತಿ ಅವರಿಗೆ ಜೆಸಿಐ ಕಮಲ್ ಪಾತ್ರ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ರಾಷ್ಟ್ರೀಯ ಅಧ್ಯಕ್ಷ ವಿ.ಬಬ್ರು, ಭರತ್ ಆಚಾರ್ಯ, ರಂಗಸ್ವಾಮಿ, ಕಾರ್ತಿಕ್ ಗಣಪತಿ, ಆಶಾ ಜೈನ್, ಅಶ್ವಥ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಮುಖಂಡ, ಚಿತ್ರನಟ ಜಯಪ್ರಕಾಶ್ ಸಂಭ್ರಮದ ಹುಟ್ಟುಹಬ್ಬ ಆಚರಣೆ





ಮೈಸೂರು,ಅ.28(ಬಿಎಲ್‌ಯು)– ಬಿಜೆಪಿ ಮುಖಂಡರೂ ಆದ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ಚಿತ್ರನಟ ಎಸ್.ಜಯಪ್ರಕಾಶ್ (ಜೆಪಿ) ಅವರ ಹುಟ್ಟುಹಬ್ಬವನ್ನು ಇಂದು ಅವರ ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು.

ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಇಂದು ಜೆಪಿ ಅಭಿಮಾನಿ ಬಳಗ ಮೈಸೂರಿನ ಹಲವೆಡೆ ಕಾರ್ಯಕ್ರಮ ಆಯೋಜಿಸಿತ್ತು. ಬೆಳಿಗ್ಗೆ ನಂಜನಗೂಡಿಗೆ ಭೇಟಿ ನೀಡಿದ್ದ ಜಯಪ್ರಕಾಶ್ ನಂಜುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ತರುವಾಯ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಕೂಡ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಒಕ್ಕಲಗೇರಿ ಹಾಗೂ ಅಕ್ಕಿ ಚೌಕದ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಜಯಪ್ರಕಾಶ್ ಅವರಿಗೆ ಸನ್ಮಾನ ಮಾಡಲಾಯಿತು. ಈ ವೇಳೆ ಅಭಿಮಾನಿಗಳು ಸಿಹಿ ಹಂಚಿ ಸಂಭ್ರಮಿಸಿದರು. ಪ್ರತಿ ವರ್ಷದಂತೆ ಅಂಧ ಮಕ್ಕಳ ಶಾಲೆ ವಿದ್ಯಾರ್ಥಿಗಳಿಗೆ ಊಟ ಬಡಿಸಿದರು. ಮಾತೃ ಮಂಡಳಿ ವಿಶೇಷಚೇತನರ ಶಾಲೆಯಲ್ಲಿ ವಿದ್ಯಾರ್ಥಿಗಳ ಜೊತೆ ಹುಟ್ಟುಹಬ್ಬ ಆಚರಿಸಿದರು. ಗೋಕುಲಂನ ಬಾಪೂಜಿ ಆನಂದಾಶ್ರಮದಲ್ಲಿ ವೃದ್ಧರಿಗೆ ಹಣ್ಣು ವಿತರಣೆ ಮಾಡಲಾಯಿತು. ಕೆ.ಆರ್.ಆಸ್ಪತ್ರೆಯಲ್ಲಿ ರೋಗಿಗಳಿಗೆ ಜೆಪಿ ಅಭಿಮಾನಿಗಳು ಹಣ್ಣು ವಿತರಿಸಿದರು. ಬಿಜೆಪಿ ಮುಖಂಡರಾದ ಭಾಗ್ಯಮ್ಮ ಹನುಮಂತಗೌಡ, ನಾಗರಾಜು, ರೋಹಿಣಿ ರಘು, ಶಿವ ಮಧು, ಕಾವೇರಿ ಕ್ರಿಯಾ ಸಮಿತಿಯ ವರಕೋಡು ಕೃಷ್ಣೇಗೌಡ, ಹನುಮಂತಯ್ಯ, ನಾಗರತ್ನ, ಸುರೇಶ್, ಶಿವಶಂಕರ್, ವಿದ್ಯಾರ್ಥಿ ಕ್ರಿಯಾ ಸಮಿತಿಯ ಅಶೋಕ್, ಕಿರಣ್, ಅಭಿಷೇಕ್, ಸಂಜಯ್, ವಿಶ್ವ ಗಾಯತ್ರಿ, ಮೀನಾ, ಪವನಿ, ಮಹೇಶ್, ಸೂರ್ಯ ಹಲವರು ಪಾಲ್ಗೊಂಡಿದ್ದರು.

ದೇಶ – ವಿದೇಶ

ಅಕ್ಟೋಬರ್ ತಿಂಗಳು ‘ಹಿಂದೂ ಪರಂಪರೆ ಮಾಸ’: ಆಸ್ಟ್ರೇಲಿಯಾ ಮಹತ್ವದ ಘೋಷಣೆ



ಸಿಡ್ನಿ: ಮಹತ್ವದ ಬೆಳವಣಿಗೆಯಲ್ಲಿ ಆಸ್ಟ್ರೇಲಿಯಾ ಸರ್ಕಾರ ಅಕ್ಟೋಬರ್ ಅನ್ನು ‘ಹಿಂದೂ ಪರಂಪರೆ ಮಾಸ’ ಎಂದು ಘೋಷಿಸಿದೆ. ಆಸ್ಟ್ರೇಲಿಯಾ ಸಂಸದ ಆಂಡ್ರ್ಯೂ ಚಾರ್ಲ್ಟನ್ ಅಕ್ಟೋಬರ್ ತಿಂಗಳನ್ನು ‘ಹಿಂದೂ ಪರಂಪರೆ ಮಾಸ’ ಎಂದು ಘೋಷಿಸಿದ್ದು, ಈ ಘೋಷಣೆ ಆಸ್ಟ್ರೇಲಿಯಾ ಸಂಸದ ಆಂಡ್ರ್ಯೂ ಚಾರ್ಲ್ಟನ್ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. ಜಗತ್ತಿನ ಹಲವು ದೇಶಗಳಲ್ಲಿ ದೀಪಾವಳಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಹಿಂದೂಗಳು ಪ್ರತಿವರ್ಷ ದೀಪಾವಳಿಯನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಈ ವರ್ಷ ಆಸ್ಟ್ರೇಲಿಯಾ ಅಕ್ಟೋಬರ್ ತಿಂಗಳನ್ನು ‘ಹಿಂದೂ ಪರಂಪರೆ ಮಾಸ’ ಎಂದು ಘೋಷಿಸಿದೆ. ಈ ಘೋಷಣೆಯು ಬಹುಸಾಂಸ್ಕೃತಿಕತೆಗೆ ಆಸ್ಟ್ರೇಲಿಯಾದ ಬದ್ಧತೆಯನ್ನು ಸಂಕೇತಿಸುತ್ತದೆ ಮತ್ತು ರಾಷ್ಟ್ರದ ಸಾಮಾಜಿಕ ರಚನೆಗೆ ಹಿಂದೂ ಸಮುದಾಯದ ಕೊಡುಗೆಗಳನ್ನು ಗುರುತಿಸುತ್ತದೆ. ಹಿಂದೂ ಪರಂಪರೆಯ ತಿಂಗಳು ಆಸ್ಟ್ರೇಲಿಯನ್ನರಿಗೆ ಹಿಂದೂ ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಅನುಭವಿಸಲು ಮತ್ತು ತೊಡಗಿಸಿಕೊಳ್ಳಲು ಅವಕಾಶವನ್ನು ಒದಗಿಸುತ್ತದೆ.

ಪ್ರಭಾ ಅರುಣ್‌ಕುಮಾರ್ ಹತ್ಯೆ: ಸುಳಿವು ನೀಡಿದವರಿಗೆ 1 ಮಿಲಿಯನ್ ಡಾಲರ್



ಸಿಡ್ನಿ: ಸುಮಾರು ಒಂದು ದಶಕದ ಹಿಂದೆ ನಡೆದ ಕರ್ನಾಟಕ ಮೂಲದ ಸಾಫ್ಟ್‌ವೇರ್ ಎಂಜಿನಿಯರ್ ಪ್ರಭಾ ಅರುಣ್‌ಕುಮಾರ್ ಅವರ ಹತ್ಯೆ ಪ್ರಕರಣ ಬಗೆಹರಿಸಲು ಸಹಾಯ ಮಾಡುವ ವ್ಯಕ್ತಿಗೆ 1 ಮಿಲಿಯನ್ ಡಾಲರ್ ಬಹುಮಾನ ನೀಡುವುದಾಗಿ ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ಸರ್ಕಾರ ಘೋಷಣೆ ಮಾಡಿದೆ. ಪ್ರಭಾ ಅರುಣ್‌ಕುಮಾರ್ ಅವರನ್ನು 2015ರ ಮಾರ್ಚ್ 7ರಂದು ಸಿಡ್ನಿಯ ಪಶ್ಚಿಮದಲ್ಲಿನ ಪರಮಟ್ಟ ಪಾರ್ಕ್‌ನಲ್ಲಿ ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದ 41 ವರ್ಷದ ಪ್ರಭಾ ಅವರ ಕತ್ತಿಗೆ ಇರಿದು ಹತ್ಯೆ ಮಾಡಲಾಗಿತ್ತು. ಘಟನೆ ನಡೆದು 10 ವರ್ಷಗಳಾಗುತ್ತಾ ಬಂದರೂ ಈವರೆಗೂ ಹಂತಕರ ಸುಳಿವು ದೊರಕಿಲ್ಲ. ಇದು ಆಸ್ಟ್ರೇಲಿಯಾ ಪೊಲೀಸರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ತನಿಖೆ ಸಂದರ್ಭದಲ್ಲಿ ಪೊಲೀಸ್ ಪಡೆಯ ಪತ್ತೇದಾರರು ಅನೇಕ ಹಂತದ ವಿಚಾರಣೆಗಳನ್ನು ನಡೆಸಿದ್ದಾರೆ. ಮಾಹಿತಿಗಾಗಿ ಸಾರ್ವಜನಿಕರ ನೆರವಿಗಾಗಿ ಹಲವು ಬಾರಿ ಮನವಿಗಳನ್ನು ಮಾಡಲಾಗಿದೆ. ಆದರೂ ಈ ಪ್ರಕರಣ ಬಗೆಹರಿಯದೆ ಉಳಿದಿದೆ ಎಂದು ಎನ್‌ಎಸ್‌ಡಬ್ಲ್ಯೂ ಪೊಲೀಸರು ಹೇಳಿಕೆ ನೀಡಿದ್ದಾರೆ.

ಅಮೆರಿಕದಿಂದ ಭಾರತೀಯರ ಗಡೀಪಾರು: ಅಕ್ರಮ ವಲಸೆ ತಡೆಯ ಸಹಜ ಪ್ರಕ್ರಿಯೆ



ವಾಷಿಂಗ್‌ಟನ್: ಅಮೆರಿಕದಲ್ಲಿ ಅಕ್ರಮವಾಗಿ ನೆಲೆಸಿರುವ ಭಾರತೀಯರನ್ನು ತಾಯ್ನಾಡಿಗೆ ಗಡೀಪಾರು ಮಾಡುವುದಾಗಿ ಅಲ್ಲಿನ ಸರ್ಕಾರ ಘೋಷಿಸಿದೆ. ಇದು ಎರಡು ರಾಷ್ಟ್ರಗಳ ನಡುವಿನ ಸಾಮಾನ್ಯ ಪ್ರಕ್ರಿಯೆ, ಅಕ್ರಮ ವಲಸೆಯನ್ನು ತಡೆಯುವ ವಿಧಾನವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಶನಿವಾರವಷ್ಟೇ ಅಮೆರಿಕನ್ ಅಧಿಕಾರಿಗಳು ದೇಶದಲ್ಲಿ ಅಕ್ರಮವಾಗಿ ತಂಗಿರುವ ಭಾರತೀಯ ಪ್ರಜೆಗಳ ಗಡಿಪಾರಿಗೆ ಸಿದ್ಧತೆ ನಡೆಸಲಾಗಿದೆ ಎಂದು ತಿಳಿಸಿದ್ದರು. ಎರಡೂ ರಾಷ್ಟ್ರಗಳ ನಡುವೆ ಉತ್ತಮ ಬಾಂಧವ್ಯ ವಿದ್ದರೂ, ಭಾರತೀಯರ ಗಡೀಪಾರು ಕ್ರಮದ ವಿರುದ್ಧ ಆಕ್ಷೇಪ ವ್ಯಕ್ತವಾಗಿತ್ತು. ಹೀಗಾಗಿ, ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಎರಡೂ ರಾಷ್ಟ್ರಗಳು ಸಹಕಾರದ ಭಾಗವಾಗಿ ಅಕ್ರಮ ವಲಸೆಯನ್ನು ತಡೆಯುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ.

ಅಕ್ಟೋಬರ್ 22 ರಂದು ಅಮೆರಿಕನ್ ವಲಸೆ ಮತ್ತು ಕಸ್ಟಮ್ಸ್ ಎನ್‌ಫೋರ್ಸ್‌ಮೆಂಟ್ ಮೂಲಕ ಅಮೆರಿಕನ್ ಡಿಪಾರ್ಟ್‌ಮೆಂಟ್ ಆಫ್ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಪ್ರಕಾರ ಅಮೆರಿಕದಲ್ಲಿ ಉಳಿದುಕೊಳ್ಳಲು ಅಗತ್ಯ ನಿಯಮಗಳನ್ನು ಪಾಲಿಸದ ವಲಸಿಗರನ್ನು ದೇಶದಿಂದ ಹೊರಕಳುಹಿಸಲಾಗುವುದು ಎಂದಿದೆ.

ತಿರುಪತಿ ಇಸ್ಕಾನ್ ದೇಗುಲಕ್ಕೆ ಮತ್ತೆ ಬಾಂಬ್ ಬೆದರಿಕೆ



ಅಮರಾವತಿ: ತಿರುಪತಿ ಇಸ್ಕಾನ್ ದೇಗುಲಕ್ಕೆ ಸೋಮವಾರ ಮತ್ತೆ ಬಾಂಬ್ ಬೆದರಿಕೆ ಬಂದಿದ್ದು, ಕೇವಲ 3 ದಿನಗಳ ಅಂತರದಲ್ಲಿ 4ನೇ ಬಾರಿಗೆ ಬೆದರಿಕೆ ಇ–ಮೇಲ್ ಬಂದಿದೆ.

ಆಂಧ್ರಪ್ರದೇಶದ ತಿರುಪತಿಯಲ್ಲಿರುವ ಇಸ್ಕಾನ್ ದೇವಸ್ಥಾನಕ್ಕೆ ಭಾನುವಾರ ತಡರಾತ್ರಿ ಬಾಂಬ್ ಬೆದರಿಕೆ ಬಂದಿದ್ದು, ಈ ಹಿನ್ನೆಲೆಯಲ್ಲಿ ದೇವಸ್ಥಾನದ ಭದ್ರತೆಯನ್ನು ಹೆಚ್ಚಿಸಲಾಗಿದೆ. ಪಾಕಿಸ್ತಾನದ ಐಎಸ್‌ಐ ಸಂಘಟನೆಯ ಉಗ್ರರು ದೇವಾಲಯವನ್ನು ಸ್ಫೋಟಿಸಲಿದ್ದಾರೆ ಎಂದು ಹೇಳುವ ಇಮೇಲ್ ಒಂದು ದೇವಸ್ಥಾನದ ಸಿಬ್ಬಂದಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೂಡಲೇ ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳದ ತಂಡಗಳು ದೇವಸ್ಥಾನಕ್ಕೆ ಆಗಮಿಸಿ ದೇವಾಲಯದಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ. ಆದರೆ, ದೇವಸ್ಥಾನದ ಆವರಣದಲ್ಲಿ ಯಾವುದೇ ಸ್ಫೋಟಕ ಸೇರಿದಂತೆ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ. ಇಸ್ಕಾನ್ ದೇಗುಲಕ್ಕೆ ಬೆದರಿಕೆ ಇ–ಮೇಲ್ ಇದೇ ಮೊದಲೇನಲ್ಲ. ಈ ಹಿಂದೆ 3 ಬಾರಿ ಇಂತಹ ಬೆದರಿಕೆ ಇ–ಮೇಲ್‌ಗಳು ಬಂದಿದ್ದು, ಇದು ನಾಲ್ಕನೇ ಬಾರಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಸದ ಪಪ್ಪು ಯಾದವ್‌ಗೆ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಕೊಲೆ ಬೆದರಿಕೆ



ಪಾಟ್ನಾ: ಬಿಹಾರದ ಪುರ್ನಿಯಾದ ಸ್ವತಂತ್ರ ಪಕ್ಷದ ಸಂಸದ ಪಪ್ಪು ಯಾದವ್‌ಗೆ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನಿಂದ ಕೊಲೆ ಬೆದರಿಕೆ ಸಂದೇಶ ಬಂದಿದೆ. ಗ್ಯಾಂಗಸ್ಟರ್ ಲಾರೆನ್ಸ್ ಬಿಷ್ಣೋಯ್‌ನಂತಹ ಕ್ರಿಮಿನಲ್‌ನ ಜಾಲವನ್ನು 24 ಗಂಟೆಗಳ ಒಳಗೆ ಕೆಡವುದಾಗಿ ಸಂಸದ ಪಪ್ಪು ಯಾದವ್ ಸವಾಲು ಹಾಕಿದ್ದರು. ಸವಾಲ್ ಹಾಕಿದ ಬೆನ್ನಲ್ಲೇ ಈ ಬೆದರಿಕೆ ಸಂದೇಶ ಬಂದಿದೆ. ಬಾಬಾ ಸಿದ್ದಿಕಿ ಹತ್ಯೆ ಬಳಿಕ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ವಿರುದ್ಧ ಮಾತನಾಡಿದ್ದ ಯಾದವ್, ಸರ್ಕಾರದ ಬೆಂಬಲಿತ ಮಾಜಿ ಸಚಿವರ ಹತ್ಯೆಯು ಮಹಾರಾಷ್ಟ್ರದಲ್ಲಿ ಸಂಪೂರ್ಣ ಕಾನೂನು ಸುವ್ಯವಸ್ಥೆ ಹಾಳಾಗಿರುವುದು ಎತ್ತಿ ತೋರಿಸುತ್ತದೆ. ಬಿಜೆಪಿ ನೇತೃತ್ವದ ಸರ್ಕಾರವು ತನ್ನ ಪ್ರಭಾವಿ ನಾಯಕರನ್ನು ರಕ್ಷಿಸಲು ಸಾಧ್ಯವಾಗದಿದ್ದರೆ, ಸಾಮಾನ್ಯ ಜನರನ್ನು ರಕ್ಷಿಸುವ ಭರವಸೆ ಇದೆಯಾ? ನಾನು ಈ ಕ್ರಿಮಿನಲ್ ಜಾಲವನ್ನು 24 ಗಂಟೆಗಳ ಒಳಗೆ ಕೆಡವುದಾಗಿ ಹೇಳಿದ್ದರು. ಈ ಹೇಳಿಕೆ ಬೆನ್ನಲ್ಲೇ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನಿಂದ ಆಡಿಯೋ ಸಂದೇಶದ ಮೂಲಕ ವ್ಯಾಟ್ಸಪ್‌ಗೆ ಬೆದರಿಕೆ ಬಂದಿದೆ. ನಿಮ್ಮ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ನಟ ಸಲ್ಮಾನ್ ಖಾನ್‌ನ ಸಮಸ್ಯೆಗಳಿಂದ ದೂರವಿರಬೇಕು, ಇದನ್ನು ನಿರ್ಲಕ್ಷಿಸಿದರೆ ಕೊಲ್ಲುವುದಾಗಿ ಆಡಿಯೋದಲ್ಲಿ ಬೆದರಿಕೆ ಹಾಕಿದ್ದಾರೆ.

ಮೈಸೂರು ಮಿತ್ರ

ಕೇರಳದ ಬಂದಡ್ಕದಲ್ಲಿ ಗಡಿನಾಡ ಉತ್ಸವ

- ಗ್ರಾಮದಲ್ಲಿ ಸಡಗರ, ಸಂಭ್ರಮ
- ಅರೆಭಾಷೆ ಸಂಸ್ಕೃತಿ, ಸಾಹಿತ್ಯ ಅಕಾಡೆಮಿ ವತಿಯಿಂದ ಮೆರವಣಿಗೆ



ಕೇರಳದ ಬಂದಡ್ಕದಲ್ಲಿ ನಡೆದ ಗಡಿನಾಡ ಅರೆಭಾಷೆ ಉತ್ಸವದ ಮೆರವಣಿಗೆಯಲ್ಲಿ ಪೂರ್ಣಕುಂಭ ಹಿಡಿದ ಮಹಿಳೆಯರು ಜರತಾರಿ ಸೀರೆಯುಟ್ಟು ಕಂಗೊಳಿಸುತ್ತಿದ್ದರು.

ಮಡಿಕೇರಿ, ಅ.28– ಕೇರಳದ ಬಂದಡ್ಕದಲ್ಲಿ ನಡೆದ ಗಡಿನಾಡ ಅರೆಭಾಷೆ ಉತ್ಸವ ಇಡೀ ಊರೇ ಹಬ್ಬದ ವಾತಾವರಣ ಮೂಡಿಸಿತು. ಸಭಾ ಕಾರ್ಯಕ್ರಮಕ್ಕೂ ಮುನ್ನ ನಡೆದ ಮೆರವಣಿಗೆ ಕಾರ್ಯಕ್ರಮಕ್ಕೆ ಮುಕುಟವಿದ್ದಂತಿತ್ತು.

ಬಂದಡ್ಕದ ಆರ್ಟ್ ಆಫ್ ಲಿವಿಂಗ್ ಜ್ಞಾನ ಮಂದಿರದಿಂದ ಹೊರಟ ಮೆರವಣಿಗೆಗೆ ಬಂದಡ್ಕದ ಹಿರಿಯ ವರ್ತಕ ಕೃಷ್ಣಪ್ಪ ಕ್ಯೊಂಗಾಜೆ ಹಾಗೂ ರವಿಪ್ರಸಾದ್ ಇಳಂದಿಲ ಚಾಲನೆ ನೀಡಿದರು. ಬಂದಡ್ಕ ಮೂಲಕ ಸಾಗಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ಬಂದ ಮೆರವಣಿಗೆ ಹಬ್ಬದ ಮತ್ತಷ್ಟು ವಾತಾವರಣ ನಿರ್ಮಾಣ ಮಾಡಿತು.

ವೈಭವದಿಂದ ಸಾಗಿ ಬಂದ ಮೆರವಣಿಗೆ ಬಂದಡ್ಕದಲ್ಲಿ ಜನರ ಕಣ್ಮನ ಸೆಳೆಯಿತು. ಗಂಡಸರು, ಹೆಂಗಸರು, ಮಕ್ಕಳು ಅರೆಭಾಷೆ ಅಕಾಡೆಮಿ ಲಾಂಛನ ಭಾವುಟವನ್ನು ಬೀಸುತ್ತಾ ಸಾಗಿದರು. ಪೂರ್ಣಕುಂಭ ಹಿಡಿದ ಮಹಿಳೆಯರು ಜರತಾರಿ ಸೀರೆಯುಟ್ಟು ಕಂಗೊಳಿಸುತ್ತಿದ್ದರು. ಪುರುಷರು ಬಿಳಿ ಶರ್ಟ್, ಬಿಳಿ ಧೋತಿ, ಬಿಳಿ ಅಂಗವಸ್ತ್ರವನ್ನು ತೊಟ್ಟು ಹೆಜ್ಜೆ ಹಾಕಿದರೆ, ಮಕ್ಕಳು ರಂಗುರಂಗಿನ ಉಡುಪು ತೊಟ್ಟು ಮಿಂಚಿದರು. ಮೆರವಣಿಗೆಯಲ್ಲಿ ಬಣ್ಣದ ಕೊಡೆಗಳು ಹೊಳೆಯುತ್ತಿದ್ದವು. ಬಾಲಕ–ಬಾಲಕಿಯರು ಮೆರವಣಿಗೆಯುದ್ದಕ್ಕೂ ಸಮವಸ್ತ್ರ ತೊಟ್ಟು ಭಜನೆ ಕುಣಿತ ಮಾಡಿದರು. ಕೋಲಾಟ ಆಡಿದರು.

ತಮ್ಮದೆ ಮನೆಯ ಸಮಾರಂಭವೆಂಬಂತೆ ಊರಿಗೆ ಊರೇ ನೆರೆದಿತ್ತು. ಸುಮಾರು 300ಕ್ಕಿಂತ ಅಧಿಕ ಮಂದಿಯನ್ನು ಹೊಂದಿದ್ದ ಫರ್ಲಾಂಗ್ ಉದ್ದದ ಮೆರವಣಿಗೆಯನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬವಾಗಿತ್ತು. ಬ್ಯಾಂಡ್ ವಾದನ ಲಯಬದ್ದ ಹೆಜ್ಜೆಗೆ ನಾಂದಿ ಹಾಡಿತು. ಗಡಿನಾಡ ಉತ್ಸವ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅರೆಭಾಷೆ ಸಂಪ್ರದಾಯ ಬಿಂಬಿತವಾಯಿತು.

ಅಮರ ಸುಳ್ಯದ ಕ್ರಾಂತಿ, ಕೃಷಿ ಚಟುವಟಿಕೆಗಳು, ಆಟಿ ಕಳಂಜ, ದೀಪಾವಳಿ ಹಬ್ಬ, ಸಿದ್ಧವೇಷ ಕುಣಿತ, ವಾಲಗ ಕುಣಿತ, ಕೋಲಾಟ, ಎಲ್ಲವೂ ಪ್ರದರ್ಶನಗೊಂಡವು. ಉಳುಮೆಯ ಜೋಡೆತ್ತಿನ ಪ್ರದರ್ಶನ ಪ್ರೇಕ್ಷಕರ ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು.

ಕಾಸರಗೋಡು ಜಿಲ್ಲೆಯ ಉದುಮ ಕ್ಷೇತ್ರದ ಶಾಸಕ ಸಿ.ಎಚ್.ಕುಂಞಂಬು ಮಾತನಾಡಿ, ಬಂದಡ್ಕ ಭಾಗದಲ್ಲಿ ಇಂಥ ಉತ್ಸವ ನಡೆಸುತ್ತಿರುವುದು ಸಂತೋಷ. ಈ ಗಡಿಭಾಗದಲ್ಲಿ ಅರೆಭಾಷೆ ಮಾತನಾಡಲಾಗುತ್ತಿದೆ. ತುಳು ಅಕಾಡೆಮಿ ರೀತಿ ಮಂಜೇಶ್ವರದಲ್ಲಿ ಯಕ್ಷಗಾನ ಅಕಾಡೆಮಿ ಆರಂಭ ಮಾಡಿ ಯಶಸ್ವಿಯಾಗಿದ್ದೇನೆ. ತುಳು, ಅರೆಭಾಷೆ, ಯಕ್ಷಗಾನ, ಬ್ಯಾರಿ ಸೇರಿದಂತೆ ಎಲ್ಲಾ ಅಕಾಡೆಮಿಗಳನ್ನು ಸೇರಿಸಿ ಕಾಸರಗೋಡಿನಲ್ಲಿ ದೊಡ್ಡ ಕಾರ್ಯಕ್ರಮ ಆಯೋಜಿಸಲು ಸಹಕರಿಸುವಂತೆ ಮನವಿ ಮಾಡಿದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಹಾಗೂ ಬಂದಡ್ಕ ಗೌಡ ಗ್ರಾಮ ಸಮಿತಿ ವತಿಯಿಂದ ಬಂದಡ್ಕದ ಸುಬ್ರಹ್ಮಣ್ಯ ದೇವಸ್ಥಾನದ ಮಯೂರ ಮಂಟಪ ಸಭಾಭವನದಲ್ಲಿ ನಡೆದ ಅರೆಭಾಷೆ ಗಡಿನಾಡ ಉತ್ಸವದ ಸಮಾರೋಪದಲ್ಲಿ ಅವರು ಮಾತನಾಡಿದರು.

ಇದೇ ವೇಳೆ ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಹಾಗೂ ಬಂದಡ್ಕದ ಪ್ರಮುಖರು ಅಂತಾರಾಜ್ಯ ಬಸ್ ಸರ್ವೀಸ್ ಆರಂಭಿಸಬೇಕು ಎಂದು ಮನವಿ ಸಲ್ಲಿಸಿದರು. ಮಡಿಕೇರಿ ಆಕಾಶವಾಣಿಯ ಹಿರಿಯ ಉದ್ಘೋಷಕ ಸುಬ್ರಾಯ ಸಂಪಾಜೆ, ಗೌಡರ ಯುವ ಸೇವಾ ಸಂಘದ ಸ್ಥಾಪಕಾಧ್ಯಕ್ಷ ನಿತ್ಯಾನಂದ ಮುಂಡೋಡಿ ಅವರು ಸಾಧಕರನ್ನು ಸನ್ಮಾನಿಸಿದರು. ಕರ್ನಾಟಕ ಮೀನುಗಾರಿಕಾ ನಿಗಮದ ಮಾಜಿ ಅಧ್ಯಕ್ಷ ಎ.ವಿ.ತೀರ್ಥರಾಮ ಬಹುಮಾನ ವಿತರಿಸಿದರು. ಅರೆಭಾಷೆ ಗಡಿನಾಡ ಉತ್ಸವ ಸಂಘಟನಾ ಸಮಿತಿ ಅಧ್ಯಕ್ಷ ಕ್ಯೊಂಗಾಜೆ ವೆಂಕಟರಮಣ, ಪ್ರಧಾನ ಕಾರ್ಯದರ್ಶಿ ಚರಣ್ ಕುಮಾರ್ ಪಾಲಾರು ಮಾವಜಿ, ಕೋಶಾಧಿಕಾರಿ ಮೋಹನ್ ಇಳಂದಿಲ, ತರುಣ ಘಟಕದ ಅಧ್ಯಕ್ಷ ಗಣೇಶ್ ಪಾಲಾರು ಮೂಲೆ, ಪಿ.ಸಿ.ಜಯರಾಮ್, ಟಿ.ಎಂ.ಶಹೀದ್, ಸದಸ್ಯರು ಇತರರು ಇದ್ದರು.

ಮೂರ್ನಾಡಲ್ಲಿ ವಿಜೃಂಭಣೆಯ ಓಣಂ ಆಚರಣೆ



ಮೂರ್ನಾಡು ಗೌಡ ಸಮಾಜದಲ್ಲಿ ನಡೆದ ಓಣಂ ಆಚರಣೆ ಸಮಾರಂಭವನ್ನು ಮಾಜಿ ಶಾಸಕ ಕೆ.ಜಿ.ಬೋಪಯ್ಯ ಉದ್ಘಾಟಿಸಿದರು.

ಮೂರ್ನಾಡು: ಇಲ್ಲಿನ ಹಿಂದೂ ಮಲಯಾಳಿ ಸಂಘದ ವತಿಯಿಂದ ಆಯೋಜಿಸಿದ್ದ 16ನೇ ವರ್ಷದ ಓಣಂ ಆಚರಣೆ ವಿಜೃಂಭಣೆಯಿಂದ ಜರುಗಿತು.

ಮೂರ್ನಾಡು ಗೌಡ ಸಮಾಜದಲ್ಲಿ ನಡೆದ ಓಣಂ ಆಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕ ಕೆ.ಜಿ.ಬೋಪಯ್ಯ, ನಮ್ಮ ಆಚಾರ–ವಿಚಾರ, ಸಂಸ್ಕೃತಿ ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಆಗ ಮಾತ್ರ ದೇಶ ದೇಶವಾಗಿ ಉಳಿಯಲು ಸಾಧ್ಯ. ಇಡೀ ಸಮಾಜವನ್ನು ಒಗ್ಗೂಡಿಸುವ ಪ್ರಯತ್ನ ಇಂತಹ ಸಂಘಟನೆಗಳಿಂದ ಆಗುತ್ತಿದೆ. ಸಮಾಜ ಒಳ್ಳೆಯದಾದರೆ ನಾಡು ಸುಭದ್ರವಾಗುತ್ತದೆ. ಆ ಮೂಲಕ ದೇಶದ ಏಕತೆ ಅಖಂಡತೆಗೆ ಕಾರಣವಾಗುತ್ತದೆ ಎಂದು ಹೇಳಿದರು.

ಮಾಜಿ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಹಿಂದೂಗಳು ತಮ್ಮ ಸಂಸ್ಕೃತಿಗಳನ್ನು ಚಾಚೂ ತಪ್ಪದೆ ಪಾಲಿಸಿದಾಗ ಮಾತ್ರ ಹಿಂದೂ ಸಮಾಜ ಗಟ್ಟಿಗೊಳ್ಳುತ್ತದೆ. ಹೀಗೆ ತಮ್ಮ ಆಚಾರ–ವಿಚಾರ ಪಾಲನೆಗಳಿಂದ ಸಮಾಜ ಒಳಿತು ಕಂಡಾಗ ದೇಶವು ಸಹ ಅಭಿವೃದ್ಧಿ ಹೊಂದುತ್ತದೆ. ಸಮಾಜದೊಂದಿಗೆ ದೇಶ ಕಟ್ಟುವ ಕೆಲಸ ಮಾಡಬೇಕು ಎಂದರು.

ಹಿಂದೂ ಮಲಯಾಳಿ ಸಂಘದ ಜಿಲ್ಲಾ ಸಮಿತಿ ಮುಖ್ಯ ಕಾರ್ಯದರ್ಶಿ ಎನ್.ವಿ.ಉನ್ನಿಕೃಷ್ಣ ಮಾಜಿ ಮುಖ್ಯ ಕಾರ್ಯದರ್ಶಿ ಪಿ.ಕೆ.ಶಶಿಕುಮಾರ್, ಸಲಹಾ ಸಮಿತಿ ಅಧ್ಯಕ್ಷ ವಾಸುದೇವನ್, ವಿರಾಜಪೇಟೆ ಅಧ್ಯಕ್ಷ ವಿನುತ್, ಒಂಟಿ ಅಂಗಡಿ ಅಧ್ಯಕ್ಷ ನಂದಕುಮಾರ್, ನಾಪೋಕ್ಲು ಅಧ್ಯಕ್ಷ ಅನಿಲ್, ಸೋಮವಾರಪೇಟೆ ಅಧ್ಯಕ್ಷ ಪ್ರಕಾಶ್, ಕುಶಾಲನಗರ ಕೇರಳ ಸಮಾಜದ ಅಧ್ಯಕ್ಷ ಪಿ.ರವೀಂದ್ರನ್, ಹೊದ್ದೂರು ಗ್ರಾಪಂ ಅಧ್ಯಕ್ಷ ಹೆಚ್.ಎ.ಹಂಸ, ಹಿಂದೂ ಮಲಯಾಳಿ ಸಂಘದ ಜಿಲ್ಲಾ ಸಮಿತಿ ಉಪಾಧ್ಯಕ್ಷ ಟಿ.ಕೆ.ಸುದೀರ್, ಮೂರ್ನಾಡು ಪ್ರಧಾನ ಕಾರ್ಯದರ್ಶಿ ಟಿ. ಸಂತೋಷ್ ಕುಮಾರ್, ಉಪಾಧ್ಯಕ್ಷ ಕೆ.ಎ.ಸುಬ್ರಮಣಿ, ಖಜಾಂಚಿ ಎನ್.ಕೆ.ಮುರಳಿ ಉಪಸ್ಥಿತರಿದ್ದರು.

ಈ ಸಂದರ್ಭ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಬಲಮುರಿಯಲ್ಲಿ ಇತ್ತೀಚಿಗೆ ನದಿಗೆ ಬಿದ್ದ ವ್ಯಕ್ತಿಯನ್ನು ರಕ್ಷಿಸಿದ ಈಜುಗಾರ ಹಾಗೂ ಸಂಘದ ಸದಸ್ಯ ಎಂ.ಆರ್.ಬಿಪಿನ್ ಅವರನ್ನು ಸನ್ಮಾನಿಸಲಾಯಿತು. ಸಮಾರಂಭಕ್ಕೂ ಮುನ್ನ ಮೂರ್ನಾಡಿನ ಮುಖ್ಯ ಬೀದಿಯಲ್ಲಿ ನಡೆದ ಮೆರವಣಿಗೆಯಲ್ಲಿ ಕೇರಳದ ಸಾಂಪ್ರಾಯಿಕ ಉಡುಪಿನಲ್ಲಿ ಮಹಿಳೆಯರು, ಮಕ್ಕಳು, ಪುರುಷರು, ಚೆಂಡೆ ಮೇಳದವರು, ಮಾವೇಲಿ ಪಾತ್ರಧಾರಿಗಳು, ಶ್ರೀಕೃಷ್ಣ ವೇಷಧಾರಿಗಳು ಪಾಲ್ಗೊಂಡು ಗಮನ ಸೆಳೆದರು.

ಮೊಬೈಲ್ ವ್ಯಾಪಾರಿ ಆತ್ಮಹತ್ಯೆ



ಕುಶಾಲನಗರ: ಮೊಬೈಲ್ ವ್ಯಾಪಾರಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಏಳನೇ ಹೊಸಕೋಟೆಯ ಮುತ್ತು ಓಮನ ಅವರ ಪುತ್ರ ವಿನೋದ್ (37) ಆತ್ಮಹತ್ಯೆ ಮಾಡಿಕೊಂಡವರಾಗಿದ್ದು, ಪಟ್ಟಣದ ಕೋಣಮಾರಿಯಮ್ಮ ದೇವಾಲಯ ಮುಂಭಾಗದಲ್ಲಿ ಮೊಬೈಲ್ ಶಾಪ್ ನಡೆಸುತ್ತಿದ್ದ. ವಿನೋದ್‌ಗೆ ಆರು ವರ್ಷದ ಹೆಣ್ಣು ಮಗುವಿದ್ದು, ಪತ್ನಿ ಮಂಡ್ಯದ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಕುಶಾಲನಗರ ಎಸ್‌ಎನ್‌ಡಿಪಿ ಸದಸ್ಯನಾಗಿದ್ದ ವಿನೋದ್ ಬಾಡಿಗೆ ಕಟ್ಟಡದಲ್ಲಿ ಕೆಎ–12 ಹೆಸರಿನ ಮೊಬೈಲ್ ಸರ್ವೀಸ್ ಸೆಂಟರ್ ನಡೆಸುತ್ತಿದ್ದ. ತನಿಖೆಯಿಂದ ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬರಬೇಕಿದೆ. ಸ್ಥಳ ಪರಿಶೀಲಿಸಿದ ಟೌನ್ ಠಾಣೆ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೊಸ ಆದೇಶ ವಿರೋಧಿಸಿ ಎಲ್‌ಐಸಿ ಪ್ರತಿನಿಧಿಗಳ ಪ್ರತಿಭಟನೆ



ಮಡಿಕೇರಿ ಎಲ್‌ಐಸಿ ಕಚೇರಿ ಮುಂಭಾಗ ಜೀವ ವಿಮಾ ನಿಗಮದ ಪ್ರತಿನಿಧಿಗಳು ಹೊಸ ಆದೇಶ ವಿರೋಧಿಸಿ ಪ್ರತಿಭಟನೆ ನಡೆಸಿದರು.

ಮಡಿಕೇರಿ: ಜೀವ ವಿಮೆಗೆ ಸಂಬಂಧಿಸಿದಂತೆ ಜಾರಿಗೊಳಿಸಿರುವ ಹೊಸ ಆದೇಶಗಳನ್ನು ವಿರೋಧಿಸಿ ಎಲ್‌ಐಸಿ ಪ್ರತಿನಿಧಿಗಳು ಕಪ್ಪುಪಟ್ಟಿ ಧರಿಸಿ ನಗರದಲ್ಲಿ ಸೋಮವಾರ ಅಸಹಕಾರ ಚಳವಳಿ ನಡೆಸಿದರು.

ಮಡಿಕೇರಿ ಜೀವ ವಿಮಾ ನಿಗಮದ ಪ್ರತಿನಿಧಿಗಳ ಸಂಘಟನೆ ಅಧ್ಯಕ್ಷ ಎ.ವಿ.ಮಂಜುನಾಥ್ ನೇತೃತ್ವದಲ್ಲಿ ಎಲ್‌ಐಸಿ ಕಚೇರಿ ಮುಂಭಾಗ ಸೇರಿದ ಪ್ರತಿನಿಧಿಗಳು, ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ಇತ್ತೀಚೆಗೆ 'ಕ್ಲೇ ಬ್ಯಾಕ್' ಎನ್ನುವ ಆದೇಶ ತರಲಾಗಿದ್ದು, ಇದರಿಂದ 1 ಲಕ್ಷ ಮೊತ್ತದ ವಿಮೆಯನ್ನು ವರ್ಷದ ಒಳಗೆ ಹಿಂದಿರುಗಿಸಿದಲ್ಲಿ ಅದಕ್ಕೆ ಸಂಬಂಧಿಸಿದ ಏಜೆಂಟರ ಕಮಿಷನ್ ಮತ್ತು ಸೌಲಭ್ಯಗಳನ್ನು ಕಡಿತಗೊಳಿಸಲಾಗುತ್ತಿದೆ. ಈ ಆದೇಶವನ್ನು ಹಿಂದಕ್ಕೆ ಪಡೆಯಬೇಕೆಂದು ಆಗ್ರಹಿಸಿದರು.

ಹೊಸ ಜೀವ ವಿಮಾ ಪಾಲಿಸಿಗಳನ್ನು ತರಲಾಗಿದ್ದು, ಇವುಗಳ ಪ್ರೀಮಿಯಂ ಅನ್ನು ಶೇ.7.50ರಷ್ಟು ಹೆಚ್ಚಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಪ್ರತಿನಿಧಿಗಳು, ಜಿಎಸ್‌ಟಿ ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಉಪಾಧ್ಯಕ್ಷರಾದ ಟಿ.ಎಲ್.ಅನಿತಾ, ಕೆ.ಪಿ.ಗಣೇಶ್, ಖಜಾಂಚಿ ಚಾಮು, ಹಿರಿಯ ಪ್ರತಿನಿಧಿಗಳಾದ ಬೆಳ್ಯಪ್ಪ, ವೈ.ಡಿ.ಮೋಹನ್, ಪಿ.ಆರ್.ಮಂದಪ್ಪ, ಮಹಿಳಾ ಘಟಕದ ಸವಿತಾ ಮತ್ತಿತರರು ಪಾಲ್ಗೊಂಡಿದ್ದರು.

ಗುಂಡು ಹಾರಿಸಿಕೊಂಡು ವೃದ್ಧ ಆತ್ಮಹತ್ಯೆ

ನಾಪೋಕ್ಲು: ಆರೋಗ್ಯ ಸಮಸ್ಯೆಯಿಂದ ನೊಂದು ವೃದ್ಧ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಸಮೀಪದ ಕಡಿಯತ್ತೂರು ಗ್ರಾಮದಲ್ಲಿ ನಡೆದಿದೆ.



ಬಾಡನ ಆನಂದ

ಗ್ರಾಮದ ಬಾಡನ ಆನಂದ (ಡಾಲಿ 75) ಆತ್ಮಹತ್ಯೆ ಮಾಡಿಕೊಂಡವರಾಗಿದ್ದು, ಈತ ವಯೋಸಹಜ ಕಾಯಿಲೆಯಿಂದ ನರಳುತ್ತಿದ್ದರು. ಹತ್ತು ದಿನಗಳ ಹಿಂದೆಯಷ್ಟೇ ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಮನೆಗೆ ಬಂದಿದ್ದರು. ಇದರಿಂದ ತೀವ್ರ ಖಿನ್ನತೆಗೆ ಒಳಗಾಗಿದ್ದರು. ಆದರೆ, ಭಾನುವಾರ ಬೆಳಗ್ಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತ ಆನಂದ ಅವರ ಪುತ್ರ ಮೈಸೂರಿನಲ್ಲಿ ಉದ್ಯೋಗದಲ್ಲಿದ್ದು, ಇಬ್ಬರು ಪುತ್ರಿಯರಿದ್ದಾರೆ. ಪತ್ನಿ ತಾರಾಮಣಿ ನೀಡಿದ ದೂರಿನ ಅನ್ವಯ ನಾಪೋಕ್ಲು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ದೂರು ದಾಖಲಿಸಿಕೊಂಡಿದ್ದಾರೆ.

ಶ್ರೀಜಾ ದಯಾನಂದಗೆ 5ನೇ ರ್‍ಯಾಂಕ್



ಶ್ರೀಜಾ ದಯಾನಂದ

ಮಡಿಕೇರಿ, ಅ.28– ನಗರದ ಕೊಟ್ಟಕೇರಿಯನ ಶ್ರೀಜಾ ದಯಾನಂದ ಅವರು ಕಾನೂನು ಪದವಿಯಲ್ಲಿ ಕರ್ನಾಟಕ ಸ್ಟೇಟ್ ಲಾ ಯೂನಿವರ್ಸಿಟಿಯ 2018–23ನೇ ಸಾಲಿನ ಬಿಕಾಂ ಎಲ್‌ಎಲ್‌ಬಿ ಪರಿಕ್ಷೆಯಲ್ಲಿ 5ನೇ ರ್‍ಯಾಂಕ್ ಪಡೆದಿದ್ದಾರೆ.

ಈಕೆ ಮಡಿಕೇರಿಯ ಹಿರಿಯ ವಕೀಲ ಕೆ.ಡಿ.ದಯಾನಂದ ಹಾಗೂ ಬಿಎಸ್‌ಎನ್‌ಎಲ್ ಅಧಿಕಾರಿ ಲೀಲಾ ದಯಾನಂದ ಅವರ ಪುತ್ರಿ.

ಇಂದಿನಿಂದ ದೀಪಾವಳಿ ಜಾತ್ರೆ ಆರಂಭ

- ಮಹದೇಶ್ವರಬೆಟ್ಟದಲ್ಲಿ ಪ್ರಾಧಿಕಾರದಿಂದ ಸಿದ್ಧತೆ
- ನ.2,ರಥೋತ್ಸವ



> ದೀಪಾವಳಿ ಜಾತ್ರೆಗೆ ಈ ಬಾರಿ ಅಧಿಕ ಭಕ್ತರು ಬೆಟ್ಟಕ್ಕೆ ಭೇಟಿ ನೀಡುವ ನಿರೀಕ್ಷೆ ಇರುವುದರಿಂದ ಸೌಲಭ್ಯ ಕಲ್ಪಿಸಲು ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಭದ್ರತೆ, ಸ್ವಚ್ಛತೆಗೆ ಹೆಚ್ಚು ಒತ್ತು ನೀಡಲಾಗಿದೆ.
> –ಎ.ಇ.ರಘು, ಕಾರ್ಯದರ್ಶಿ, ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರ

ಹನೂರು, ಅ.28–ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಹದೇಶ್ವರಬೆಟ್ಟದಲ್ಲಿ ಅ.29 ರಿಂದ 5 ದಿನ ದೀಪಾವಳಿ ಜಾತ್ರೆ ಆರಂಭವಾಗಲಿದ್ದು, ಈ ನಿಟ್ಟಿನಲ್ಲಿ ಬೆಟ್ಟದಲ್ಲಿ ಎಲ್ಲಾ ಸಿದ್ಧತೆಗಳನ್ನು ಪ್ರಾಧಿಕಾರದಿಂದ ಕೈಗೊಳ್ಳಲಾಗುತ್ತಿದೆ.

ಅ.29ರಂದು ಮಾದಪ್ಪನಿಗೆ ವಿಶೇಷ ಪೂಜೆ, 30ರಂದು ಸ್ವಾಮಿಗೆ ಎಣ್ಣೆಮಜ್ಜನ ಸೇವೆ ಹಾಗೂ ಉತ್ಸವಗಳು ನಡೆಯಲಿವೆ. 31ರಂದು ನರಕ ಚತುರ್ದಶಿ ಪೂಜೆ, ನ.1ರಂದು ದೀಪಾವಳಿ ಅಮಾವಾಸ್ಯೆ, ಹಾಲರುವೆ ಉತ್ಸವ ಜರುಗಲಿದೆ. 2ರಂದು ಬ್ರಹ್ಮರಥೋತ್ಸವ ನಡೆಯಲಿದೆ.

ರಾಜ್ಯ ಹಾಗೂ ನೆರೆ ರಾಜ್ಯ ತಮಿಳುನಾಡಿನಿಂದಲ್ಲೂ ಲಕ್ಷಾಂತರ ಭಕ್ತರು ದೀಪಾವಳಿ ಜಾತ್ರೆಗಾಗಿ ಬೆಟ್ಟಕ್ಕೆ ಆಗಮಿಸುವ ಹಿನ್ನೆಲೆಯಲ್ಲಿ ದೇವರ ದರ್ಶನ ವೇಳೆ ನೂಕುನುಗ್ಗಲು ಉಂಟಾಗಲಿದ್ದು, ಇದನ್ನು ತಡೆಗಟ್ಟಲು ಹೆಚ್ಚಿನ ಸರತಿ ಸಾಲು, ನೆರಳಿನ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಬೆಳಗ್ಗೆ 7 ರಿಂದ ಮಧ್ಯರಾತ್ರಿವರೆಗೂ ನಿರಂತರವಾಗಿ ದಾಸೋಹ, ಭಕ್ತರಿಗೆ ಸೂಕ್ತ ಮಾಹಿತಿ ನೀಡಲು ಮಾಹಿತಿ ಕೇಂದ್ರಗಳ ವ್ಯವಸ್ಥೆ ಮಾಡಲಾಗಿದೆ.

ಪಾರ್ಕಿಂಗ್ ವ್ಯವಸ್ಥೆ: ಬೆಟ್ಟದಲ್ಲಿ ವಾಹನ ದಟ್ಟಣೆ ತಪ್ಪಿಸಲು ಹೆಚ್ಚುವರಿಯಾಗಿ ಜೇನುಮಲೆ ಭವದ ಮುಂಭಾಗ ಹಾಗೂ ಸಾಲೂರು ಮಠದ ಪ್ರೌಢಶಾಲಾ ಮೈದಾನ ಸಮೀಪ ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಕಾಲ್ನಡಿಗೆಗೆ ಸುಗಮ ಸಂಚಾರ: ಶ್ರೀಕ್ಷೇತ್ರಕ್ಕೆ ಆಗಮಿಸುವ ಪಾದಯಾತ್ರಿಗಳಿಗೆ ಕೌದಳ್ಳಿಯಿಂದ ಬೆಟ್ಟದವರಿಗೂ ಅಲ್ಲಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ತಾಳಬೆಟ್ಟದಿಂದ ಪಾದಚಾರಿ ಮೆಟ್ಟಿಲು ಮತ್ತು ರಸ್ತೆ ಬದಿಯ ಗಿಡಗಂಟಿಗಳನ್ನು ತೆರವುಗೊಳಿಸಲಾಗಿದೆ. ಒಟ್ಟಾರೆ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಆನೆತಲೆ ದಿಂಬದಿಂದ ಬೆಟ್ಟದವರೆಗೆ ಪಾದಚಾರಿ ರಸ್ತೆಯಲ್ಲಿ ದೀಪಾಲಂಕಾರ ಮತ್ತು ಬೆಳಕಿನ ವ್ಯವಸ್ಥೆ ಮಾಡಲಾಗುತ್ತಿದೆ.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಭೇಟಿ



ಕೊಳ್ಳೇಗಾಲಕ್ಕೆ ಭೇಟಿ ನೀಡಿದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು ಮಾಹಿತಿ ಪಡೆದರು.

ಕೊಳ್ಳೇಗಾಲ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು ಸೋಮವಾರ ಪಟ್ಟಣಕ್ಕೆ ದಿಢೀರ್ ಭೇಟಿ ನೀಡಿದರು.

ಪಟ್ಟಣದ ಸರ್ಕಾರಿ ಉಪವಿಭಾಗ ಆಸ್ಪತ್ರೆ, ಟೌನ್ ಪೊಲೀಸ್ ಠಾಣೆ, ಎಸ್‌ವಿಕೆ ಕಾಲೇಜು, ಕುಣಗಳ್ಳಿ ಪಂಚಾಯಿತಿ, ಜೀವನಜ್ಯೋತಿ, ಕರುಣಾಲಯ ಟ್ರಸ್ಟ್ ಸೇರಿದಂತೆ ವಿವಿಧೆಡೆ ಆಯೋಗದ ಸದಸ್ಯರಾದ ವೆಂಕಟೇಶ್, ಡಾ.ತಿಪ್ಪೇಸ್ವಾಮಿ, ಶಶಿಧರ್ ಕೋಸಾಂಬೆ ಭೇಟಿ ನೀಡಿ, ಮಾಹಿತಿ ಪಡೆದರು.

ಇದೇ ವೇಳೆ ಡಾ.ರಾಜಶೇಖರ್, ಡಾ.ಗೋಪಾಲ್, ಎಸ್‌ಐ ವರ್ಷಾ, ಸಿಡಿಪಿಓ ನಂಜಮ್ಮಣಿ, ಶಿವಲೀಲಾ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ರೈತರ ಗಿರವಿ ಚಿನ್ನ ವಾಪಸ್ ನೀಡುವಂತೆ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರ ಜಿಲ್ಲಾಡಳಿತ ಭವನದ ಎದುರು ರಾಜ್ಯ ಕಬ್ಬು ಬೆಳೆಗಾರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಅ.28–ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತರು ಗಿರವಿ ಇಟ್ಟಿರುವ ಚಿನ್ನ ವಾಪಸ್ ನೀಡಬೇಕು ಹಾಗೂ ಗುಂಡ್ಲುಪೇಟೆ ತಾಲೂಕಿನ ಗುರುವಿನಪುರ ಗ್ರಾಮದಲ್ಲಿ ಚೆಂಡು ಮಲ್ಲಿಗೆ ಸಂಸ್ಕರಣ ಘಟಕ ಆರಂಭಿಸದಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರ ಸಂಘದ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಎದುರು ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೆರವಣಿಗೆ ನಡೆಸಿದ ರೈತರು ಜಿಲ್ಲಾಡಳಿತ ಭವನದ ಎದುರು ಕೆಲಕಾಲ ಪ್ರತಿಭಟನೆ ನಡೆಸಿ, ಜಿಲ್ಲಾಡಳಿತ, ತಾಲೂಕು ಆಡಳಿತ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದಿರುವ ಅವ್ಯವಹಾರದಲ್ಲಿ ರೈತರ ಚಿನ್ನ ಕೊಡಿಸುವಲ್ಲಿ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ಸಂಪೂರ್ಣ ವಿಫಲವಾಗಿದೆ. ಇರುವ ಕಾನೂನು ಅಡೆತಡೆ ಸರಿಪಡಿಸಿ ತಕ್ಷಣ ರೈತರಿಗೆ ಚಿನ್ನ ಕೊಡಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗುರುವಿನಪುರದಲ್ಲಿ ಚೆಂಡು ಮಲ್ಲಿಗೆ ಸಂಸ್ಕರಣ ಘಟಕ ಪ್ರಾರಂಭಿಸಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಇದರಿಂದ ಸ್ಥಳೀಯವಾಗಿ ಪರಿಸರ ಹಾಳಾಗುತ್ತದೆ. ಅಂತರ್ಜಲ ಕುಡಿಯುವ ನೀರಿಗೆ ಸಾಕಷ್ಟು ತೊಂದರೆ ಉಂಟಾಗುತ್ತದೆ. ಸ್ಥಳೀಯರ ಆರೋಗ್ಯದ ಮೇಲೆ ಭೀಕರ ಪರಿಣಾಮ ಉಂಟಾಗುತ್ತದೆ. ಸರ್ಕಾರ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಅಭಿವೃದ್ಧಿ ಪ್ರದೇಶದಲ್ಲಿ ಚೆಂಡು ಸಂಸ್ಕಾರ ಘಟಕ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಿ ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ಗೀತಾ ಹುಡೇಡ, ಯಾವುದೇ ಕಾರಣಕ್ಕೂ ಚೆಂಡು ಮಲ್ಲಿಗೆ ಸಂಸ್ಕರಣ ಘಟಕಕ್ಕೆ ಅವಕಾಶ ನೀಡುವುದಿಲ್ಲ. ರೈತರ ಚಿನ್ನ ಕೊಡಿಸುವಲ್ಲಿ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ನಂತರ ಪ್ರತಿಭಟನೆ ಕೈಬಿಡಲಾಯಿತು.

ಪ್ರತಿಭಟನೆಯಲ್ಲಿ ಶೇಖರ್ ದೇವು, ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಉಪಾಧ್ಯಕ್ಷ ಪ್ರವೀಣ್, ಸಂಘಟನಾ ಕಾರ್ಯದರ್ಶಿ ಮಹೇಂದ್ರ ಚಾಮರಾಜನಗರ ತಾಲೂಕು ಅಧ್ಯಕ್ಷ ಅರಳಿಕಟ್ಟೆ ಕುಮಾರ್, ಜೆನ್ನೂರ್ ಶಾಂತರಾಜು, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಮಂಚಳ್ಳಿ ಮಣಿಕಂಠ, ಕೋಟೆಕೆರೆ ಮಹದೇವ ನಾಯಕ, ಗ್ರಾಮ ಘಟಕದ ಅಧ್ಯಕ್ಷರಾದ ಮಂಜುನಾಥ್, ರಾಜಶೇಖರ್, ಮಹದೇವಸ್ವಾಮಿ ಗುರುಮಲ್ಲಪ್ಪ ಮಲೆಯೂರು, ಬಸವರಾಜಪ್ಪ, ಸತೀಶ್, ಸಿದ್ದರಾಜು, ಮೋಹನ್, ಚಂದ್ರು ಬಾಬು, ಸುರೇಶ್, ಮಧು, ಮಹೇಶ್, ಮಂಜು, ಆನಂದ, ಲೋಕೇಶ್, ಶಾಂತಮಲ್ಲಪ್ಪ, ಪ್ರಭುಸ್ವಾಮಿ, ಸಿದ್ದಲಿಂಗಪ್ಪ, ಮಹೇಶ್, ಕಮಲಮ್ಮ ರಾಜಮ್ಮ ನಂದೀಶ್, ಶ್ರೀಕಂಠ, ಗುರುಸಿದ್ದ, ಚಿನ್ನಮ್ಮ, ರೂಪ ಮಂಜುನಾಥ್, ನಾಗೇಶ್, ಮಹದೇವಪ್ಪ, ಬಸವಣ್ಣ ಇತರರು ಭಾಗವಹಿಸಿದ್ದರು.

ಅಧಿವೇಶನದಲ್ಲಿ ವಿಶೇಷಚೇತನರ ಸಮಸ್ಯೆಗಳ ಚರ್ಚೆ



ಚಾ.ನಗರ ಸರ್ಕಾರಿ ಪೇಟೆ ಶಾಲಾವರಣದಲ್ಲಿ ನಡೆದ ವಿಕಲಚೇತನರ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಪುಟ್ಟರಂಗಶೆಟ್ಟಿ ಮಾತನಾಡಿದರು.

ಚಾಮರಾಜನಗರ: ಬೆಳಗಾವಿ ಅಧಿವೇಶನದಲ್ಲಿ ವಿಶೇಷಚೇತನರ ಸಮಸ್ಯೆಗಳ ಕುರಿತು ಸರ್ಕಾರದ ಗಮನ ಸೆಳೆಯುವುದಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಭರವಸೆ ನೀಡಿದರು.

ನಗರದ ಸರ್ಕಾರಿ ಪೇಟೆ ಶಾಲಾವರಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ, ಬಿಆರ್‌ಸಿ ಸಮಗ್ರ ಕರ್ನಾಟಕ ಸಹಯೋಗದಲ್ಲಿ ಸೋಮವಾರ ನಡೆದ ವಿಕಲಚೇತನರ ವೈದ್ಯಕೀಯ ತಪಾಸಣೆ ಶಿಬಿರದಲ್ಲಿ ಮಾತನಾಡಿದ ಅವರು, ವಿಶೇಷಚೇತನ ಮಕ್ಕಳನ್ನು ನೋಡಿಕೊಳ್ಳಲು ತಾಯಂದಿರು ಪಡುವ ಕಷ್ಟ ಅಷ್ಟಿಷ್ಟಲ್ಲ. ಜತೆಗೆ ಬಸ್‌ಪಾಸ್ ದರದ ಏರಿಕೆ, ಮಾಸಾಶನ ಏರಿಕೆಯಾಗದಿರುವುದು ವಿಶೇಷಚೇತನರಿಗೆ ಸಮಸ್ಯೆಯಾಗಿದೆ. ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಎಲ್ಲಾ ಸಮಸ್ಯೆಗಳನ್ನು ಸರ್ಕಾರದ ಮುಂದಿಟ್ಟು ಚರ್ಚಿಸಲಾಗುವುದು ಎಂದರು.

ನಗರಸಭೆ ಸದಸ್ಯ ಅಬ್ರಾರ್ ಅಹಮದ್ ಮಾತನಾಡಿ, ವಿವಿಧ ರಾಜ್ಯಗಳಲ್ಲಿ ವಿಕಲಚೇತನರಿಗೆ ಮಾಸಾಶನ ಹೆಚ್ಚಳ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಕೇವಲ 1200 ರಿಂದ 1400 ರೂ. ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಕನಿಷ್ಠ 5 ಸಾವಿರ ರೂ. ಮಾಸಾಶನ ನೀಡಬೇಕು. ಉಚಿತ ಬಸ್‌ಪಾಸ್ ವಿತರಿಸಲು ಕ್ರಮ ವಹಿಸಬೇಕು. ವಿಶೇಷಚೇತನರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸುವುದು ಸಂಬಂಧಪಟ್ಟ ಇಲಾಖಾಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಇದೇ ವೇಳೆ ವಿವಿಧೆಡೆಯಿಂದ ಆಗಮಿಸಿದ್ದ ವಿಶೇಷಚೇತನರಿಗೆ ವೈದ್ಯಕೀಯ ತಪಾಸಣೆ ಮಾಡಲಾಯಿತು. ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ನಗರಸಭೆ ಅಧ್ಯಕ್ಷ ಸುರೇಶ್, ಸದಸ್ಯ ಎಂ.ಮಹೇಶ್, ಜಿಲ್ಲಾ ಅಂಗವಿಕಲರ ಸಂಘದ ಅಧ್ಯಕ್ಷ ರಮೇಶ್, ಡಿವೈಪಿಸಿಗಳಾದ ಲಕ್ಷ್ಮೀಪತಿ, ನಾಗೇಂದ್ರ, ಬಿಇಓ ಹನುಮಶೆಟ್ಟಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಉಪಾಧ್ಯಕ್ಷ ಮಲ್ಲಿಕಾರ್ಜುನ್, ಬಿಆರ್‌ಸಿ ರಾಜೀವ್, ಎಂಆರ್‌ಡಬ್ಲ್ಯು ರಾಜೇಶ್, ಸಿಆರ್‌ಪಿ ಶಿವಮೂರ್ತಿ, ಎಪಿಸಿ ಅನ್ನಪೂರ್ಣ, ಮಕ್ಕಳ ಪೋಷಕರು, ವೈದ್ಯರು, ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು ಹಾಜರಿದ್ದರು.

ಬುದ್ಧಿಮಾಂದ್ಯ ನಾಪತ್ತೆ



ಕೊಳ್ಳೇಗಾಲ, ಅ.28– ತಾಲೂಕಿನ ಇಕ್ಕಡಹಳ್ಳಿ ಗ್ರಾಮದಿಂದ ಅ.14ರಂದು ಬುದ್ಧಿಮಾಂದ್ಯ ಬಾಲಕನೋರ್ವ ಕಾಣೆಯಾಗಿದ್ದಾನೆ.

ಇಕ್ಕಡಹಳ್ಳಿ ಗ್ರಾಮದ ಕೆಂಪಯ್ಯ ಅವರ ಮಗ ಮಹದೇವಸ್ವಾಮಿ(17) ಕಾಣೆಯಾಗಿದ್ದು, ಈತನನ್ನು ಮನೆಯಲ್ಲಿ ಬಿಟ್ಟು ನಾನು ಮತ್ತು ನನ್ನ ಹೆಂಡತಿ ಕೂಲಿಗೆ ಹೋಗಿ ಬರುವಷ್ಟರಲ್ಲಿ ನಾಪತ್ತೆಯಾಗಿದ್ದಾನೆ ಎಂದು ತಂದೆ ಕೆಂಪಯ್ಯ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಪರಿಶಿಷ್ಟ ಪಂಗಡದ ಸಮಸ್ಯೆ ತ್ವರಿತವಾಗಿ ಪರಿಹರಿಸಿ

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೋನಾ ರೋತ್ ಸೂಚನೆ

ಚಾಮರಾಜನಗರ: ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಸಮಸ್ಯೆಗಳನ್ನು ಆಲಿಸಿ, ತ್ವರಿತ ಗತಿಯಲ್ಲಿ ಪರಿಹರಿಸಲು ಸೂಕ್ತ ಕ್ರಮ ವಹಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೋನಾ ರೋತ್ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಪರಿಶಿಷ್ಟ ಪಂಗಡ ಹಿತರಕ್ಷಣಾ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಯಾವುದೇ ಭಾಗದಲ್ಲಿ ಪರಿಶಿಷ್ಟರ ದೂರು, ಸಮಸ್ಯೆ ಕಂಡುಬಂದರೆ ತುರ್ತಾಗಿ ಪರಿಹರಿಸಲು ಮುಂದಾಗಬೇಕು. ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಸಿದರು.

ಆರಂಭದಲ್ಲಿ ಪರಿಶಿಷ್ಟ ಪಂಗಡದ ಮುಖಂಡರಿಂದ ದೂರು, ಸಮಸ್ಯೆಗಳನ್ನು ಅಪರ ಡಿಸಿ ಗೀತಾ ಹುಡೇದ ಹಾಗೂ ಜಿಲ್ಲಾ ಎಸ್‌ಪಿ ಡಾ.ಬಿ.ಟಿ.ಕವಿತ ಆಲಿಸಿದರು.

ಇದೇ ವೇಳೆ ಸಮುದಾಯದ ಮುಖಂಡರು ಮಾತನಾಡಿ, ನಗರದ ಡಿವಿಯೇಷನ್ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ವೇಳೆ ಜನಾಂಗದ 100 ಕುಟುಂಬಗಳು ಮನೆ ಕಳೆದುಕೊಂಡಿವೆ. ಉತ್ತವಳ್ಳಿ ಬಳಿ ಜಾಗ ಗುರುತಿಸಲಾಗಿದ್ದರೂ ಇದುವರೆಗೂ ನಿವೇಶನ ನೀಡಿಲ್ಲ. ಹಕ್ಕುಪತ್ರ ಮಾತ್ರ ನೀಡಲಾಗಿದೆ. ಮನೆ ಕಳೆದುಕೊಂಡ ಎಲ್ಲರಿಗೂ ಸೂಕ್ತ ಪರಿಹಾರ ಅಥವಾ ಮನೆಗಳನ್ನು ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನಗರಸಭೆ ಪೌರಾಯುಕ್ತ ರಾಮದಾಸ್, ರಸ್ತೆ ಅಗಲೀಕರಣದ ವೇಳೆ 363 ಕುಟುಂಬಗಳು ಮನೆ ಕಳೆದುಕೊಂಡಿದ್ದು, ಈ ಪೈಕಿ 100 ಕುಟುಂಬಗಳು ನಾಯಕ ಜನಾಂಗಕ್ಕೆ ಸೇರಿವೆ. ಉತ್ತವಳ್ಳಿ ಬಳಿ ನಿವೇಶನಕ್ಕಾಗಿ ಜಾಗ ಗುರುತಿಸಿ ಈಗಾಗಲೇ 292 ನಿವೇಶನ ನೀಡಲಾಗಿದೆ. ಬಡಾವಣೆ ಅಭಿವೃದ್ಧಿಗೆ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆ ಬಳಿಕ ನಿವೇಶನ ನೀಡಲು ಕ್ರಮ ವಹಿಸಲಾಗುವುದು ಎಂದರು.

ಸಭೆಯಲ್ಲಿ ಎಸಿ ಮಹೇಶ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ಮುಖಂಡರಾದ ಸುರೇಶ್ ನಾಯಕ, ಸೋಮನಾಯಕ, ವಿರಾಟ್ ಶಿವು, ವಿವಿಧ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.



ಚಾಮರಾಜನಗರ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಪಂಗಡ ಹಿತರಕ್ಷಣಾ ಸಭೆಯಲ್ಲಿ ಅಪರ ಡಿಸಿ ಗೀತಾ ಹುಡೇದ ಸಮಸ್ಯೆ ಆಲಿಸಿದರು.

ಮೈಸೂರು ಮಿತ್ರ

ಮುಡಾ ಅಭಿವೃದ್ಧಿಪಡಿಸಿದ ಬಡಾವಣೆಗಳ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ

ಆಯಾಯ ಸ್ಥಳೀಯ ಸಂಸ್ಥೆಗಳು ಎನ್‌ಒಸಿ ನೀಡುವಂತೆ ಡಿಸಿ ಸೂಚನೆ



ಮೈಸೂರು ಜಿಪಂ ಸಭಾಂಗಣದಲ್ಲಿ ಮುಡಾ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವ ಕುರಿತು ಸಭೆ ನಡೆಯಿತು. ಶಾಸಕ ಜಿ.ಟಿ.ದೇವೇಗೌಡ, ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಮುಡಾ ಆಯುಕ್ತ ರಘುನಂದನ್, ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಶರೀಫ್ ಮತ್ತಿತರರಿದ್ದರು.

ಮೈಸೂರು, ಅ.28(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ನಿರ್ಮಿಸಿರುವ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವ ನಿಟ್ಟಿನಲ್ಲಿ ಆಯಾ ಬಡಾವಣೆ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳು ಎನ್‌ಒಸಿ(ನಿರಾಕ್ಷೇಪಣಾ ಪ್ರಮಾಣಪತ್ರ) ನೀಡುವಂತೆ ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಸೂಚನೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯತ್‌ನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಸೋಮವಾರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಈಗಾಗಲೇ ಮುಡಾದಲ್ಲಿ ಖಾತೆ ಮಾಡಿಕೊಡುವುದನ್ನು ನಿಲ್ಲಿಸಲಾಗಿದ್ದು, ಸರ್ಕಾರದ ಆದೇಶದನ್ವಯ ಸ್ಥಳೀಯ ಸಂಸ್ಥೆಗಳಿಗೆ ಮುಡಾ ಅಭಿವೃದ್ಧಿಪಡಿಸಿರುವ ಬಡಾವಣೆಗಳನ್ನು ಹಸ್ತಾಂತರಿಸಲಾಗುವುದು. ಹಸ್ತಾಂತರವಾದ ಬಳಿಕ ಬಡಾವಣೆಯ ಎಲ್ಲಾ ಜವಾಬ್ದಾರಿ ಆಯಾ ಸ್ಥಳೀಯ ಸಂಸ್ಥೆಗಳದ್ದೇ ಆಗಿರಲಿದೆ ಎಂದು ತಿಳಿಸಿದರು.

ಮುಡಾ ನಿರ್ಮಿಸಿರುವ 17 ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿಲ್ಲ. ಈ ಬಡಾವಣೆಗಳ ಹಸ್ತಾಂತರ ಪ್ರಕ್ರಿಯೆ ಕೂಡಲೇ ಆಗಬೇಕಿದೆ. ಅದರಲ್ಲಿ 38,244 ನಿವೇಶನಗಳು, 196 ಉದ್ಯಾನವನಗಳಿದ್ದು, 3,830 ಎಕರೆ 8 ಗುಂಟೆ ವಿಸ್ತೀರ್ಣ ಹೊಂದಿದೆ. ಮೈಸೂರು ನಗರ ಪಾಲಿಕೆಗೆ ಶ್ರೀರಾಂಪುರ 3ನೇ ಹಂತ(ರಿಂಗ್ ರಸ್ತೆ ಪಂಕ್ತೀಕರಣ ಪ್ರದೇಶ), ಅಂತ್ರೋಪಲಾಜಿಕಲ್ ಆಫ್ ಇಂಡಿಯಾ ಪಕ್ಕದ ಖಾಲಿ ಜಾಗದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆ ಹಾಗೂ ದೇವನೂರು 3ನೇ ಹಂತ ಹಸ್ತಾಂತರವಾಗಲಿದೆ ಎಂದರು.

ಅದೇ ರೀತಿ ಹೂಟಗಳ್ಳಿ ನಗರಸಭೆಗೆ ವಿಜಯನಗರ 4ನೇ ಹಂತದ 1, 2 ಮತ್ತು 3ನೇ ಘಟ್ಟ, ನಂಜನಗೂಡು ನಗರಸಭೆಗೆ ನಂಜನಗೂಡು ಚಾಮಲಾಪುರ ಬಡಾವಣೆ, ನಂಜನಗೂಡು ಬಸವನಗುಡಿ ಬ್ಲಾಕ್ ಹಾಗೂ ನಂಜನಗೂಡು ಹಂಡುವಿನಹಳ್ಳಿ ಹಸ್ತಾಂತರವಾಗಲಿದೆ. ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿಗೆ ಹಂಚ್ಯಾ-ಸಾತಗಳ್ಳಿ ಬಿ ವಲಯ ಬಡಾವಣೆ, ಹಂಚ್ಯಾ–ಸಾತಗಳ್ಳಿ ಬಿ.ವಲಯ ಸರ್ವೆ ನಂ. 105 ಮತ್ತು ಇತರೆ, ಸಾತಗಳ್ಳಿ 2ನೇ ಹಂತ, ಹಂಚ್ಯಾ–ಸಾತಗಳ್ಳಿ ಎ.ವಲಯ ಹಾಗೂ ವಸಂತನಗರ ಸೇರಲಿದೆ.

ಶ್ರೀರಾಂಪುರ ಪಟ್ಟಣ ಪಂಚಾಯ್ತಿಗೆ ನಾಚನಹಳ್ಳಿಕೊಪ್ಪಲು 3ನೇ ಹಂತ, ಕಡಕೊಳ ಪಟ್ಟಣ ಪಂಚಾಯ್ತಿಗೆ ಶಾಂತವೇರಿ ಗೋಪಾಲಗೌಡ ನಗರ(ಸರ್ಕಾರಿ ಉತ್ತನಹಳ್ಳಿ ಗ್ರಾಮ), ಬೋಗಾದಿ ಪಟ್ಟಣ ಪಂಚಾಯ್ತಿಗೆ ಆರ್.ಟಿ.ನಗರ, ಆಲನಹಳ್ಳಿ ಗ್ರಾಪಂಗೆ ಲಲಿತಾದ್ರಿಪುರ(ಉತ್ತರ ಮತ್ತು ದಕ್ಷಿಣ), ಮೊಸಂಬಾಯನಹಳ್ಳಿ ಗ್ರಾಪಂಗೆ ಲಾಲ್ ಬಹದ್ದೂರ್ ಶಾಸ್ತ್ರಿನಗರ(ಯಾಂದಹಳ್ಳಿ ಗ್ರಾಮ) ಹಸ್ತಾಂತರವಾಗಲಿದೆ ಎಂದರು.

ವ್ಯವಸ್ಥಿತವಾಗಿ ಹಸ್ತಾಂತರ: ಮುಡಾ ನಿರ್ಮಿಸಿರುವ ಬಡಾವಣೆಗಳನ್ನು ವ್ಯವಸ್ಥಿತವಾಗಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗುವುದು, ಮುಡಾದಿಂದ ಹಸ್ತಾಂತರ ಪಡೆದ ಬಡಾವಣೆಗಳ ಅಭಿವೃದ್ಧಿಗೆ ಹಣ ಬಿಡುಗಡೆಮಾಡಿಸಿಕೊಡಲಾಗುವುದು. ಆದ್ದರಿಂದ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಕೂಡಲೇ ಬಡಾವಣೆಗಳ ಸ್ಥಳ ಪರಿಶೀಲನೆ ನಡೆಸಿ, ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳ ಪಟ್ಟಿಯನ್ನು ಎನ್‌ಒಸಿ ಜೊತೆಗೆ ನೀಡಿದರೆ, ಅನುದಾನಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಯಾವುದೇ ಗೊಂದಲಗಳು ಉಂಟಾಗದಂತೆ ವ್ಯವಸ್ಥಿತವಾಗಿ ಹಸ್ತಾಂತರಿಸಲಾಗುವುದು. ಇದೇ ವಿಚಾರವಾಗಿ ನ.8 ರಂದು ಮುಂದುವರೆದ ಸಭೆ ನಡೆಸಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕಿದೆ ಎಂದು ತಿಳಿಸಿದರು.

900ಕ್ಕೂ ಹೆಚ್ಚು ಖಾಸಗಿ ಬಡಾವಣೆಗಳಿವೆ: ಮೈಸೂರು ನಗರ ಹಾಗೂ ಸುತ್ತಮುತ್ತ ಸುಮಾರು 900ಕ್ಕೂ ಹೆಚ್ಚು ಖಾಸಗಿ ಬಡಾವಣೆಗಳಿವೆ ಆದರೆ ಅವುಗಳಲ್ಲಿ ಬಹುತೇಕ ಬಡಾವಣೆಗಳು ಅಭಿವೃದ್ಧಿಯಾಗಿಲ್ಲ. ಕಳೆದ ಐದಾರು ವರ್ಷದಲ್ಲಿ ಅಭಿವೃದ್ಧಿಯಾದ 200 ಖಾಸಗಿ ಬಡಾವಣೆಗಳನ್ನು ಮೊದಲ ಹಂತವಾಗಿ ಸ್ಥಳೀಯ ಸಂಸ್ಥೆಗಳು ಹಸ್ತಾಂತರ ಪಡೆಯಬೇಕಿದೆ. ಖಾಸಗಿ ಬಡಾವಣೆಗಳ ಹಸ್ತಾಂತರ, ತೆರಿಗೆ ವಸೂಲಿ ಮತ್ತು ನಿರ್ವಹಣೆ ಸಂಬಂಧ ಮುಂದಿನ ದಿನಗಳಲ್ಲಿ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ತಪ್ಪುಗಳನ್ನು ಹುಡುಕುವ ಕೆಲಸ ಮಾಡಬೇಡಿ...

ಹಸ್ತಾಂತರ ಪಡೆಯಬೇಕಾದ ಬಡಾವಣೆಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳು ಬಾಕಿ ಇರಲಿವೆ. ಹಾಗಾಗಿ ಸ್ಥಳೀಯ ಸಂಸ್ಥೆಗಳು ಬಡಾವಣೆಗಳು ಅಭಿವೃದ್ಧಿಯಾಗಿಲ್ಲ. ರಸ್ತೆ ಚರಂಡಿ, ಯುಜಿಡಿ ಸರಿಯಿಲ್ಲ ಎಂಬಿತ್ಯಾದಿ ತಪ್ಪುಗಳನ್ನು ಹುಡುಕದೆ ಎನ್‌ಒಸಿ ರೆಡಿ ಮಾಡಿಕೊಡಿ. ಬಡಾವಣೆಗಳ ಹಸ್ತಾಂತರ ಪ್ರಕ್ರಿಯೆಯನ್ನು ತಡಮಾಡದೆ ಕಡ್ಡಾಯವಾಗಿ ಮಾಡಲೇಬೇಕಿದೆ. - ಜಿ.ಲಕ್ಷ್ಮಿಕಾಂತ್‌ರೆಡ್ಡಿ, ಜಿಲ್ಲಾಧಿಕಾರಿ.

ಬಡಾವಣೆಗಳ ಹಸ್ತಾಂತರ ಪಾರದರ್ಶಕವಾಗಿರಲಿ...!

ಮುಡಾ ನಿರ್ಮಿಸಿರುವ ಬಡಾವಣೆಗಳ ಹಸ್ತಾಂತರ ಪಾರದರ್ಶಕವಾಗಿರಲಿ. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಆಯಾ ಬಡಾವಣೆಯ ನಿವಾಸಿಗಳಿಗೆ ಹಸ್ತಾಂತರ ಪಡೆಯುವ ಸತ್ಯ ಸಂಗತಿಯನ್ನು ತಿಳಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದರು.

ಮುಡಾ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಜಂಟಿಯಾಗಿ ಹಸ್ತಾಂತರ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಬೇಕು. ಗ್ರಾಪಂ, ಪಪಂ ಹಾಗೂ ನಗರಸಭೆಯಲ್ಲಿ ಗೊಂದಲಗಳಾಗಬಾರದು. ನಿವೇಶನಗಳ ಮಾಲೀಕರ ಮಾಹಿತಿ ಸರಿಯಾಗಿರಬೇಕು. ಬಡಾವಣೆಗಳ ಹಸ್ತಾಂತರದಿಂದ ಸ್ಥಳೀಯ ಸಂಸ್ಥೆಗಳಿಗೂ ಆದಾಯದ ಮೂಲ ಬರಲಿದೆ. ಸಾಧ್ಯವಾದರೆ ಆಯಾ ಬಡಾವಣೆಗಳಲ್ಲಿಯೇ ಕ್ಯಾಂಪ್‌ಗಳನ್ನು ನಡೆಸಿ ಖಾತೆ ಮಾಡಿಕೊಡಿ ಎಂದು ಕಿವಿಮಾತು ಹೇಳಿದರು.

ಮುಡಾದಲ್ಲಿ ಖಾತೆ ನೀಡುವುದಿಲ್ಲ...!

ಮುಡಾದಲ್ಲಿ ಈಗಾಗಲೇ ಖಾತೆ ಮಾಡಿಕೊಡುವುದನ್ನು ನಿಲ್ಲಿಸಲಾಗಿದ್ದು, ಆಯಾ ಬಡಾವಣೆಗಳ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳು ಖಾತೆ ಮಾಡಿಕೊಡಬೇಕು ಎಂದು ಮುಡಾ ಆಯುಕ್ತ ರಘುನಂದನ್ ಹೇಳಿದರು. ಬಡಾವಣೆಗಳ ಹಸ್ತಾಂತರಕ್ಕೂ ಮುನ್ನವೇ ಖಾತೆಗಳನ್ನು ಮಾಡಿಕೊಡಲು ಅವಕಾಶವಿದೆ. ಆದ್ದರಿಂದ ಈಗಾಗಲೇ ನಿವೇಶನ ಖರೀದಿಸಿ, ಖಾತೆ ಮಾಡಿಸಿಕೊಳ್ಳದವರಿಗೆ ಖಾತೆ ಮಾಡಿಕೊಡಿ. ಮುಡಾ ಬಡಾವಣೆಗಳನ್ನು ಅಭಿವೃದ್ಧಿ ಮಾಡಿ ಹಸ್ತಾಂತರ ಮಾಡಬೇಕೇ ಹೊರತು ಖಾತೆ ಮಾಡಿಕೊಡುವ ಅಧಿಕಾರ ಮುಡಾಗೆ ಇಲ್ಲ. ಆದರೆ ಮೊದಲಿನಿಂದಲೂ ಖಾತೆ ಮಾಡಿಕೊಡಲಾಗುತ್ತಿದೆ. ಆದರೆ ಮುಂದಿನ ದಿನಗಳಲ್ಲಿ ಖಾತೆ ಮಾಡಿಕೊಡುವ ಜವಾಬ್ದಾರಿ ಆಯಾ ಸ್ಥಳೀಯ ಸಂಸ್ಥೆಗಳದ್ದೇ ಆಗಿರಲಿದೆ ಎಂದರು.

ಮುಡಾದ ಮತ್ತೊಂದು ಬ್ರಹ್ಮಾಂಡ ಭ್ರಷ್ಟಾಚಾರ ಬಯಲು

928 ಪ್ರಭಾವಿಗಳಿಗೆ ಅಕ್ರಮ ನಿವೇಶನ ಮಂಜೂರು ಪಟ್ಟಿ ಸಮೇತ ಲೋಕಾಯುಕ್ತರಿಗೆ ಸ್ನೇಹಮಯಿ ಕೃಷ್ಣ ದೂರು

- ನಟೇಶ್, ದಿನೇಶ್‌ಕುಮಾರ್ ಹಗರಣದ ರೂವಾರಿಗಳು
- ಇಬ್ಬರನ್ನು ಬಂಧಿಸಿದರೆ ಅವ್ಯವಹಾರ ಬಯಲು





ಕೃಷ್ಣ

ಮೈಸೂರು, ಅ.28(ಬಿಎಲ್‌ಯು)– ಮುಡಾದಲ್ಲಿ ಶೇಕಡ 50:50 ಅನುಪಾತದಲ್ಲಿ ಅಕ್ರಮವಾಗಿ 928 ಪ್ರಭಾವಿಗಳು ನಿವೇಶನ ಪಡೆದಿರುವ ಪಟ್ಟಿಯನ್ನು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಇಂದು ಲೋಕಾಯುಕ್ತರಿಗೆ ಸಲ್ಲಿಸಿದರು. ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ಅವರಿಗೆ ದಾಖಲಾತಿ ಸಲ್ಲಿಸಿ, ಈ ಅಕ್ರಮಕ್ಕೆ ಮೂಲ ಕಾರಣಕರ್ತರಾದ ಮುಡಾದ ಹಿಂದಿನ ಆಯುಕ್ತರಾದ ಡಾ.ನಟೇಶ್ ಹಾಗೂ ದಿನೇಶ್ ಕುಮಾರ್ ಅವರನ್ನು ಬಂಧಿಸುವಂತೆ ಮನವಿ ಮಾಡಿದರು.

ಬಿಲ್ಡರ್ ಮಂಜುನಾಥ್ ಒಬ್ಬನಿಗೆ 40 ನಿವೇಶನ ಮಂಜೂರು

ಇಂದು ಇಡಿ ಅಧಿಕಾರಿಗಳ ದಾಳಿಗೊಳಗಾಗಿರುವ ಬಿಲ್ಡರ್ ಮಂಜುನಾಥ್ ಶೇ.50:50 ಅನುಪಾತದಲ್ಲಿ 40ಕ್ಕೂ ಹೆಚ್ಚು ನಿವೇಶನ ಪಡೆದಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದರು. ಈ ಸಂಬಂಧ ಮಂಜುನಾಥ್‌ಗೆ ಮಂಜೂರಾಗಿರುವ ನಿವೇಶನಗಳ ವಿಸ್ತೀರ್ಣ, ಸ್ಥಳದ ಮಾಹಿತಿ ಸೇರಿದಂತೆ ಹಲವು ದಾಖಲಾತಿ ಪಟ್ಟಿಯನ್ನು ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗೆ ಸಲ್ಲಿಸಿದರು. ನಾನು ಕೊಟ್ಟಿರುವ ದಾಖಲಾತಿಗಳನ್ನು ಸಮಗ್ರವಾಗಿ ಪರಿಶೀಲನೆ ಮಾಡಿ ಅಕ್ರಮವಾಗಿ ನಿವೇಶನ ಪಡೆದಿರುವ ಮಂಜುನಾಥ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಮಂಜುನಾಥ್‌ಗೆ ಅಕ್ರಮವಾಗಿ ನಿವೇಶನ ಮಂಜೂರಾತಿ ಆಗಿರುವ ಬಗ್ಗೆ ದಾಖಲಾತಿ ಸಮೇತ ಅಕ್ಟೋಬರ್ 11, 2023 ರಂದು ಲೋಕಾಯುಕ್ತಕ್ಕೆ ದೂರು ನೀಡಿದ್ದೆ. ಆದರೆ ಆತನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬದಲಿಗೆ, ಮತ್ತೆ ಮಂಜುನಾಥ್‌ಗೆ ಮುಡಾದಿಂದ ಇದೇ ನಟೇಶ್ ಮತ್ತು ದಿನೇಶ್ ಕುಮಾರ್ ಹತ್ತಾರು ನಿವೇಶನಗಳನ್ನು ನೀಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದರು. ಇದೇ ವೇಳೆ ಇಡಿ ಸಹಾಯಕ ನಿರ್ದೇಶಕ ಮುರುಳಿ ಕಣ್ಣನ್ ಅವರಿಗೆ ಇ ಮೇಲ್ ಮೂಲಕ ದೂರು ಸಲ್ಲಿಸಿರುವ ಸ್ನೇಹಮಯಿ ಕೃಷ್ಣ, ನಿವೇಶನ ಖರೀದಿ ಸಂಬಂಧ ಮಂಜುನಾಥ್ ಆಪ್ತ ಸಹಾಯಕ ಹಣ ಪಡೆಯುತ್ತಿರುವುದನ್ನು ಉಲ್ಲೇಖಿಸಿದ್ದಾರೆ.

ಹಲವು ಪ್ರಭಾವಿ ರಾಜಕೀಯ ನಾಯಕರು, ಭೂ ಮಾಫಿಯಾ ಇದರ ಫಲಾನುಭವಿಗಳಾಗಿದ್ದಾರೆ. ಇವರೆಲ್ಲರ ವಿರುದ್ಧ ಈಗ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಣ್ಣನ ಮಗ ನವೀನ್ ಬೋಸ್, ಮುಡಾ ಮಾಜಿ ಅಧ್ಯಕ್ಷ ಮರಿಗೌಡ ಸಂಬಂಧಿ ಸೇರಿದಂತೆ ಹಲವು ರಾಜಕೀಯ ನಾಯಕರಿಗೆ ನಿವೇಶನ ನೀಡಲಾಗಿದೆ ಎಂದು ದೂರಿದರು.

ಮುಡಾದಲ್ಲಿ ಒಂದು ನಿವೇಶನ ಪಡೆಯಲು ಜನರು ಹತ್ತಾರು ವರ್ಷಗಳಿಂದ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಆದರೆ ಇಲ್ಲಿ ಒಬ್ಬನೇ ವ್ಯಕ್ತಿಗೆ ನೂರಾರು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಆಪಾದಿಸಿದರು.

ಶೇಕಡ 50:50 ಅನುಪಾತದಲ್ಲಿ ದೇವನೂರು ಬಡಾವಣೆಯಲ್ಲಿ ನಿವೇಶನ ಮಂಜೂರಾಗಿದ್ದರೆ, ಎಲ್ಲಾ ಪ್ರಭಾವಿಗಳು ನಿವೇಶನಗಳಿಗೆ ಚಿನ್ನದ ಬೆಲೆ ಇರುವ ವಿಜಯನಗರ, ದಟ್ಟಗಳ್ಳಿಯಂತಹ ಬಡಾವಣೆಯಲ್ಲಿ ನಿವೇಶನ ಪಡೆದಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ದೂರಿದರು.

ಮುಡಾದ ಹಿಂದಿನ ಆಯುಕ್ತರಾದ ಡಾ.ನಟೇಶ್ ಹಾಗೂ ದಿನೇಶ್ ಕುಮಾರ್ ಅಧಿಕಾರಾವಧಿಯಲ್ಲಿ ಈ ನಿವೇಶನಗಳ ಹಂಚಿಕೆಯಾಗಿದ್ದು, ಇವರನ್ನು ಬಂಧಿಸಿದರೆ ಹಗರಣದ ಸಮಗ್ರ ವಿವರ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಇಬ್ಬರೂ ಅಧಿಕಾರಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವು

ಶಾಸಕ ಹರೀಶ್ ಗೌಡ ವಿಶ್ವಾಸ



ಮೈಸೂರಿನ ವಾರ್ಡ್ ನಂಬರ್ 23ರ ವ್ಯಾಪ್ತಿಯ ಕೊಲ್ಲಾಪುರದಮ್ಮ ದೇವಸ್ಥಾನದ ಹಿಂಭಾಗ ಅಂದಾಜು 3.5 ಲಕ್ಷ ವೆಚ್ಚದ ಕೊಳವೆಬಾವಿ ಕಾಮಗಾರಿಗೆ ಶಾಸಕ ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಅ. 28– ಸಂಡೂರು, ಚನ್ನಪಟ್ಟಣ, ಶಿಗ್ಗಾವಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾರೆ ಎಂದು ಶಾಸಕ ಹರೀಶ್‌ಗೌಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ವಾರ್ಡ್ ನಂಬರ್ 23ರ ವ್ಯಾಪ್ತಿಯ ಕೊಲ್ಲಾಪುರದಮ್ಮ ದೇವಸ್ಥಾನದ ಹಿಂಭಾಗ ಅಂದಾಜು 3.5 ಲಕ್ಷ ವೆಚ್ಚದ ಕೊಳವೆಬಾವಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ನಂತರ ಅವರು ಮಾತನಾಡಿದರು.


ಅಧಿಕಾರದಲ್ಲಿ ನಮ್ಮ ಸರ್ಕಾರ ಇದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಘಟನಾ ಚತುರತೆಯಿಂದ ನಮಗೆ ಗೆಲುವು ಖಚಿತ, ಜನತೆ ಕಾಂಗ್ರೆಸ್ ಪಕ್ಷದ ಪರ ಇದ್ದಾರೆ ಎಂದು ಹೇಳಿದರು.

ವಾರ್ಡ್ 23 ರ ಕೆಲವೆಡೆ ಕುಡಿಯುವ ನೀರಿನ ಸಮಸ್ಯೆ ಇದೆ ಹಾಗಾಗಿ ಬೋರ್‌ವೆಲ್ ಕನೆಕ್ಷನ್ ಕೊಡುವ ಕೆಲಸ ಮಾಡಲಾಗುತ್ತಿದೆ. ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತೇನೆ ಎಂದು ಈ ವೇಳೆ ಹರೀಶ್ ಗೌಡ ಭರವಸೆ ನೀಡಿದರು.

ಟ್ಯಾಂಕ್ ನಿರ್ಮಾಣದ ಕೆಲಸ ಶೇ.70 ರಷ್ಟು ಮುಗಿದಿದೆ. ರಮಾವಿಲಾಸ್ ರೋಡ್, ಬಂಡಿಕೇರಿ, ಮರಿಮಲ್ಲಪ್ಪ ಶಾಲೆ ಹಿಂಭಾಗ ಮತ್ತು ಮುಂಭಾಗ ಹೀಗೆ ಈ ಭಾಗದ ಎಲ್ಲಾ ಕಡೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಲಾಗುತ್ತದೆ. ಇನ್ನು ಒಂದು ತಿಂಗಳೊಳಗೆ ಕಾಮಗಾರಿ ಮುಗಿದು ಕುಡಿಯುವ ನೀರು ಸರಬರಾಜು ಮಾಡುತ್ತೇವೆ ಎಂದು ಹರೀಶ್ ಗೌಡ ಭರವಸೆ ನೀಡಿದರು

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ನಾಗಭೂಷಣ, ಕಾಂಗ್ರೆಸ್ ಮುಖಂಡರುಗಳಾದ ರಾಜೀವ, ಮಹದೇವ, ಆನಂದ, ರವಿಚಂದ್ರ, ಮಂಜುನಾಥ, ಶಾಂತ, ಮಂಗಳ, ಸಂಜಯ, ಲೋಕೇಶ, ಮುಸ್ತಾಫ, ಯುಜಿಡಿ ವಾಟರ್ ಸಪ್ಲೈ ಅಧಿಕಾರಿ ಜಗದೀಶ್ ಆರ್, ವಾಟರ್ ಇನ್ಸ್‌ಪೆಕ್ಟರ್ ಮಹದೇವ್ ಹಾಗೂ ಅನೇಕ ಮುಖಂಡರು ಹಾಜರಿದ್ದರು.

ಹಾಸನಾಂಬೆ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ



ಹಾಸನ, ಅ.28– ಸಿಎಂ ಸಿದ್ದರಾಮಯ್ಯ ಇಂದು ಹಾಸನದ ಪ್ರಸಿದ್ಧ ಹಾಸನಾಂಬೆ ದೇವಿ ದರ್ಶನ ಪಡೆದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಕೆಎನ್ ರಾಜಣ್ಣ, ರಾಮಲಿಂಗಾರೆಡ್ಡಿ, ಶಾಸಕ ಶಿವಲಿಂಗೇಗೌಡ ಸೇರಿದಂತೆ ಹಲವು ಕಾಂಗ್ರೆಸ್ ಶಾಸಕರು ಸಿಎಂಗೆ ಸಾಥ್ ನೀಡಿದರು. ದೇವಿ ದರ್ಶನ ಪಡೆದ ಬಳಿಕ ಮಾತನಾಡಿದ ಸಿದ್ದರಾಮಯ್ಯ, ಕಳೆದ ವರ್ಷ ಹಾಸನಾಂಬೆ ಜಾತ್ರೆ ಮತ್ತು ಸಿದ್ದೇಶ್ವರ ಜಾತ್ರಾ ಮಹೋತ್ಸವದಲ್ಲಿ ಭಕ್ತಿಯಿಂದ ಭಾಗವಹಿಸಿದ್ದೆ. ಹಾಸನಾಂಬೆ, ಸಿದ್ದೇಶ್ವರಸ್ವಾಮಿ, ಗಣಪತಿ ದರ್ಶನ ಪಡೆದು ದೇವರಲ್ಲಿ ಪ್ರಾರ್ಥನೆ ಮಾಡಿದ್ದೆ. 2024–25ನೇ ವರ್ಷದಲ್ಲಿ ಒಳ್ಳೆಯ ಮಳೆ, ಬೆಳೆ ಆಗಲಿ, ರೈತರು ಸುಭಿಕ್ಷವಾಗಿರಲಿ ಎಂದು ಪ್ರಾರ್ಥನೆ ಮಾಡಿದ್ದೇನೆ ಎಂದಿದ್ದಾರೆ. ಈ ಬಾರಿ ಉತ್ತಮ ಮಳೆಯಾಗಿದೆ, ಬೆಳೆಯಾಗಿದೆ, ಎಲ್ಲಾ ಜಲಾಶಯಗಳು ತುಂಬಿವೆ. ಇವತ್ತು ಜಲಾನಯನಗಳಲ್ಲಿ ಶೇ.90 ರಷ್ಟು ನೀರಿದೆ. ಎಲ್ಲಾ ರೈತರ ಮೊಗದಲ್ಲಿ ಮಂದಹಾಸ ಕಾಣುತ್ತಿದೆ, ರೈತರು ಖುಷಿಯಾಗಿದ್ದಾರೆ ಎಂದು ಹೇಳಿದರು.

ನನಗೆ ಒಳ್ಳೆಯದು ಆಗಬೇಕು ಎನ್ನುವುದಕ್ಕಿಂತ ಏಳು ಕೋಟಿ ಜನತೆಗೆ ಒಳ್ಳೆಯದಾಗಬೇಕು. ಅವರಿಗೆ ಒಳ್ಳೆಯದಾದರೆ ನಮಗೂ ಒಳ್ಳೆಯದಾಗುತ್ತೆ. ಬೇರೆಯವರಿಗೆ ಒಳ್ಳೆಯದು ಮಾಡು, ಆಮೇಲೆ ನಮಗೆ ಮಾಡು ಎನ್ನಬೇಕು. ಆಗ ಪ್ರಾರ್ಥನೆ ಫಲಿಸುತ್ತೆ. ನಾವು ಪರಸ್ಪರ ಪ್ರೀತಿಸಬೇಕು, ದ್ವೇಷ ಮಾಡಬಾರದು. ದ್ವೇಷ ಹರಡುವ ಕೆಲಸ ಮಾಡಬಾರದು, ಅವರಿಗೆ ತಕ್ಕ ಶಾಸ್ತಿ ಮಾಡಬೇಕು. ದೇವಿ ಅದೇ ರೀತಿ ಮಾಡಬೇಕು ಅಂತ ಸಿಎಂ ಹೇಳಿದರು.

ದುಷ್ಟರ ಶಿಕ್ಷಕ, ಶಿಷ್ಟ ರಕ್ಷಕ ಆಗಲಿ ಅಂತ ದಸರಾ ಹಬ್ಬ ಮಾಡುತ್ತೇವೆ ಈ ಬಾರಿ ವಿಜೃಂಭಣೆಯಿಂದ ಹಾಸನಾಂಬೆ ಜಾತ್ರಾ ಮಹೋತ್ಸವ ಮಾಡಿದ್ದಾರೆ ರಾಜಣ್ಣ ಉಸ್ತುವಾರಿ ಸಚಿವರಾದ ಮೇಲೆ ಅದ್ಧೂರಿಯಾಗಿ ಜಾತ್ರಾ ಮಹೋತ್ಸವ ಮಾಡಿದ್ದಾರೆ. ರಾಜಣ್ಣ ಒತ್ತಾಯ ಮಾಡಿದ್ರು, ಹಾಗಾಗಿ ಹಾಸನಾಂಬೆ ದೇವಿ ದರ್ಶನಕ್ಕೆ ಎರಡನೇ ಬಾರಿ ಬಂದಿದ್ದೇನೆ. ಎಲ್ಲರಿಗೂ ಶಾಂತಿ, ನೆಮ್ಮದಿ ಕೊಡಲಿ ಎಂದು ದೇವಿಯಲ್ಲಿ ಪ್ರಾರ್ಥನೆ ಮಾಡಿದ್ದೇನೆ ಎಂದರು.

ಸಂಗ್ರೇಶಿಯವರಿಗೆ ಅಭಿನಂದನೆ



ಕರ್ನಾಟಕ ರಾಜ್ಯ ಮುಖ್ಯ ಚುನಾವಣಾ ಆಯುಕ್ತರಾದ ಸಂಗ್ರೇಶಿಯವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಚಿತ್ರದಲ್ಲಿ ಸಂಘದ ಅಧ್ಯಕ್ಷ ಲೋಕೇಶ್ ಇತರರಿದ್ದಾರೆ.

ಬ್ಯಾಕ್‌ಲಾಗ್ ನೇಮಕಾತಿ ರದ್ದುಗೊಳಿಸುವ ಸಂಬಂಧ ಹೋರಾಟ



ಮೈಸೂರು, ಅ.28(ಎಸ್‌ಬಿಡಿ)– ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಂಬಂಧ ಸುಪ್ರೀಂಕೋರ್ಟ್ ತೀರ್ಪಿನ ನಂತರದಲ್ಲಾದ ಬ್ಯಾಕ್‌ಲಾಗ್ ನೇಮಕಾತಿ ರದ್ದುಗೊಳಿಸಬೇಕೆಂಬ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಒಳಮೀಸಲಾತಿ ಜಾರಿ ಸಂಬಂಧ ನಿವೃತ್ತ ನ್ಯಾಯಾಧೀಶರ ನೇತೃತ್ವದ ಆಯೋಗ ರಚಿಸಿರುವ ಸಂಬಂಧ ಪ್ರತಿಕ್ರಿಯಿಸಿರುವ ಅವರು, ಸರ್ಕಾರ ಆಯೋಗ ರಚನೆ ಮಾಡಿ ಮೂರು ತಿಂಗಳಲ್ಲಿ ವರದಿ ಸಲ್ಲಿಸಲು ಸೂಚಿಸಿದೆ. ಹಾಗೆಯೇ ಈಗಿನಿಂದ ಬ್ಯಾಕ್‌ಲಾಗ್ ನೇಮಕಾತಿ ಪ್ರಕ್ರಿಯೆ ನಡೆಸದಿರಲು ನಿರ್ಧರಿಸಲಾಗಿದೆ. ಆದರೆ ಸುಪ್ರೀಂಕೋರ್ಟ್ ತೀರ್ಪು ಪ್ರಕಟಿಸಿದ ಕಳೆದ ಆಗಸ್ಟ್ 1ರಿಂದಲೇ ಬ್ಯಾಕ್‌ಲಾಗ್ ನೇಮಕಾತಿ ತಡೆಹಿಡಿಯಬೇಕಿತ್ತು. ಸರ್ಕಾರ ಹಾಗೆ ಮಾಡದಿರುವುದರಿಂದ ಮಾದಿಗ ಸಮುದಾಯಕ್ಕೆ ತುಂಬಾ ಅನ್ಯಾಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸುಪ್ರೀಂಕೋರ್ಟ್ ತೀರ್ಪು ಪ್ರಕಟವಾದ ದಿನದಿಂದ ನಡೆದಿರುವ ಬ್ಯಾಕ್‌ಲಾಗ್ ಹುದ್ದೆ ನೇಮಕಾತಿಯನ್ನು ರದ್ದು ಹಾಗೂ ಸರ್ಕಾರದಿಂದ ನೀಡಿರುವ ಸಾರ್ವಜನಿಕ ಸೌಕರ್ಯಗಳನ್ನು ತಡೆ ಹಿಡಿಯುವಂತೆ ಕೋರಿ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡಲಾಗಿದೆ. ಈ ಮೂಲಕ ನಮ್ಮ ಹೋರಾಟ ಮುಂದುವರೆಯಲಿದೆ. ಈ ವೇಳೆ ಸುಪ್ರೀಂಕೋರ್ಟ್ ತೀರ್ಪಿನ ನಂತರದಲ್ಲಿ ಒಳಮೀಸಲಾತಿ ಜಾರಿಗೆ ಹೋರಾಟ ನಡೆಸಿದ ವಕೀಲ ಮಿತ್ರರು, ಸಮಾಜದ ಮುಖಂಡರು ಹಾಗೂ ಮಾದಿಗ ಸಮುದಾಯದ ಬಂಧುಗಳಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ರಂಗಭೂಮಿಗೆ ಬೇಕು ಸಮನ್ವಯತೆ : ಜನಾರ್ಧನ್



ಮೈಸೂರು, ಅ. 28– ರಂಗಭೂಮಿಯಲ್ಲಿ ಸಮನ್ವಯತೆ ಮುಖ್ಯ, ಎಲ್ಲರನ್ನು ರಂಗದ ಮೇಲೆ ತರುವ ಸಮನ್ವಯತೆ ಸಾಧಿಸುವುದು ಅತೀ ಮುಖ್ಯ ಎಂದು ಹಿರಿಯ ರಂಗಕರ್ಮಿ ಜನ್ನಿ (ಜನಾರ್ಧನ) ಅಭಿಪ್ರಾಯಪಟ್ಟರು.

ಮೈಸೂರು ಕಿರು ರಂಗಮಂದಿರ ಆವರಣದಲ್ಲಿ ಶನಿವಾರ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಏರ್ಪಡಿಸಿದ್ದ ಸದಸ್ಯತ್ವ ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರಿನ ಮಹಾರಾಜರ ಕಾಲದಿಂದ ರಂಗಭೂಮಿಯ ಪರಂಪರೆ ಬೆಳೆದಿದೆ. ಆದರೆ ಈಗ ರಂಗಭೂಮಿ ಕ್ಲಿಷ್ಟವಾಗಿದೆ. ಈಗಿನ ಯುವತಲೆಮಾರಿಗೆ ಓದಿನ ಕೊರತೆಯಿದೆ, ಶ್ರದ್ಧೆಯಿಲ್ಲ. ಇದಕ್ಕಾಗಿ ಸಂಘಟನೆಯ ಮೂಲಕ ಯುವ ತಲೆಮಾರನ್ನು ರಂಗಭೂಮಿಯಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೇವಲ ನಗರಕ್ಕೆ ಸೀಮಿತವಾಗದೆ ಗ್ರಾಮೀಣದಲ್ಲೂ ಹವ್ಯಾಸಿ ರಂಗಭೂಮಿ ಚಟುವಟಿಕೆಗಳಿಗೆ ಒತ್ತು ನೀಡಬೇಕಿದೆ. ಈ ಮೂಲಕ ಕನ್ನಡ ರಂಗಭೂಮಿ ಕಟ್ಟೋಣ ಎಂದು ಕಿವಿಮಾತು ಹೇಳಿದರು.

ನಟ, ನಿರ್ದೇಶಕ, ಮೇಕಪ್ ಮಾಡುವವರು ರಂಗಭೂಮಿಗೆ ಬೇಕು. ಎಲ್ಲಕ್ಕಿಂತ ಸಂಘಟಕ ಮುಖ್ಯ. ಇದನ್ನು ಅರಿಯಬೇಕಿದೆ. ಇದಕ್ಕಾಗಿ ಸಮುದಾಯದಲ್ಲೆ ಬೆರೆಯುವಂತಾಗಬೇಕು. ಸಮುದಾಯ ಸಂಘಟನೆಯ ಮೂಲಕ ರಂಗಭೂಮಿಗೆ ಬಂದೆ. ಈಗ ರಂಗಭೂಮಿಗೆ ಅನೇಕರು ಬರುತ್ತಿದ್ದರೂ ಸಮುದಾಯದ ಒಡನಾಟವಿರಲಿ ಎಂದು ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ರಾಮು, ರಂಗ ಕಲಾವಿದರಾದ ಸರೋಜಾ ಹೆಗಡೆ, ನೂರ್ ಅಹಮ್ಮದ್ ಶೇಖ್ ವೇದಿಕೆ ಮೇಲಿದ್ದರು. ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು ಅಧ್ಯಕ್ಷತೆ ವಹಿಸಿದ್ದರು.

ಚಂದ್ರಶೇಖರಾಚಾರ್ ರಂಗಗೀತೆ ಹಾಡಿದರು. ಮೋಹನ್ ರಾಜ್ ಶೆಟ್ಟಿ ಸ್ವಾಗತಿಸಿದರು. ಅಬ್ದುಲ್ ಕರೀಂ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾತ್ಯಾಯಿನಿ ಯಶೋಮಿತ್ರ ಕಾರ್ಯಕ್ರಮ ನಿರೂಪಿಸಿದರು.

ದೀಪಾವಳಿ ಹಬ್ಬ: ಮೈಸೂರಿನ ವಿವಿಧೆಡೆ ಹಸಿರು ಪಟಾಕಿ ಮಾರಾಟ ಆರಂಭ

ಜೆ.ಕೆ.ಮೈದಾನದಲ್ಲಿ 15, ಜೆಎಲ್‌ಬಿ ರಸ್ತೆಯಲ್ಲಿ 16, ಲಲಿತಮಹಲ್ ರಸ್ತೆಯಲ್ಲಿ 3, ಭೂತಾಳೆ ಪಿಚ್‌ನಲ್ಲಿ 1, ಕುವೆಂಪುನಗರ, ಹೆಬ್ಬಾಳು ಸೇರಿದಂತೆ ವಿವಿಧೆಡೆ ಪಟಾಕಿ ಮಾರಾಟ





ಮೈಸೂರು,ಅ.28(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿಗೆ ಮೈಸೂರು ನಗರದಲ್ಲಿ ಹಸಿರು ಪಟಾಕಿ ಮಾರಾಟಕ್ಕೆ ಮಳಿಗೆಗಳು ಸಿದ್ಧಗೊಂಡಿದ್ದು, ಮೈಸೂರು ಮಹಾನಗರ ಪಾಲಿಕೆಯಿಂದ ಅನುಮತಿ ಪಡೆದು ಪಟಾಕಿ ಮಾರಾಟಗಾರರು ವಿವಿಧ ಬಗೆಯ ಪಟಾಕಿ ಮಾರಾಟಕ್ಕೆ ಸಜ್ಜಾಗಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಮೈಸೂರು ಮಹಾನಗರ ಪಾಲಿಕೆ, ಪೊಲೀಸ್, ಅಗ್ನಿಶಾಮಕ, ಚೆಸ್ಕಾಂ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಪಡೆದು, ಕೆಲ ನಿಬಂಧನೆಯೊಂದಿಗೆ ಪಟಾಕಿ ಮಾರಾಟಗಾರರು ಮಳಿಗೆ ಸಜ್ಜುಗೊಳಿಸಿದ್ದು, ಸರ್ಕಾರದ ಮಾರ್ಗಸೂಚಿಯಂತೆ ಪರಿಸರಕ್ಕೆ ಹೆಚ್ಚು ಹಾನಿಯುಂಟು ಮಾಡದ ಹಸಿರು ಪಟಾಕಿಯನ್ನೇ ಮಾರಾಟ ಮಾಡಲು ಸೂಚನೆ ನೀಡಲಾಗಿದೆ. ಅ.28ರಿಂದ ನ.2ರವರೆಗೆ ಒಟ್ಟು 6 ದಿನ ಪಟಾಕಿ ಮಾರಾಟಕ್ಕೆ ಅವಕಾಶ ನೀಡಲಾಗಿದೆ.

ಜೆ.ಕೆ.ಮೈದಾನದಲ್ಲಿ 15, ಜೆಎಲ್‌ಬಿ ರಸ್ತೆಯಲ್ಲಿ 16, ಲಲಿತಮಹಲ್ ರಸ್ತೆಯಲ್ಲಿ 3, ಭೂತಾಳೆ ಪಿಚ್‌ನಲ್ಲಿ 1, ಕುವೆಂಪುನಗರದಲ್ಲಿ, ಹೆಬ್ಬಾಳು ಕೈಗಾರಿಕಾ ಬಡಾವಣೆಯಲ್ಲಿ ಪಟಾಕಿ ಮಳಿಗೆ ನಿರ್ಮಿಸಲಾಗಿದೆ. ಪ್ರತಿ ಮಳಿಗೆಯೂ 10x10 ಅಡಿ ವಿಸ್ತೀರ್ಣ ಮೀರದಂತೆ, ಎತ್ತರ 3 ಮೀಟರ್‌ಗಿಂತ ಇರದಂತೆ ಹಾಗೂ ಮಳಿಗೆಯಿಂದ ಮಳಿಗೆಗೆ 6 ಮೀಟರ್ ಅಂತರವಿರುವಂತೆ ಸೂಚಿಸಲಾಗಿದೆ.

ಪಟಾಕಿ ಶೆಡ್‌ನಲ್ಲಿ ಅಡುಗೆ ಮಾಡುವುದು, ಧೂಮಪಾನ ಮಾಡುವುದು, ಮಲಗುವುದನ್ನು ನಿಷೇಧಿಸಲಾಗಿದೆ. ಹಸಿರು ಪಟಾಕಿ ಹೊರತುಪಡಿಸಿ, ಪರಿಸರಕ್ಕೆ ಹಾನಿಯುಂಟು ಮಾಡುವ ಪಟಾಕಿ ಮಾರಾಟ ಮಾಡಿದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ.

ಹಸಿರು ಪಟಾಕಿಗಳ ಬಾಕ್ಸ್ ಮೇಲೆ ಕಡ್ಡಾಯವಾಗಿ ಬಾರ್‌ಕೋಡ್ ಇರಬೇಕು. ಅದನ್ನು ಸ್ಕ್ಯಾನ್ ಮಾಡಿದಾಗ ಹಸಿರು ಪಟಾಕಿ ಎಂದು ಖಚಿತವಾಗದಿದ್ದರೆ, ಸ್ಥಳದಲ್ಲೇ ಲೈಸನ್ಸ್ ರದ್ದು ಮಾಡಲಾಗುತ್ತದೆ. ಪ್ಲಾಸ್ಟಿಕ್ ಬಳಕೆಯನ್ನೂ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಪಟಾಕಿ ಮಳಿಗೆಗೆ ಗಾಳಿ, ಬೆಳಕು ಉತ್ತಮವಾಗಿರಬೇಕು. ಅಗ್ನಿ ನಂದಿಸಲು 400 ಲೀಟರ್ ಸಾಮರ್ಥ್ಯದ ಎರಡು ಡ್ರಮ್‌ಗಳಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಂಡಿರಬೇಕು. ವಾಟರ್ ಪ್ರೆಷರ್‌ಗಳನ್ನು ಕಡ್ಡಾಯವಾಗಿಟ್ಟುಕೊಂಡಿರಲು ಸೂಚನೆ ನೀಡಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾವಣೆ

ಹಾಲಿ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ತಂಡಕ್ಕೆ ಜಯ

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಹೆಚ್.ಡಿ.ಮಾದಪ್ಪ ತಂಡಕ್ಕೆ ಸೋಲು



ತಿ.ನರಸೀಪುರ ಸರ್ಕಾರಿ ನೌಕರರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಅಭೂತಪೂರ್ವ ಜಯಗಳಿಸಿದ ಎಂ.ವಿ.ಶಿವಶಂಕರಮೂರ್ತಿ ತಂಡದ ಸದಸ್ಯರು ವಿಜಯೋತ್ಸವ ಆಚರಿಸಿದರು.

ತಿ.ನರಸೀಪುರ, ಅ.28– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ವಿಭಾಗದಲ್ಲಿ ಹಾಲಿ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ತಂಡದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಹೆಚ್.ಡಿ.ಮಾದಪ್ಪ ನೇತೃತ್ವದ ತಂಡ ಹೀನಾಯ ಸೋಲು ಅನುಭವಿಸಿದೆ.

ಸರ್ಕಾರಿ ನೌಕರರ ಸಂಘದ ಹಾಲಿ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ತಂಡದಿಂದ ಸ್ಪರ್ಧಿಸಿದ್ದ ಐವರು ಅಭ್ಯರ್ಥಿಗಳು ಚುನಾವಣೆಯಲ್ಲಿ ಜಯಶೀಲರಾಗಿದ್ದರೆ, ಶತಾಯ ಗತಾಯ ಎದುರಾಳಿಗಳಿಗೆ ಸೋಲುಣಿಸಲೇಬೇಕೆಂಬ ಜಿದ್ದಿಗೆ ಬಿದ್ದಿದ್ದ ಹೆಚ್.ಡಿ.ಮಾದಪ್ಪ ತಂಡದವರೂ ಒಂದೂ ಸ್ಥಾನ ಗೆಲ್ಲದೇ ತೀವ್ರ ಮುಖಭಂಗ ಅನುಭವಿಸಿದ್ದಾರೆ.

ಎಂ.ವಿ.ಶಿವಶಂಕರಮೂರ್ತಿ ತಂಡದಿಂದ ಸ್ಪರ್ಧಿಸಿದ್ದ ಎ.ಗಜೇಂದ್ರ 495, ಎಸ್.ನಾಗೇಶ್ 422, ಎನ್.ರೇವಣ್ಣ 512, ಜಿ.ಸಿದ್ದಮಲ್ಲಪ್ಪ 450 ಹಾಗೂ 519 ಮತಗಳನ್ನು ಪಡೆದು ಎಂ.ವಿ.ಶಿವಶಂಕರಮೂರ್ತಿ ನಿರ್ದೇಶಕರಾಗಿ ಆಯ್ಕೆಯಾದರೇ, ಹೆಚ್.ಡಿ.ಮಾದಪ್ಪ ತಂಡದಿಂದ ಸ್ಪರ್ಧಿಸಿದ್ದ ಸಿ.ವಿ.ಡೈಸಿ 212, ಪುಟ್ಟಸ್ವಾಮಿ 180, ಸಿ.ಬಸವರಾಜು 178, ಟಿ.ಎಸ್.ಸುಬ್ಬಣ್ಣ 190 ಹಾಗೂ 228 ಮತಗಳನ್ನು ಪಡೆದು ಎಸ್.ಸೋಮಶೇಖರ್ ಸೋಲು ಅನುಭವಿಸಿದ್ದಾರೆ.

ಸರ್ಕಾರಿ ನೌಕರರ ಸಂಘದ ಒಟ್ಟು 34 ನಿರ್ದೇಶಕ ಸ್ಥಾನಗಳ ಪೈಕಿ ಸೋಮವಾರ 22 ಸ್ಥಾನಗಳಿಗೆ ಚುನಾವಣೆ ನಡೆಯಿತು. ಉಳಿದ 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾದರು. 49 ಮಂದಿ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದರು. 1750 ಮಂದಿ ಮತದಾರರು 11 ಮತ ಕ್ಷೇತ್ರಗಳಲ್ಲಿ ತಮ್ಮ ಹಕ್ಕು ಚಲಾಯಿಸಿದರು. ಚುನಾವಣಾಧಿಕಾರಿ ಯಾಗಿ ಎ.ಸಿದ್ದರಾಜಪ್ಪ ಹಾಗೂ ಜಿ.ಸುರೇಶ್ ಕುಮಾರ್ ಕರ್ತವ್ಯ ನಿರ್ವಹಿಸಿದರು.

ಉಳಿದಂತೆ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ ನಡೆದ ಒಂದು ಸ್ಥಾನಕ್ಕೆ ಎಂ.ಶಿವಸ್ವಾಮಿ, ಕಂದಾಯ ಇಲಾಖೆಯ 2 ಸ್ಥಾನಕ್ಕೆ ರುದ್ರೇಶ್ ಹಾಗೂ ಎಂ.ಎಸ್.ಆನಂದ್, ಲೋಕೋಪಯೋಗಿ ಇಲಾಖೆಯ ಒಂದು ಸ್ಥಾನಕ್ಕೆ ಸಿ.ಮಂಜುನಾಥ್, ಜಲಸಂಪನ್ಮೂಲ ಹಾಗೂ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಒಂದು ಸ್ಥಾನಕ್ಕೆ ಹೆಚ್.ಸಿ.ಕೆಂಡಗಣ್ಣಸ್ವಾಮಿ, ಸರ್ಕಾರಿ ಪ್ರೌಢಶಾಲೆ ವಿಭಾಗದಿಂದ ಬಿ.ಪುಟ್ಟರಾಜು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಮತ್ತು ಪದವಿ ಕಾಲೇಜು ವಿಭಾಗದಿಂದ ಕೆ.ನಂದೀಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯಿಂದ ಮಹೇಶ್, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಇಲಾಖೆಯಿಂದ ಎಂ.ಈಶ್ವರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಾರ್ವಜನಿಕ ಆಸ್ಪತ್ರೆಯಿಂದ ಎಸ್.ಕಿಶೋರ್ ಕುಮಾರ್, ನಾರಾಯಣಮೂರ್ತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ಉಳಿದ ಸಿಬ್ಬಂದಿ)ಯಿಂದ ಎಂ.ನಾಗು ಮತ್ತು ಎನ್.ಸರಸ್ವತಿ, ತೋಟಗಾರಿಕೆ ಇಲಾಖೆಯಿಂದ ಪುಟ್ಟಸ್ವಾಮಿ, ರೇಷ್ಮೆ ಇಲಾಖೆಯಿಂದ ಈಶ್ವರ ಹಾಗೂ ನ್ಯಾಯಾಂಗ ಇಲಾಖೆಯಿಂದ ಎಂ.ಬಸವನಾಯಕ ಆಯ್ಕೆಯಾದರು.

ನಿರ್ದೇಶಕರ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಎಣಿಕೆ ಕೇಂದ್ರದ ಮುಂದೆ ಜಮಾಯಿಸಿದ್ದ ಟಿಓಟಿ ನಾಗರಾಜು, ಸುಬ್ರಹ್ಮಣ್ಯ, ಮಹದೇವಸ್ವಾಮಿ, ಮೂಗೂರು ನಾಗರಾಜು, ಉತ್ತಂಬಳ್ಳಿ ನಾಗರಾಜು, ಆಲಗೂಡು ಮಹದೇವಸ್ವಾಮಿ, ನಾಗೇಂದ್ರ, ಪ್ರಸನ್ನ, ವಿಜಾಪುರ ಲಿಂಗರಾಜು, ಸಿದ್ದರಾಜು, ಮಹದೇವ್‌ಮೂರ್ತಿ, ರಮೇಶ್, ಬಿಆರ್‌ಪಿ ಪ್ರಸನ್ನ, ಕುಮಾರ್, ಶಿಕ್ಷಕ ವೃಂದದವರು ನೂತನ ನಿರ್ದೇಶಕರನ್ನು ಅಭಿನಂದಿಸಿದರು.

23 ಸ್ಥಾನಗಳೊಂದಿಗೆ 3ನೇ ಬಾರಿಗೆ ಅಧಿಕಾರದ ಗದ್ದುಗೆ

ತಿ.ನರಸೀಪುರ: ಶಿಕ್ಷಕರಲ್ಲಿ ಸೇವಾ ಮನೋಭಾವ ಇದ್ದಾಗ ಮಾತ್ರ ಈ ರೀತಿ ಅಭೂತ ಪೂರ್ವ ಗೆಲುವು ಸಾಧ್ಯ ಎಂದು ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ತಿಳಿಸಿದರು.

ನೂತನ ನಿರ್ದೇಶಕರೊಂದಿಗೆ ವಿಜಯೋತ್ಸವ ಆಚರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ನೌಕರರ ಸಂಘದಲ್ಲಿ 3ನೇ ಬಾರಿಗೆ ನಮ್ಮ ತಂಡ ಅಭೂತಪೂರ್ವ ಗೆಲುವು ಸಾಧಿಸಿದೆ. ಕಳೆದ 10 ವರ್ಷದಿಂದ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಶಿಕ್ಷಕರು ಹಾಗೂ ನೌಕರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿರುವ ಹಿನ್ನೆಲೆಯಲ್ಲಿ ನಮ್ಮ ತಂಡಕ್ಕೆ ಅಭೂತಪೂರ್ವ ಗೆಲುವು ಸಾಧ್ಯವಾಗಿದೆ ಎಂದರು. ಸಂಘದಲ್ಲಿ 23ಕ್ಕೂ ಹೆಚ್ಚು ಕಾರ್ಯಕ್ರಮ ಮಾಡಿದ್ದೇವೆ. ರಾಜ್ಯದಲ್ಲಿ ತಿ.ನರಸೀಪುರ ರಾಜ್ಯ ಸರ್ಕಾರಿ ನೌಕರರ ಸಂಘ ಮಾದರಿ ಸಂಘ ಎಂಬ ಹೆಗ್ಗಳಿಕೆ ಪಡೆದಿದೆ. ನಮ್ಮ ತಂಡದ ಸೇವೆ ಪರಿಗಣಿಸಿ ಶಿಕ್ಷಕರು 3ನೇ ಬಾರಿಗೆ ಆಯ್ಕೆ ಮಾಡಿರುವುದಕ್ಕೆ ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ನಮ್ಮ ತಂಡ 23 ಸ್ಥಾನಗಳನ್ನು ಗೆಲ್ಲುವ ಮೂಲಕ 3ನೇ ಬಾರಿಗೆ ಸರ್ಕಾರಿ ನೌಕರ ಸಂಘದ ಗದ್ದುಗೆ ಏರಿದೆ ಎಂದರು.

ಅಂಬೇಡ್ಕರ್ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ



ಅಂಬೇಡ್ಕರ್ ಸಮುದಾಯ ಭವನಕ್ಕೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ಮಲ್ಕುಂಡಿ, ಅ.28– ಗ್ರಾಮೀಣ ಭಾಗದಲ್ಲಿ ಸಮುದಾಯ ಭವನಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದ ಡಾ.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನನ್ನ ತಂದೆ, ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ ಅಧಿಕಾರವಧಿಯಲ್ಲಿ ಕ್ಷೇತ್ರದ ಪ್ರತಿಯೊಂದು ಗ್ರಾಮಗಳಲ್ಲೂ ಸರ್ವ ಜನಾಂಗದ ಸಮುದಾಯ ಭವನ ನಿರ್ಮಿಸಲಾಗಿದೆ. ಅವರ ಹಾದಿಯಲ್ಲೇ ನಾನು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣವಾಗುತ್ತಿದ್ದು, ಇದನ್ನು ಶುಭ ಸಮಾರಂಭಗಳಿಗೆ ಬಳಸಿಕೊಳ್ಳಬೇಕು ಎಂದ ಅವರು ನಾನು ಕ್ಷೇತ್ರ ಪ್ರವಾಸ ಕೈಗೊಂಡ ವೇಳೆ ಕ್ಷೇತ್ರದಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳ ಪಟ್ಟಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಆದ್ಯತೆ ಮೇರೆಗೆ ಅನುದಾನ ತಂದು ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ದಸಂಸ ಮುಖಂಡ ಕೃಷ್ಣ, ಗ್ರಾಪಂ ಅಧ್ಯಕ್ಷೆ ದೇವಮ್ಮ, ಸದಸ್ಯ ಪಾಪ, ಶಿವಕುಮಾರ್, ಎಇ ಶರಣ್, ಇಂಜಿನೀಯರ್ ಕಾವ್ಯ, ಪುರುಷೋತ್ತಮ್, ಮುಖಂಡರಾದ ಎಂ.ಎನ್.ಸತೀಶ್, ಮಹದೇವಯ್ಯ, ಚೆಲುವಯ್ಯ, ದುಂಡಯ್ಯ, ವೆಂಕಟರಾಜು, ಪುಟ್ಟರಂಗಯ್ಯ ಸೇರಿದಂತೆ ಇತರರಿದ್ದರು.

ರಾಜ್ಯಮಟ್ಟದ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆ



ರಾಜ್ಯ ಮಟ್ಟದ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆಯಾದ ಪ್ರಿಯಾಂಕ ಅವರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಅ.28– ಪಟ್ಟಣದ ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಎಂ.ಪ್ರಿಯಾಂಕ ರಾಜ್ಯಮಟ್ಟದ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಹಾಸನದಲ್ಲಿ ರಾಜ್ಯಮಟ್ಟದ ಗಣರಾಜ್ಯೋತ್ಸವ ಪಥಸಂಚಲನಕ್ಕೆ ಸ್ವಯಂ ಸೇವಕ ಮತ್ತು ಸೇವಕಿಯರನ್ನು ಆಯ್ಕೆ ಮಾಡಿಕೊಳ್ಳಲು ಪೂರ್ವಭಾವಿ ಶಿಬಿರ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ಜಿಲ್ಲೆಗಳ ವಿವಿಧ ಕಾಲೇಜುಗಳಿಂದ 162 ಸ್ವಯಂ ಸೇವಕ ಮತ್ತು ಸೇವಕಿಯರು ಭಾಗವಹಿಸಿದ್ದರು. 4 ಜಿಲ್ಲೆಗಳ ಪೈಕಿ ಪಟ್ಟಣದ ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಪ್ರಿಯಾಂಕ ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆಯಾಗಿದ್ದಾರೆ.

ಇದೇ ವೇಳೆ ಪ್ರಿಯಾಂಕ ಅವರನ್ನು ಶ್ರೀಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಮೈಸೂರು ಶಾಖಾ ಮಠದ ಕಾರ್ಯದರ್ಶಿ ಸೋಮೇಶ್ವರನಾಥ ಸ್ವಾಮೀಜಿ, ಸಂಸ್ಥೆ ಆಡಳಿತಾಧಿಕಾರಿ ಪ್ರೊ.ಕೆ.ಪಿ.ಬಸವೇಗೌಡ, ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ಎಂ.ಆರ್.ರಾಮಚಂದ್ರ, ಹೆಚ್.ಎಸ್.ಸಿದ್ದೇಗೌಡ, ದೈಹಿಕ ಶಿಕ್ಷಣ ನಿರ್ದೇಶಕರಾದ ಬಿ.ಕಲ್ಲೇಶ್‌ಗೌಡ, ರಾಜೇಶ್, ಉಪನ್ಯಾಸಕರು, ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ಕುರುಬರ ಅಭಿವೃದ್ಧಿ ಸಮಿತಿಗೆ 12.15 ಲಕ್ಷ ಉಳಿತಾಯ

ಸಮಿತಿ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ಮಾಹಿತಿ



ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಕುನ್ನೇಗೌಡ ಮಾತನಾಡಿದರು.

ಹುಣಸೂರು, ಅ.28– ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ವಿವಿಧ ಬಾಬ್ತುಗಳಿಂದ 12.15 ಲಕ್ಷ ರೂ. ಉಳಿತಾಯ ಮಾಡಿದೆ ಎಂದು ಸಮಿತಿ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ತಿಳಿಸಿದರು.

ನಗರದ ಕನಕ ಭವನದಲ್ಲಿ ನಡೆದ 2023–2024ನೇ ಸಾಲಿನ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ ಸಾಲಿನಲ್ಲಿ ಸಮಿತಿಯು 27 ಲಕ್ಷ ರೂ. ವ್ಯವಹಾರ ನಡೆಸಲಾಗಿದೆ. ಈ ಪೈಕಿ 14.85 ಲಕ್ಷ ರೂ. ಖರ್ಚು ಮಾಡಲಾಗಿದ್ದು, 12.15 ಲಕ್ಷ ರೂ. ಉಳಿತಾಯ ಮಾಡಿದೆ ಎಂದ ಅವರು, ಕಳೆದ 6 ತಿಂಗಳ ಹಿಂದೆ ಕೆ.ಆರ್.ನಗರ ಕಾಗಿನೆಲೆ ಕನಕ ಗುರುಪೀಠದ ಪೀಠಾಧ್ಯಕ್ಷ ಶ್ರೀಶಿವಾನಂದಪುರಿ ಸ್ವಾಮೀಜಿ ಅವರ ಆದೇಶದಂತೆ ಸಮಿತಿ ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡು ಕುರುಬ ಸಮಾಜದ ಮುಖಂಡರು ಹಾಗೂ ಸಮಿತಿಯ ಸದಸ್ಯರ ಸಹಕಾರದೊಂದಿಗೆ ಸಮಾಜದ ಅಭಿವೃದ್ಧಿಗೆ ಶಕ್ತಿ ಮೀರಿ ಕೆಲಸ ಮಾಡಿದ್ದೇನೆ. ಇನ್ನೆರಡು ದಿನದೊಳಗೆ ಸ್ವಾಮೀಜಿ ಅವರನ್ನು ಭೇಟಿ ಮಾಡಿ ನನ್ನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತೇನೆ. ಮುಂದಿನ ಅಧ್ಯಕ್ಷರ ಆಯ್ಕೆ ಬಗ್ಗೆ ಸ್ವಾಮೀಜಿ ಅವರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರೋಣ ಎಂದರು.

ಕಾವೇರಿ ಆಸ್ಪತ್ರೆ ನಿರ್ದೇಶಕ ಡಾ.ಲೋಹಿತ್ ಮಾತನಾಡಿ, ಸಮಾಜದ ವತಿಯಿಂದ ಶಿಕ್ಷಣ ಸಂಸ್ಥೆ ತೆರೆಯಲು ಎಲ್ಲರೂ ಸಹಕರಿಸಬೇಕು. ಶಿಕ್ಷಣ ಸಂಸ್ಥೆ ಪ್ರಾರಂಭಿಸಲು ನಾನು 10 ಲಕ್ಷ ರೂ. ನೀಡುತ್ತೇನೆ ಎಂದ ಅವರು ಮುಂದಿನ ಅಧ್ಯಕ್ಷರನ್ನು ಕಾಗಿನೆಲೆ ಮಠದ ಸ್ವಾಮೀಜಿ ಆಯ್ಕೆ ಮಾಡುವ ತೀರ್ಮಾನಕ್ಕೆ ನನ್ನ ವಿರೋಧವಿದೆ. ಬದಲಿಗೆ ಇಂದು ಅಧ್ಯಕ್ಷರನ್ನು ಆಯ್ಕೆ ಮಾಡುವಂತೆ ಸಲಹೆ ನೀಡುತಿದ್ದಂತೆಯೇ ಸಭೆಯಲ್ಲಿದ್ದ ಜನತೆ ವಿರೋಧ ವ್ಯಕ್ತಪಡಿಸಿದರು.

ಸಭೆಯಲ್ಲಿ ಸಮಿತಿ ಪ್ರಧಾನ ಕಾರ್ಯದರ್ಶಿ ವಾಸೇಗೌಡ, ಮುಖಂಡರಾದ ಎ.ಪಿ.ಸ್ವಾಮಿ, ಕಲ್ಕುಣಿಕೆ ರಾಘು, ರಮೇಶ್, ಜಯರಾಮು, ಅಶೋಕ್, ಗಣೇಶ್ ಕುಮಾರಸ್ವಾಮಿ, ವೆಂಕಟರಮಣ, ರಾಮಕೃಷ್ಣ, ಹರೀಶ್ ಮಾತನಾಡಿದರು. ಸಮಿತಿ ಉಪಾಧ್ಯಕ್ಷ ಮಹೇಶ್, ಈಶ್ವರ್, ರಾಮೇಗೌಡ, ಕೆಂಚೇಗೌಡ, ನರಸಿಂಹ, ಮಹದೇವ್, ಚಂದ್ರೇಗೌಡ, ಕುಪ್ಪುಸ್ವಾಮಿ, ಶಿವಲಿಂಗು, ಲೋಕೇಶ್, ಮಲ್ಲೇಶ್, ಪ್ರಭಾಕರ ಹೆಗಡೆ, ಮಹೇಶ್, ಶರತ್, ರಂಗೇಶ್, ಶಿವು, ಅಭಿಷೇಕ್, ಪ್ರಸನ್ನ ಸೇರಿದಂತೆ ಇತರರಿದ್ದರು.

ರಾಜ್ಯಮಟ್ಟಕ್ಕೆ ಆಯ್ಕೆ



ಹಿರೀಕ್ಯಾತನಹಳ್ಳಿ, ಅ.28– ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ವಿಭಾಗದಿಂದ ಇತ್ತೀಚೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಜಿಲ್ಲಾಮಟ್ಟದ ಶಾಲಾ ಕ್ರೀಡಾಕೂಟದಲ್ಲಿ ಚಕ್ರ ಎಸೆತ ಸ್ಪರ್ಧೆಯಲ್ಲಿ ಹರವೆ ಗ್ರಾಮದ ಅನುದಾನಿತ ಶ್ರೀಲಕ್ಷ್ಮಿದೇವಿ ವಿದ್ಯಾಸಂಸ್ಥೆ 7ನೇ ತರಗತಿ ವಿದ್ಯಾರ್ಥಿನಿ ಚೈತ್ರ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈಕೆ ನ.7ರಂದು ಶಿವಮೊಗ್ಗದಲ್ಲಿ ನಡೆಯಲಿರುವ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾಳೆ ಎಂದು ಶಾಲೆ ಮುಖ್ಯಶಿಕ್ಷಕ ಧರ್ಮರಾಜ್ ತಿಳಿಸಿದ್ದಾರೆ.

ಹಂಪಾಪುರ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹಂಪಾಪುರ ಗ್ರಾಪಂ ಅಧ್ಯಕ್ಷೆಯಾಗಿ ಶೀಲಾ, ಉಪಾಧ್ಯಕ್ಷೆಯಾಗಿ ಪ್ರೇಮ ಆಯ್ಕೆಯಾಗಿದ್ದಾರೆ.

ಹಂಪಾಪುರ, ಅ.28– ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಶೀಲಾ, ಉಪಾಧ್ಯಕ್ಷೆಯಾಗಿ ಸಿ.ಪ್ರೇಮ ಆಯ್ಕೆಯಾಗಿದ್ದಾರೆ.

ಒಟ್ಟು 17 ಸದಸ್ಯ ಬಲದ ಗ್ರಾಪಂನ ಹಿಂದಿನ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷೆ ಸೌಭಾಗ್ಯ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಗಳಿಗೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಶೀಲಾ ಹಾಗೂ ಮಹೇಶ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ 11 ಮತಗಳನ್ನು ಪಡೆದ ಶೀಲಾ ಅಧ್ಯಕ್ಷೆಯಾಗಿ ಆಯ್ಕೆಯಾದರೇ, 6 ಮತಗಳನ್ನು ಪಡೆದ ಮಹೇಶ್ ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಸಿ.ಪ್ರೇಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಬೋರಯ್ಯ ಕಾರ್ಯ ನಿರ್ವಹಿಸಿದರು. ಈ ವೇಳೆ ಸದಸ್ಯರಾದ ಸಾನು ಬೇಗಂ, ಬಸವರಾಜು, ಸುನಂದ, ರಾಜಮ್ಮ, ಸಿದ್ದರಾಜು, ಮಲ್ಲೂರು ನಾಯಕ, ಸೌಭಾಗ್ಯ, ದೇವಮ್ಮ, ಪಿಡಿಓ ಸೌಮ್ಯ, ಮುಖಂಡರಾದ ಕುಮಾರ್, ಸಿದ್ದರಾಜು, ಸಿದ್ದಯ್ಯ, ಸ್ವಾಮಿಗೌಡ, ಅಣ್ಣೇಗೌಡ ಇದ್ದರು.

ನಿವೃತ್ತ ನೌಕರರ ಪಿಂಚಣಿ ಪರಿಷ್ಕರಿಸಲು ಮನವಿ



ಪಿಂಚಣಿ ಪರಿಷ್ಕರಿಸಲು ಕ್ರಮ ವಹಿಸುವಂತೆ ನಿವೃತ್ತ ನೌಕರರು ಬಿಇಓಗೆ ಮನವಿ ಸಲ್ಲಿಸಿದರು.

ನಂಜನಗೂಡು, ಅ.28– ಸರ್ಕಾರದ ಆದೇಶದಂತೆ ನಿವೃತ್ತ ನೌಕರರಿಗೂ 7ನೇ ವೇತನ ಆಯೋಗದ ವರದಿಯಂತೆ ಪಿಂಚಣಿ ಪರಿಷ್ಕರಿಸಲು ಕ್ರಮ ವಹಿಸಬೇಕು ಎಂದು ಕರ್ನಾಟಕ ನಿವೃತ್ತ ನೌಕರರ ವೇದಿಕೆ ಸದಸ್ಯರು ಕ್ಷೇತ್ರ ಶಿಕ್ಷಣಾಧಿಕಾರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ನಿವೃತ್ತ ನೌಕರರ ವೇದಿಕೆ ರಾಜ್ಯ ಪ್ರಧಾನ ಸಂಚಾಲಕ ಷಣ್ಮುಖಯ್ಯ ಮಾತನಾಡಿ, ಸರ್ಕಾರ ಜು.2022 ರಿಂದ ಜು.7 2024ರ ಅವಧಿಯಲ್ಲಿ ನಿವೃತ್ತರಾದ ಸರ್ಕಾರಿ ನೌಕರರ ಪಿಂಚಣಿ ಪರಿಷ್ಕರಣೆ ಮಾಡುವುದಾಗಿ ತಿಳಿಸಿದೆ. ಈ ವೇತನ ಪರಿಷ್ಕರಣೆಗೆ ನಿವೃತ್ತ ನೌಕರರ ಪಟ್ಟಿಯನ್ನು ಆಯಾ ಇಲಾಖೆ ಅಧೀಕ್ಷಕರೇ ನೀಡಬೇಕು. ಸರ್ಕಾರದ ಆದೇಶದಂತೆ ಪೊಲೀಸ್, ಕಂದಾಯ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಈಗಾಗಲೇ ನಿವೃತ್ತ ನೌಕರರ ಪಟ್ಟಿಯನ್ನು ಸಲ್ಲಿಸಿದ್ದಾರೆ. ಆದರೆ ನಂಜನಗೂಡು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಅಧೀಕ್ಷಕಿ ಗೀತಾ ಅವರು ನಿವೃತ್ತ ನೌಕರರು ವೈಯಕ್ತಿಕ ಮನವಿ ನೀಡಿದರೆ ಮಾತ್ರ ನಾವು ಎಜಿ ಅವರಿಗೆ ಪಟ್ಟಿಯನ್ನು ಕಳುಹಿಸುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಬೇರೆ ಇಲಾಖೆಗಳಂತೆ ಸರ್ಕಾರದ ಆದೇಶವನ್ನು ಪಾಲಿಸಿ ಸಾಮೂಹಿಕವಾಗಿ ನಿವೃತ್ತ ನೌಕರರ ಪಟ್ಟಿಯನ್ನು ಕಳುಹಿಸಿ ಕೊಡುವಂತೆ ನಾವು ರಾಜ್ಯ ಘಟಕದ ವತಿಯಿಂದ ಮನವಿ ಮಾಡಿದ್ದೇವೆ ಎಂದರು.

ನಿವೃತ್ತ ನೌಕರರ ವೇದಿಕೆ ರಾಜ್ಯ ಸಂಚಾಲಕ ಆನಂದಪ್ಪ ಮಾತನಾಡಿ, 7ನೇ ವೇತನ ಪಿಂಚಣಿ ಪರಿಷ್ಕರಣೆಯಲ್ಲಿ ಸರ್ಕಾರ ಕಳೆದ 2 ವರ್ಷಗಳ ಹಿಂದೆ ನಿವೃತ್ತರಾದ ನೌಕರರಿಗೆ ಗಳಿಕೆ ರಜೆ ಸೇರಿದಂತೆ ವಿವಿಧ ಸವಲತ್ತುಗಳಲ್ಲಿ 6ನೇ ವೇತನ ಆಯೋಗದ ವರದಿಯಂತೆ ನೀಡುತ್ತಿರುವುದರಿಂದ ನಮಗೆ ಪಿಂಚಣಿ ಪರಿಷ್ಕರಣೆಯಲ್ಲಿ ವಂಚನೆಯಾಗಲಿದೆ. ಅಲ್ಲದೇ ಸರ್ಕಾರ ಈಗಾಗಲೇ 2022 ರಿಂದ ನಿವೃತ್ತರಾದ ನೌಕರರಿಗೆ 7ನೇ ವೇತನದ ಆಯೋಗದ ವರದಿಯಂತೆ ಪಿಂಚಣಿ ಪರಿಸ್ಕರಿಸುವಂತೆ ಘೋಷಿಸಿದೆ. ಅದರಂತೆ ಪಿಂಚಣಿ ಪರಿಷ್ಕರಣೆ ಮಾಡಲು ಕ್ರಮ ವಹಿಸಬೇಕು. ಇಲ್ಲವಾದಲ್ಲಿ ಬೆಂಗಳೂರಿನಲ್ಲಿ ಉಗ್ರ ಹೋರಾಟ ರೂಪಿಸಲಾಗುವುದು ಎಂದರು.

ಇದೇ ವೇಳೆ ನಿವೃತ್ತ ನೌಕರರ ವೇದಿಕೆ ತಾಲೂಕು ಸಂಚಾಲಕ ಕೆ.ಜೆ.ಮಹದೇವಸ್ವಾಮಿ, ಕೆ.ದೊರೆಸ್ವಾಮಿ, ಹೆಚ್.ಎಸ್.ಕುಮಾರ, ಮಹದೇವಪ್ಪ, ಹೆಚ್.ಎನ್.ಬಸವರಾಜು, ಪಾಪೇಗೌಡ, ಮಂಜುನಾಥ, ಅರವಿಂದ, ಶಂಕರನಾರಾಯಣ, ಮೌಳಿ ಮಾರ್ಗರೇಟ್, ಸರೋಜಮ್ಮ, ಚೆಲುವಮೂರ್ತಿ, ಚಾಮಣ್ಣ, ಮಹದೇವ ಶೆಟ್ಟಿ ಸೇರಿದಂತೆ ಇತರರಿದ್ದರು.

ನೌಕರರ ಸಂಘದ ಚುನಾವಣೆ: ಮೂವರು ನಿರ್ದೇಶಕರ ಆಯ್ಕೆ




ನೂತನ ನಿರ್ದೇಶಕರನ್ನು ಮುಖಂಡರು ಸನ್ಮಾನಿಸಿದರು.

ಸರಗೂರು, ಅ.28– ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರ ಸ್ಥಾನಗಳಿಗೆ ಸೋಮವಾರ ನಡೆದ ಚುನಾವಣೆಯಲ್ಲಿ ಎಂ.ಕೆಂಪರಾಮೇಗೌಡ, ಸಿದ್ದರಾಜು, ತಿಪ್ಪೇಸ್ವಾಮಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಪ್ರಾಥಮಿಕ ಶಾಲಾ ವಿಭಾಗದಿಂದ 3 ನಿರ್ದೇಶಕರ ಸ್ಥಾನಗಳಿಗೆ ಎಂ.ಕೆಂಪರಾಜು, ಸಿದ್ದರಾಜು, ತಿಪ್ಪೇಸ್ವಾಮಿ, ಸುಬ್ಬಣ್ಣ, ನಾರಾಯಣ, ಶಾಂತಕುಮಾರ್ ಸ್ಪರ್ಧಿಸಿದ್ದರು. ಪಟ್ಟಣದ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಚುನಾವಣೆಯಲ್ಲಿ ಶಿಕ್ಷಕರು ಮತದಾನ ಮಾಡಿದರು. ಎಂ.ಕೆಂಪರಾಮೇಗೌಡ 95, ಸಿದ್ದರಾಜು ಹಾಗೂ ತಿಪ್ಪೇಸ್ವಾಮಿ ತಲಾ 70 ಮತಗಳನ್ನು ಪಡೆದು ನಿರ್ದೇಶಕರಾಗಿ ಆಯ್ಕೆಯಾದರೇ ಸುಬ್ಬಣ್ಣ 59, ಶಾಂತಕುಮಾರ್ 38, ನಾರಾಯಣ 22 ಮತಗಳನ್ನು ಪರಾಭವಗೊಂಡರು. ನೂತನ ನಿರ್ದೇಶಕರು ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಹಾಗೂ ಶಿಕ್ಷಕರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಕಸಬಾ ಪಿಎಸಿಎಸ್‌ಗೆ ಸತೀಶ್ ಕುಮಾರ್ ಅಧ್ಯಕ್ಷ



ಕಸಬಾ ಪಿಎಸಿಎಸ್ ಅಧ್ಯಕ್ಷರಾಗಿ ಬಿ.ಆರ್.ಸತೀಶ್ ಕುಮಾರ್, ಉಪಾಧ್ಯಕ್ಷರಾಗಿ ರಾಮೇಗೌಡ ಆಯ್ಕೆಯಾಗಿದ್ದಾರೆ.

ಪಿರಿಯಾಪಟ್ಟಣ, ಅ.28– ತಾಲೂಕಿನ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ.ಆರ್.ಸತೀಶ್ ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ರಾಮೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೂತನ ಅಧ್ಯಕ್ಷ ಸತೀಶ್ ಕುಮಾರ್ ಮಾತನಾಡಿ, ರೈತರು ಹಾಗೂ ಸಂಘದ ಸದಸ್ಯರು ನಮ್ಮ ಮೇಲೆ ಇಟ್ಟಿರುವ ಭರವಸೆ ಈಡೇರಿಸುತ್ತೇವೆ ಎಂದರು. ಈ ವೇಳೆ ಉಪಾಧ್ಯಕ್ಷ ರಾಮೇಗೌಡ, ನಿರ್ದೇಶಕರಾದ ರಮೇಶ್, ಗೀತಾ, ನಳಿನಿ, ಶೋಭಾ, ಕುಮಾರ್, ವೆಂಕಟೇಶ್, ಕರಿನಾಯಕ, ಸೈಯದ್ ಜಮೀಲ್, ರಾಮಕೃಷ್ಣ, ಸಂಘದ ಕಾರ್ಯ ನಿರ್ವಹಣಾಧಿಕಾರಿ ಪ್ರವೀಣ್ ಸೇರಿದಂತೆ ಇತರರಿದ್ದರು.

ನಂ.ಗೂಡಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜಯಂತಿ



ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿದರು.

ನಂಜನಗೂಡು, ಅ.28– ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ಬಡ ಜನರಿಗೆ ತ್ರಿವಿಧ ದಾಸೋಹ ನೀಡುವ ಮೂಲಕ ಅವರು ಸಮಾಜದ ಮುಂಚೂಣಿಗೆ ಬರಲು ಕಾರಣರಾದ ಪರಿಣಾಮ ಪ್ರಸ್ತುತ ಎಲ್ಲರಿಗೂ ಪ್ರಾತಃಸ್ಮರಣೀಯರಾಗಿದ್ದಾರೆ ಎಂದು ಲೇಖಕ ನಗರ್ಲೆ ಶಿವಕುಮಾರ್ ತಿಳಿಸಿದರು.

ನಗರದ ಜೆಎಸ್‌ಎಸ್ ಪದವಿ ಕಾಲೇಜಿನಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ನಡೆದ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಮಹೋತ್ಸವ, ಕಪಿಲ ಶಾಖೆಯ 8ನೇ ಹಾಗೂ ಮಣಿಕರ್ಣಿಕ ಶಾಖೆಯ ಮೊದಲ ವರ್ಷದ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಬಡವರ್ಗದ ಜನರಿಗೆ ಗಗನ ಕುಸುಮವಾಗಿದ್ದ ಶಿಕ್ಷಣವನ್ನು ಗ್ರಾಮೀಣ ಭಾಗಕ್ಕೂ ವಿಸ್ತರಿಸಬೇಕೆಂಬ ಛಲ ತೊಟ್ಟ ಪರಿಣಾಮ ಲಕ್ಷಾಂತರ ಬಡ ಮಕ್ಕಳು ವಿದ್ಯಾವಂತರಾಗಲು ಸಾಧ್ಯವಾಗಿದೆ. ಶಿಕ್ಷಣದ ಜೊತೆಗೆ ದಾಸೋಹ, ವಸತಿ ವ್ಯವಸ್ಥೆ ಕಲ್ಪಿಸಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಕಿಂಚಿತ್ತೂ ಚ್ಯುತಿ ಬಾರದಂತೆ ತಮ್ಮ ತನು ಮನ ಸಮರ್ಪಿಸಿಕೊಳ್ಳುವ ಮೂಲಕ ಎಲ್ಲರಿಗೂ ನಿತ್ಯ ಸ್ಮರಣೀಯರಾಗಿದ್ದಾರೆ ಎಂದರು.

ರಾಜೇಂದ್ರ ಶ್ರೀಗಳಲ್ಲಿ ಮಾತೃ ವಾತ್ಸಲ್ಯ ಅಪರಿಮಿತವಾಗಿತ್ತು ಎಂಬುದಕ್ಕೆ ಅನೇಕ ಸನ್ನಿವೇಶಗಳು ರುಜುವಾತು ಮಾಡುತ್ತವೆ. ಅವರ ಅಂತಃಕರಣ ನಮ್ಮೆಲ್ಲರಿಗೂ ದಾರಿದೀಪವಾಗಿದೆ. ಅವರು ಹಾಕಿಕೊಟ್ಟಿರುವ ಸನ್ಮಾರ್ಗದಲ್ಲಿ ಸಾಗುವಂತಾಗಬೇಕು. ಅವರ ಜಯಂತಿ ಮಹೋತ್ಸವಗಳನ್ನು ಆಚರಿಸುವ ಮೂಲಕ ಅವರನ್ನು ಸ್ಮರಿಸುವ ಜೊತೆಗೆ ಅವರ ಆಶಯಗಳಿಗೆ ಅನುಗುಣವಾಗಿ ನಾವು ಜೀವನ ರೂಪಿಸಿಕೊಳ್ಳುವ ಮೂಲಕ ಅವರಿಗೆ ನಾವು ಸದಾ ಗೌರವ ಕೊಡಬೇಕು ಎಂದರು.

ನವಿಲೂರು ಹಾಗೂ ಚುಂಚನಹಳ್ಳಿ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬರೂ ಶಿಕ್ಷಿತರಾಗುವ ಜೊತೆಗೆ ಸಂಸ್ಕಾರವಂತರಾಗಿ ಶಾಂತಿ, ನೆಮ್ಮದಿ, ಸಹಬಾಳ್ವೆಯಿಂದ ಜೀವನ ನಡೆಸುವಂತಾಗಬೇಕು ಎಂಬುದು ರಾಜೇಂದ್ರ ಶ್ರೀಗಳ ಆಶಯವಾಗಿತ್ತು. ಅವರ ಆಶಯದಂತೆ ಸಮಾಜದಲ್ಲಿ ಸಂಸ್ಕಾರ ಬಿತ್ತುತ್ತಾ ಯೋಗ, ಧ್ಯಾನ, ಆಧ್ಯಾತ್ಮವನ್ನು ಪಸರಿಸುತ್ತಿರುವ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಸಮಾಜಮುಖಿ ಕಾರ್ಯ ನಿಜಕ್ಕೂ ಶ್ಲಾಘನೀಯ. ಸಮಿತಿಯ ಸೇವಾ ಕಾರ್ಯಗಳು ಗ್ರಾಮೀಣ ಭಾಗಕ್ಕೂ ತಲುಪುವಂತಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಸ್.ಹೊನ್ನೇಗೌಡ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ಕಾರ್ಯದರ್ಶಿ ಎನ್.ಆರ್.ಗಣೇಶಮೂರ್ತಿ, ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ. ಉಡಿಗಾಲ, ಕಪಿಲ ಶಾಖೆಯ ಪ್ರಮುಖ ಹಂಡುವಿನಹಳ್ಳಿ ರಾಜು ಉಪಸ್ಥಿತರಿದ್ದರು.

ಲಕ್ಷ್ಮಣೇಗೌಡ ನಿಧನ



ಹನಗೋಡು, ಅ.28– ಸಮೀಪದ ಭರತವಾಡಿ ಗ್ರಾಮದ ಮಾಜಿ ಯಜಮಾನ ಲಕ್ಷ್ಮಣೇಗೌಡ (60) ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸಹೋದರ ದೊಡ್ಡಹೆಜ್ಜೂರು ಗ್ರಾಪಂ ಉಪಾಧ್ಯಕ್ಷ ವೆಂಕಟೇಶ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 29 ಅಕ್ಟೋಬರ್ 2024

ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್‌ನಿಂದ ಬಂಡೀಪುರದ ಗೋಪಾಲಸ್ವಾಮಿ ಬೆಟ್ಟ, ಕುಂದಕೆರೆ ವಲಯದ ಅರಣ್ಯ ರಕ್ಷಣೆ

● ಅರಣ್ಯ ಇಲಾಖೆ ಸಹಕಾರದಿಂದ ಕಾನನದ ಪುನರ್ ನಿರ್ಮಾಣಕ್ಕೆ ಕೈ ಜೋಡಿಸಿದ ಎನ್‌ಜಿಒ ● 500 ಎಕರೆ ಪ್ರದೇಶದಲ್ಲಿ ಕಳೆಗಿಡಗಳ ತೆರವಿಗೆ ಕ್ರಮ ● ಸದ್ದಿಲ್ಲದೆ ನಡೆಯುತ್ತಿದೆ ಐದು ವರ್ಷ ಅವಧಿಯ ಯೋಜನೆ ● 75 ಮಂದಿಗೆ ಉದ್ಯೋಗಾವಕಾಶಕ್ಕೆ ತಲಾ 10 ಲಕ್ಷದ ವಿಮೆ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮೇಲುಕಾಮನಹಳ್ಳಿ ಪ್ರವೇಶ ದ್ವಾರ.



ಕಳೆಗಿಡಗಳ ತೆರವುಗೊಳಿಸುತ್ತಿರುವುದು

● ಎಂ.ಟಿ.ಯೋಗೇಶ್ ಕುಮಾರ್

ಬಂಡೀಪುರ ,ಅ.28– ಕಾಡಿಗೆ ಕಂಟಕವಾಗಿ ಸಸ್ಯಾಹಾರಿ ಪ್ರಾಣಿಗಳಿಗೆ ಮೇವಿನ ಕೊರತೆಗೆ ಕಾರಣವಾಗಿರುವ ಸೆನ್ನಾ ಸ್ಪೆಕ್ಟಾಬಿಲಿಸ್, ಲಂಟಾನ ಸೇರಿದಂತೆ ಕಳೆ ಗಿಡಗಳನ್ನು ಬೇರು ಸಹಿತ ತೆರವುಗೊಳಿಸಿ, ಅರಣ್ಯ ಪುನರ್ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಬೆಂಗಳೂರಿನ ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್ ಸದ್ದಿಲ್ಲದೆ ಶ್ರಮಿಸುತ್ತಿದೆ.

ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶದ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ 13 ವಲಯಗಳಲ್ಲೂ ಯಾವುದೇ ಪ್ರಾಣಿಗಳಿಗೆ ಆಹಾರವಲ್ಲದ ಸೆನ್ನಾ ಸ್ಪೆಕ್ಟಾಬಿಲಿಸ್, ಲಂಟಾನ ಸೇರಿದಂತೆ ಇನ್ನಿತರ ಕಳೆ ಗಿಡಗಳೇ ಹೆಚ್ಚಾಗಿ ಆವರಿಸಿದ್ದು, ಅರಣ್ಯ ಇಲಾಖೆಗೆ ತಲೆ ನೋವಾಗಿ ಪರಿಣಮಿಸಿದೆ. ಕಳೆದ 2–3 ದಶಕಗಳಿಂದ ಕಾಡಿಗೆ ಲಂಟಾನ ಕಳೆ ಶಾಪವಾಗಿ ಪರಿಣಮಿಸಿದ್ದು, ಹಂತ ಹಂತವಾಗಿ ವನ್ಯಸಂಪತ್ತನ್ನೇ ನುಂಗಿ ಹಾಕುತ್ತಿದೆ. ಇದರಿಂದ ಅರಣ್ಯ ಪ್ರದೇಶದಲ್ಲಿ ಸ್ವಚ್ಛಂದವಾಗಿ ವಿಹರಿಸಬೇಕಾದ ಸಸ್ಯಾಹಾರಿ ಕಾಡುಪ್ರಾಣಿಗಳಿಗೆ ಆಹಾರದ ಕೊರತೆ ನಿರ್ಮಿಸುತ್ತಾ ಭವಿಷ್ಯದಲ್ಲಿ ರಕ್ಕಸ ಸ್ವರೂಪದ ಸಮಸ್ಯೆ ಸೃಷ್ಟಿಸುವ ಎಚ್ಚರಿಕೆಯ ಸಂದೇಶ ರವಾನಿಸುತ್ತಿವೆ.

ಕಾಡು ಪುನರ್ ನಿರ್ಮಾಣಕ್ಕೆ ಕೈ ಜೋಡಿಸಿದ ಎನ್‌ಜಿಒ: ಅರಣ್ಯವನ್ನೇ ಆವರಿಸುತ್ತಿರುವ ಕಳೆಗಿಡಗಳ ತೆರವಿಗೆ ಅರಣ್ಯ ಇಲಾಖೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರೂ, ನಿರೀಕ್ಷಿಸಿದ ಪ್ರಮಾಣದಲ್ಲಿ ಕಳೆಗಿಡಗಳ ತೆರವು ಸಾಧ್ಯವಾಗುತ್ತಿಲ್ಲ. ಆದರೂ ಇಲಾಖೆ ಪ್ರತಿವರ್ಷ ಗುರುತಿಸಲ್ಪಟ್ಟ ಪ್ರದೇಶದಲ್ಲಿ ಲಂಟಾನ, ಸೆನ್ನಾ ಸ್ಪೆಕ್ಟಾಬಿಲಿಸ್ ಕಳೆಗಿಡಗಳ ತೆರವು ನಡೆಸುತ್ತಲೇ ಇದೆ. ಈ ಸಂದರ್ಭದಲ್ಲಿ ಬೆಂಗಳೂರಿನ ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್ ಸಾಮಾಜಿಕ ಜವಾಬ್ದಾರಿಯಿಂದಾಗಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ(ಜಿ.ಎಸ್.ಬೆಟ್ಟ) ಹಾಗೂ ಕುಂದಕೆರೆ ವಲಯದಲ್ಲಿ 500 ಎಕರೆ ಅರಣ್ಯ ಪ್ರದೇಶದಲ್ಲಿ ಕಳೆಗಿಡಗಳ ತೆರವಿಗೆ ಕಾರ್ಯಕ್ರಮ ರೂಪಿಸಿದೆ. ಅರಣ್ಯ ಇಲಾಖೆಯ ಅನುಮತಿ ಪಡೆದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಿಂದ ಒಡಂಬಡಿಕೆ ಮಾಡಿಕೊಂಡು 2019–20ರಿಂದ 5 ವರ್ಷ ಅವಧಿಯ ಯೋಜನೆ ಮುಂದುವರೆಸಿದ್ದು, ಇದೀಗ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸು ಸಾಧಿಸಿದೆ.

ಸ್ಥಳೀಯ ಕಾರ್ಮಿಕರ ಬಳಕೆ: ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್ ಅರಣ್ಯ ಪ್ರದೇಶದಲ್ಲಿ ಸೆನ್ನಾ ಸ್ಪೆಕ್ಟಾಬಿಲಿಸ್, ಲಂಟಾನ ಹಾಗೂ ಇನ್ನಿತರ ಕಳೆಗಿಡಗಳನ್ನು ಬೇರು ಸಹಿತ ಕಿತ್ತೊಗೆಯಲು ಸ್ಥಳೀಯ ಕಾರ್ಮಿಕರನ್ನೇ ಬಳಸುತ್ತಿದೆ ಬಂಡೀಪುರ ಅರಣ್ಯದಂಚಿನ ಗ್ರಾಮಗಳಾದ ಲೊಕ್ಕೆರೆ, ಗುಡ್ಡೆಕೆರೆ, ಕಣಿಯನಪುರ, ನಗುವನಹಳ್ಳಿ, ಆನೆಹೆಜ್ಜೆ ಹುಂಡಿ, ಬುರುದರಹುಂಡಿ ಸೇರಿದಂತೆ ವಿವಿಧ ಗ್ರಾಮಗಳಿಂದ 75 ಮಂದಿ ಕಾರ್ಮಿಕರನ್ನು ವಿವಿಧ ತಂಡಗಳಾಗಿ ವಿಂಗಡಿಸಿ ಅರಣ್ಯದಲ್ಲಿ ಬೆಳೆದಿರುವ ಕಳೆಗಿಡಗಳ ತೆರವು ಕಾರ್ಯಾಚರಣೆಗೆ ಬಳಸಿಕೊಳ್ಳುತ್ತಿದೆ. ಪ್ರತಿ ಕಾರ್ಮಿಕರಿಗೆ ದಿನಕ್ಕೆ 450 ರೂ. ನೀಡಲಾಗುತ್ತಿದೆ.

ಸ್ವಸಹಾಯ ಸಂಘಗಳ ಮೂಲಕ ಕಾರ್ಮಿಕರು: ಕಳೆಗಿಡ ತೆರವು ಕಾರ್ಯದಲ್ಲಿ ಬಳಸಿಕೊಳ್ಳುತ್ತಿರುವ ಕಾರ್ಮಿಕರನ್ನು ಸ್ವಸಹಾಯ ಸಂಘಗಳ ಮೂಲಕ ಕರೆಸಿಕೊಳ್ಳಲಾಗುತ್ತಿದೆ. ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್ ಕಾರ್ಮಿಕರ ಗುಂಪಿಗೆ ಸ್ವಸಹಾಯ ಸಂಘವನ್ನು ನೋಂದಣಿ ಮಾಡಿಸಿಕೊಟ್ಟು ನೆರವಾಗುತ್ತಿದೆ.

ಸುರಕ್ಷತೆಗೆ ಕ್ರಮ, ವಿಮಾ ಸೌಲಭ್ಯ: ವನ್ಯಜೀವಿಗಳ ತಾಣವಾಗಿರುವ ಬಂಡೀಪುರ ಅರಣ್ಯದಲ್ಲಿ ಕಳೆಗಿಡ ತೆರವು ಕಾರ್ಯಾಚರಣೆ ನಡೆಸುವಾಗ ಕಾರ್ಮಿಕರ ಸುರಕ್ಷತೆ ಹಾಗೂ ಭದ್ರತೆಗೆ ಕ್ರಮ ಕೈಗೊಳ್ಳಲಾಗಿದೆ. ಟ್ರಸ್ಟ್ ವತಿಯಿಂದ 75 ಕಾರ್ಮಿಕರಿಗೂ ತಲಾ 10 ಲಕ್ಷ ರೂ. ಮೊತ್ತದ ವಿಮಾ ಸೌಲಭ್ಯ ಮಾಡಿಸಲಾಗಿದೆ. ಕೆಲಸದ ವೇಳೆ ವನ್ಯಜೀವಿಗಳಿಂದಾಗಬಹುದಾದ ಹಾನಿಯಿಂದಾಗಿ ವಿಮೆ ಮಾಡಿಸಲಾಗಿದೆ. ಅಲ್ಲದೆ, ಅರಣ್ಯ ಇಲಾಖೆಯ ಸಿಬ್ಬಂದಿಯೊಬ್ಬರ ಬೆಂಗಾವಲಿನಲ್ಲಿ ಕಳೆಗಿಡ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ. ಗುಂಪು ಗುಂಪಾಗಿಯೇ ಕೆಲಸ ಮಾಡುವಂತೆ ಕಾರ್ಮಿಕರಿಗೆ ಸೂಚನೆ ನೀಡಲಾಗಿದ್ದು, ಸುರಕ್ಷತಾ ಕ್ರಮ ಅನುಸರಿಸುವಂತೆ ಸಲಹೆ ನೀಡಲಾಗಿದೆ.

ಅರಣ್ಯ ಇಲಾಖೆ ಸಹಕಾರ ಪಡೆದು ಅರಣ್ಯ ಪುನರ್ ನಿರ್ಮಾಣ

ಮುಂದಿನ ಪೀಳಿಗೆಗೆ ಅರಣ್ಯ ಸಂರಕ್ಷಿಸಿ ಕೊಡುಗೆ ನೀಡುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಅನುಮತಿ ಪಡೆದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದಕೆರೆ, ಗೋಪಾಲಸ್ವಾಮಿ ಬೆಟ್ಟ ವಲಯದಲ್ಲಿ 500 ಎಕರೆ ಅರಣ್ಯ ಪ್ರದೇಶದಲ್ಲಿ ಕಳೆಗಿಡಗಳಾದ ಸೆನ್ನಾ ಸ್ಪೆಕ್ಟಾಬಿಲಿಸ್, ಲಂಟಾನ ಹಾಗೂ ಇನ್ನಿತರ ಕಳೆಗಿಡಗಳನ್ನು ನಮ್ಮ ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್ ಮೂಲಕ ತೆರವುಗೊಳಿಸಿ, ಆ ಪ್ರದೇಶದಲ್ಲಿ ಸ್ಥಳೀಯ ಸಸ್ಯಗಳ ಬೆಳವಣಿಗೆಗೆ ಕ್ರಮ ಕೈಗೊಳ್ಳಲಾಗಿದೆ. ಕಳೆಗಿಡಗಳ ತೆರವು ಕಾರ್ಯಾಚರಣೆಗೆ ವಿವಿಧ ಸಂಘ ಸಂಸ್ಥೆಗಳ ನೆರವು ಪಡೆಯಲಾಗಿದ್ದು, ಅರಣ್ಯ ಪುನರ್ ನಿರ್ಮಾಣಕ್ಕೆ ಶ್ರಮಿಸುತ್ತಿದ್ದೇವೆ. ಈ ಯೋಜನೆಯಿಂದ ಬೇರು ಸಹಿತ ಕಳೆ ಗಿಡಗಳನ್ನು ತೆರವು ಮಾಡಿದರೆ, ಸಸ್ಯಾಹಾರಿ ಪ್ರಾಣಿಗಳಿಗೆ ಎದುರಾಗುವ ಆಹಾರ ಕೊರತೆ ನೀಗಿಸಬಹುದಾಗಿದೆ ಅಲ್ಲದೆ ಪ್ರಾಣಿಗಳ ಆಹಾರ ಸರಪಳಿಯ ಯಾವುದೇ ಕೊಂಡಿ ಕಳಚುವುದನ್ನು ತಡೆಗಟ್ಟಿದಂತಾಗುತ್ತದೆ. ನಮ್ಮ ಟ್ರಸ್ಟ್ ನಡೆಸುತ್ತಿರುವ ಸೇವಾ ಕಾರ್ಯಕ್ಕೆ ಅರಣ್ಯ ಇಲಾಖೆ ಹಾಗೂ ನೆರವು ನೀಡುತ್ತಿರುವ ಸಂಸ್ಥೆಗಳಿಗೆ ಆಭಾರಿಯಾಗಿದ್ದೇವೆ


- ಸಿ.ಆರ್.ಹನುಮಂತ್, ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್, ಪ್ರಾಜೆಕ್ಟ್ ಗವರ್ನೆನ್ಸ್ ಕಮಿಟಿ ಸದಸ್ಯ



ಅರಣ್ಯ ಪ್ರದೇಶದಲ್ಲಿ ಕಳೆ ಗಿಡಗಳ ತೆರವು ಕಾರ್ಯಾಚರಣೆ ಗಮನಿಸುತ್ತಿರುವ ಜಂಗಲ್ ಸ್ಕೇಪ್ ಚಾರಿಟಬಲ್ ಟ್ರಸ್ಟ್ ಪ್ರಾಜೆಕ್ಟ್ ಗವರ್ನೆನ್ಸ್ ಕಮಿಟಿ ಸದಸ್ಯ ಸಿ.ಆರ್.ಹನುಮಂತ್



ಬಂಡೀಪುರ ಅರಣ್ಯದಲ್ಲಿ ಸೆನ್ನಾ ಸ್ಪೆಕ್ಟಾಬಿಲಿಸ್, ಲಂಟಾನ ಕಳೆ ಗಿಡಗಳು



ಮಂಗಲ ರಸ್ತೆಯ ಬದಿಯಲ್ಲಿ ಕಣ್ಣಿಗೆ ಬಿದ್ದ ಕಾಡೆಮ್ಮೆ

ಅಂತರ ಕಾಲೇಜು ಸಮೂಹ ಜಾನಪದ ನೃತ್ಯ ಸ್ಪರ್ಧೆ

ಮೈಸೂರು, ಅ. 28 – ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ನ. 7 ರಂದು ಮೈಸೂರು ಪ್ರಾದೇಶಿಕ ಮಟ್ಟದ ಅಂತರ ಕಾಲೇಜು ಸಮೂಹ ಜಾನಪದ ನೃತ್ಯ ಸ್ಪರ್ಧೆ ಏರ್ಪಡಿಸಲಾಗಿದೆ. ಒಂದು ಕಾಲೇಜು, ಸ್ನಾತಕೋತ್ತರ ವಿಭಾಗದಿಂದ 10 ರಿಂದ 15 ವಿದ್ಯಾರ್ಥಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿದೆ. ಹಾಗೂ 5 ಜನ ವಾದಕರನ್ನು ಸಹ ಕಲಾವಿದರನ್ನಾಗಿ ಸೇರಿಸಿಕೊಳ್ಳಬಹುದಾಗಿದೆ. ಪ್ರತಿ ತಂಡಕ್ಕೆ 10 ನಿಮಿಷಗಳ ಕಾಲಾವಕಾಶವಿರುತ್ತದೆ. ಯಾವುದಾದರೂ ಪ್ರಾದೇಶಿಕ ಜನಪದ ನೃತ್ಯ ಅಥವಾ ಪ್ರಾಚೀನ ನೃತ್ಯವನ್ನು ಮಾತ್ರ ಪ್ರದರ್ಶಿಸಬೇಕು. ಪ್ರಥಮ ಬಹುಮಾನ ರೂ. 20,000, ದ್ವಿತೀಯ ಬಹುಮಾನ ರೂ. 15,000 ಮತ್ತು ತೃತೀಯ ಬಹುಮಾನ ರೂ. 10,000 ನೀಡಲಾಗುವುದು. ಬಹುಮಾನಗಳನ್ನು ನ. 8 ರಂದು ನಡೆಯುವ ಕನ್ನಡ ರಾಜ್ಯೋತ್ಸವ ವಿಶೇಷ ಕಾರ್ಯಕ್ರಮದಲ್ಲಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9900557883, 9916423901 ಸಂಪರ್ಕಿಸಬಹುದು.

ರೇಣುಕಾಸ್ವಾಮಿ ಕೊಲೆ ಪ್ರಕರಣ: ನಟ ದರ್ಶನ್ ಜಾಮೀನು ಅರ್ಜಿ ಇಂದು ವಿಚಾರಣೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟ ದರ್ಶನ್‌ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಸೋಮವಾರ ಹೈಕೋರ್ಟ್ ಅಕ್ಟೋಬರ್ 29ಕ್ಕೆ ಮುಂದೂಡಿದೆ. ಇತ್ತೀಚಿಗೆ ಸೆಷನ್ಸ್ ಕೋರ್ಟ್ ನಟ ದರ್ಶನ್ ಅವರಿಗೆ ಜಾಮೀನು ನಿರಾಕರಿಸಿತ್ತು. ಈ ಹಿನ್ನೆಲೆಯಲ್ಲಿ ದರ್ಶನ್ ಪರ ವಕೀಲರು ಅನಾರೋಗ್ಯ ಕಾರಣ ನೀಡಿ ಹೈಕೋರ್ಟ್‌ಗೆ ತುರ್ತು ಜಾಮೀನು ಅರ್ಜಿ ಸಲ್ಲಿಸಿದ್ದಾರೆ.

ಇಂದು ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಆರೋಪಿ ದರ್ಶನ್ ಅವರ ಆರೋಗ್ಯದ ಬಗ್ಗೆ ಬಳ್ಳಾರಿ ಜೈಲು ಅಧಿಕಾರಿಗಳು ಸಲ್ಲಿಸಿದ ವರದಿಯನ್ನು ಪರಿಶೀಲಿಸಿದ್ದು, ವಿಚಾರಣೆಯನ್ನು ನಾಳೆಗೆ ಮುಂದೂಡಿದೆ.



ಅಂತರ್ಜಲ ಸಂರಕ್ಷಣೆಗೆ ಸಾರ್ವಜನಿಕರ ಸಹಕಾರ ಅಗತ್ಯ

ಕೇಂದ್ರೀಯ ಅಂತರ್ಜಲ ಮಂಡಳಿ ಪ್ರಾದೇಶಿಕ ನಿರ್ದೇಶಕ ಜ್ಯೋತಿ ಕುಮಾರ್ ಅಭಿಮತ

ಮೈಸೂರು,ಅ.28(ಎಂಟಿವೈ)– ಅಂತರ್ಜಲದ ಸಂರಕ್ಷಣೆ ಅನಿವಾರ್ಯವಾಗಿದ್ದು, ಸಾರ್ವಜನಿಕರು ಸರ್ಕಾರದ ವಿವಿಧ ಇಲಾಖೆಯೊಂದಿಗೆ ಸಹಕರಿಸಿ ನೀರಿನ ಮಿತ ಬಳಕೆ ಮಾಡಬೇಕು ಎಂದು ಕೇಂದ್ರೀಯ ಅಂತರ್ಜಲ ಮಂಡಳಿಯ ಪ್ರಾದೇಶಿಕ ನಿರ್ದೇಶಕ ಎನ್.ಜ್ಯೋತಿ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಭೂ ವಿಜ್ಞಾನ ವಿಭಾಗ ಹಾಗೂ ಭಾರತ ಸರ್ಕಾರದ ಜಲಶಕ್ತಿ ಸಚಿವಾಲಯದ ಕೇಂದ್ರೀಯ ಅಂತರ್ಜಲ ಮಂಡಳಿಯ ವತಿಯಿಂದ ಸೋಮವಾರ ಆಯೋಜಿಸಿದ್ದ 'ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣಾ ಅಭ್ಯಾಸ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಅಂತರ್ಜಲದ ಸಂರಕ್ಷಣೆ ಕೇವಲ ಸರ್ಕಾರಿ ಅಧಿಕಾರಿಗಳು ಹಾಗೂ ಜಲ ತಜ್ಞರಿಂದ ಮಾತ್ರ ಸಾಧ್ಯವಿಲ್ಲ. ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ. ಈ ನಿಟ್ಟಿನಲ್ಲಿ ಅಂತರ್ಜಲದ ಸಂರಕ್ಷಣೆಗೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಪ್ರಸ್ತುತ ಸಂದರ್ಭದಲ್ಲಿ ವ್ಯವಸಾಯಕ್ಕೆ ಹೆಚ್ಚಿನ ಪ್ರಮಾಣದ ಅಂತರ್ಜಲ ಬಳಸಲಾಗುತ್ತಿದೆ. ಅದಕ್ಕೆ ಪೂರಕವಾಗಿ ನಿರ್ವಹಣಾ ಯೋಜನೆಯನ್ನು ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿದೆ. ಆದರೆ ಕೇವಲ ಯೋಜನೆಗಳಿಂದ ತಳಮಟ್ಟದಲ್ಲಿ ಅಂತರ್ಜಲ ಬಳಕೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಆಗುವುದಿಲ್ಲ. ಬದಲಾಗಿ ರೈತರಿಗೆ ಅರಿವು ಮೂಡಿಸಬೇಕು. ಆಯಾ ಬೆಳೆಗಳಿಗೆ ಬೇಕಾಗುವಷ್ಟು ಪ್ರಮಾಣದಲ್ಲಿ ನೀರನ್ನು ಬಳಕೆ ಮಾಡುವಂತೆ ಮನವರಿಕೆ ಮಾಡಿಕೊಡಬೇಕು. ಆಗ ಮಾತ್ರ ಅಂತರ್ಜಲ ಸಂರಕ್ಷಣೆಯ ಯೋಜನೆ ಯಶಸ್ವಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವಿಶ್ವದಲ್ಲಿ ಅಂತರ್ಜಲ ಬಳಸುವ ರಾಷ್ಟ್ರಗಳಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಯುವ ಜನರೇ ಹೆಚ್ಚಾಗಿರುವ ನಮ್ಮ ದೇಶದಲ್ಲಿ ಅಂತರ್ಜಲದ ಸಂರಕ್ಷಣೆ ಮತ್ತು ಸಮತೋಲನ ಸಾಧಿಸಲು ಯುವ ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಭವಿಷ್ಯದ ಬಗ್ಗೆ ಅವರಿಗೆ ಅರಿವು ಮೂಡಿಸಬೇಕು. ಬೆಂಗಳೂರಿನಂತಹ ಮೆಟ್ರೋಪಾಲಿಟಿನ್ ನಗರಗಳಲ್ಲಿ ನೀರಿನ ನಿರ್ವಹಣೆಯ ವ್ಯವಸ್ಥೆ ಅಸಮರ್ಪಕವಾಗಿರುವುದರಿಂದ ಅರ್ಧ ವರ್ಷ ವಿಪರೀತ ನೀರು, ಉಳಿದ ಅರ್ಧ ವರ್ಷ ನೀರಿನ ಕೊರತೆಯನ್ನು ಕಾಣುತ್ತಿದ್ದೇವೆ. ಇದನ್ನು ಹೋಗಲಾಡಿಸಲು ವೈಜ್ಞಾನಿಕವಾದ ವ್ಯವಸ್ಥೆ ಜಾರಿಗೊಳಿಸಬೇಕು ಎಂದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈವಿವಿ ಕುಲಪತಿ ಪ್ರೊ.ಎನ್.ಕೆ ಲೋಕನಾಥ್ ಮಾತನಾಡಿ, ಪರಿಸರ ರಕ್ಷಣೆಯಿಂದ ಭೂಮಿಯಲ್ಲಿ ವಾಸ ಮಾಡುವ ಜನರ ಆರೋಗ್ಯ ರಕ್ಷಣೆಯೂ ಆಗಲಿದೆ. ಜನಸಂಖ್ಯೆ ಹೆಚ್ಚಳವಾದಂತೆ ಅಗತ್ಯಕ್ಕೆ ತಕ್ಕಂತೆ ಜೀವಜಲದ ಕೊರತೆಯೂ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ಸೂಕ್ತವಾಗಿ ಎದುರಿಸಬೇಕಾದರೆ ಅಂತರ್ಜಲ ವ್ಯವಸ್ಥೆಯ ಸಮರ್ಪಕ ನಿರ್ವಹಣೆಯೊಂದೇ ಮಾರ್ಗ. ಅಂತರ್ಜಲ ವ್ಯವಸ್ಥೆಯ ವಿಷಯವಾಗಿ ಪ್ರಸ್ತುತ ವಿದ್ಯಾರ್ಥಿ ಸಮೂಹದಲ್ಲಿ ಆಳವಾದ ಜ್ಞಾನವಿದೆ. ಆದ್ದರಿಂದ ಈ ವರ್ಗದ ಯುವ ಮುಂದಾಳುಗಳನ್ನು ವಿಶ್ವಾಸಕ್ಕೆ ತಗೆದುಕೊಂಡು ಪರಿಹಾರ ಕ್ರಮಗಳ ಬಗ್ಗೆ ಚರ್ಚಿಸಬೇಕು ಎಂದರು.

ಅಟಲ್ ಭೂಜಲ ಯೋಜನೆಯ ನಿರ್ದೇಶಕ ಹೆಚ್.ಕಿರಣ್ ಮಾತನಾಡಿ, ಅಂತರ್ಜಲ ಅಪರೂಪದ ಸಂಪನ್ಮೂಲವಾಗಿದ್ದು, ಭಾರತದಲ್ಲಿ ಅದರ ಅವಲಂಬನೆ ಹೆಚ್ಚಿದೆ. ಶೇ.80 ರಷ್ಟು ಕೃಷಿಗೆ, ಶೇ. 85 ರಷ್ಟು ಗ್ರಾಮೀಣ ಭಾಗದ ಕುಡಿಯುವ ನೀರು ಬಳಕೆಗೆ ಹಾಗೂ ಶೇ.55ರಷ್ಟು ನಗರ ಭಾಗದ ಕುಡಿಯುವ ನೀರಿಗಾಗಿ ಅಂತರ್ಜಲದ ಬಳಕೆಯಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಜ್ಞಾನಿ ರಾಹುಲ್ ಆರ್.ಶಿಂಧೆ, ಮೈವಿವಿ ಭೂ ವಿಜ್ಞಾನ ವಿಭಾಗದ ಅಧ್ಯಕ್ಷ ಪ್ರೊ.ಡಿ.ನಾಗರಾಜು ಉಪಸ್ಥಿತರಿದ್ದರು.



ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ 'ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣಾ ಅಭ್ಯಾಸ' ಕುರಿತ ವಿಚಾರ ಸಂಕಿರಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ನಸಾಬ್ (ಕ)	1 ಪ್ರದರ್ಶನಗಳು
ಅನ್ನ (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಎಲ್ಲಿಗೆ ಪಯಣ ಯಾವುದೋ ದಾರಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ದಿ ಹಂಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಯಲಾ ಕುನ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ದೇವರ (ತೆ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಭೀಮಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.11.05ಕ್ಕೆ, ಮ.1.30ಕ್ಕೆ, ರಾ.7.15ಕ್ಕೆ, ರಾ.9.45ಕ್ಕೆ, ವೆಟ್ಟೈಯನ್ (ತ): ಸಂ.4ಕ್ಕೆ.
ಸ್ಕ್ರೀನ್ 2	ದಿ ವೈಲ್ಡ್ ರೋಬೋಟ್ (3ಡಿ)(ಇಂ): ಬೆ.11ಕ್ಕೆ, ಮಾರ್ಟಿನ್ (ಕ): ಮ.1.10ಕ್ಕೆ, ವೆಟ್ಟೈಯನ್ (ತ): ಸಂ.4.05ಕ್ಕೆ, ಯಲಾ ಕುನ್ನಿ (ಕ): ರಾ.7.10ಕ್ಕೆ, ನರುಡಿ ಬ್ರದುಕು ನಟನ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಬೆ.10.35ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ಮರ್ಫಿ (ಕ): ರಾ.7ಕ್ಕೆ, ಪಣಿ (ಮ): ರಾ.9.50ಕ್ಕೆ.
ಸ್ಕ್ರೀನ್ 4	ನಸಾಬ್ (ಕ): ಬೆ.10.20ಕ್ಕೆ, ವೆಟ್ಟೈಯನ್ (ತ): ಮ.1.05ಕ್ಕೆ, ಸಂ.6.55ಕ್ಕೆ, ಯಲಾಕುನ್ನಿ (ಕ): ಸಂ.4.15ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಲಾಡ್ಜ್‌ನಲ್ಲಿ ಜೂಜು; 19 ಮಂದಿ ಪೊಲೀಸ್ ವಶಕ್ಕೆ

ಮೈಸೂರು, ಅ.28– ಲಾಡ್ಜ್‌ನಲ್ಲಿ ಜೂಜಾಡುತ್ತಿದ್ದವರನ್ನು ಮೈಸೂರಿನ ಕೃಷ್ಣರಾಜ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಎಂ.ಜಿ.ರಸ್ತೆಯಲ್ಲಿರುವ ಲಾಡ್ಜ್‌ವೊಂದರ ಕೊಠಡಿಯಲ್ಲಿ ಜೂಜಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಭಾನುವಾರ ದಾಳಿ ನಡೆಸಿದ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ 19 ಮಂದಿ ಹಾಗೂ ಪಣಕ್ಕಿಟ್ಟಿದ್ದ 61 ಸಾವಿರ ರೂ. ನಗದು ವಶಪಡಿಸಿಕೊಂಡಿದ್ದಾರೆ. ಇವರೊಂದಿಗೆ ಕೊಠಡಿ ಬಾಡಿಗೆ ಪಡೆದು ಜೂಜಾಡಲು ಸಹಕರಿಸಿದ್ದವನ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪ್ರಥಮ ರ್‍ಯಾಂಕ್

ಮೈಸೂರು, ಅ.28– ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ದಡಿ, ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಸ್‌ಡಿಎಂ ಕಾನೂನು ಕಾಲೇಜಿನ ವಿದ್ಯಾರ್ಥಿನಿ ಶ್ರೀಮತಿ ಸಿಂಧು ಎಲ್‌ಎಲ್‌ಎಂನಲ್ಲಿ ಮೊದಲ ರ್‍ಯಾಂಕ್ ಗಳಿಸಿದ್ದಾರೆ. ಇವರು ಜಿಲ್ಲಾ ಸತ್ರ ನ್ಯಾಯಾಧೀಶರಾದ ಬಸವರಾಜ್ ಅವರ ಪುತ್ರಿ.



ಲೈಂಗಿಕ ದೌರ್ಜನ್ಯದ ಆರೋಪ; ಮಾಲಿವುಡ್ ನಿರ್ದೇಶಕ ರಂಜಿತ್ ಬಾಲಕೃಷ್ಣನ್ ವಿರುದ್ಧ ಕೇಸ್

ಬೆಂಗಳೂರು: ವ್ಯಕ್ತಿಯೋರ್ವನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಕೇರಳ ಸಿನಿಮಾ ನಿರ್ದೇಶಕ ರಂಜಿತ್ ಬಾಲಕೃಷ್ಣನ್ ವಿರುದ್ಧ ಪ್ರಕರಣ ದಾಖಲಾಗಿದೆ.

ಪಂಚತಾರಾ ಹೋಟೆಲ್ ಒಂದರಲ್ಲಿ ತಮ್ಮ ವಿರುದ್ಧ ರಂಜಿತ್ ಬಾಲಕೃಷ್ಣನ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು 31 ವರ್ಷದ ವ್ಯಕ್ತಿಯೋರ್ವ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ. ಎಫ್‌ಐಆರ್ ಪ್ರಕಾರ, 2012 ರಲ್ಲಿ ಬಾಲಕೃಷ್ಣನ್ ಬರೆದು ನಿರ್ಮಿಸಿದ, ಬವುಟ್ಟಿಯುದೇ ನಮತಿಲ್' ಚಿತ್ರದ ಚಿತ್ರೀಕರಣದ ವೇಳೆ ಕೋಝಿಕ್ಕೋಡ್‌ನಲ್ಲಿ ನಟ ಮಮ್ಮುಟ್ಟಿ ಅವರನ್ನು ಭೇಟಿಯಾಗಲು ಹೋದಾಗ ರಂಜಿತ್ ಬಾಲಕೃಷ್ಣನ್ ಅವರನ್ನೂ ಭೇಟಿ ಮಾಡಿದ್ದು, ಈ ಘಟನೆ ನಡೆದಿದೆ ಎಂದು ದೂರುದಾರರು ಆರೋಪಿಸಿದ್ದಾರೆ.

ಎಫ್‌ಐಆರ್‌ನ ಪ್ರಕಾರ, ನಿರ್ದೇಶಕರು ತನ್ನ ಫೋನ್ ಸಂಖ್ಯೆಯನ್ನು ಪಡೆದು ಡಿಸೆಂಬರ್ 2012 ರಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯ ಹೋಟೆಲ್‌ಗೆ ಆಹ್ವಾನಿಸಿದರು ಮತ್ತು ಅಲ್ಲಿ ಅವರು ತನಗೆ ಮದ್ಯ ನೀಡಿ ಲೈಂಗಿಕ ದೌರ್ಜನ್ಯ ಎಸಗಿದ್ದರು ಎಂದು ದೂರುದಾರರು ಆರೋಪಿಸಿದ್ದಾರೆ.

ಮೊದಲು ಕೇರಳದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು ಆದರೆ ಇಲ್ಲಿನ ಪಂಚತಾರಾ ಹೋಟೆಲ್‌ನಲ್ಲಿ ಲೈಂಗಿಕ ದೌರ್ಜನ್ಯದ ಘಟನೆ ನಡೆದಿರುವ ಕಾರಣ ಪ್ರಕರಣವನ್ನು ಬೆಂಗಳೂರಿಗೆ ವರ್ಗಾಯಿಸಲಾಗಿದೆ ಮತ್ತು ಇದೀಗ ಎಫ್‌ಐಆರ್ ದಾಖಲಿಸಲಾಗಿದೆ" ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಘಟನೆ 2012 ರಲ್ಲಿ ನಡೆದಿದೆ ಎಂದು ಹೇಳಲಾಗುತ್ತದೆ ಆದರೆ ಮಲಯಾಳಂ ಚಲನಚಿತ್ರೋದ್ಯಮದ ಅನೇಕ ಕಲಾವಿದರಿಂದ ಲೈಂಗಿಕ ಕಿರುಕುಳದ ಆರೋಪಗಳ ಸರಣಿಯ ಹಿನ್ನೆಲೆಯಲ್ಲಿ ದೂರುದಾರ ಇದೀಗ ಹೊರಬಂದಿದ್ದಾರೆ, ಆರೋಪಗಳ ಸರಣಿ ಅವರಿಗೆ ದೂರು ದಾಖಲಿಸಲು ಧೈರ್ಯವನ್ನು ನೀಡಿದೆ ಎಂದು ಆರೋಪಿ ಹೇಳಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.



IN THE HIGH COURT OF KARNATAKA AT BENGALURU
Notice to the proposed LR of deceased R1 i.e., R1(h) Vide order dated: 14.10.2024
R.F.A.No.365 /2007

Devamma ....Appellants
(By Sriyuths: A. Madhusudhana Rao, Anusha A. & Naveen Kumar advs. for appellants)
V/s
M.C. Chikkanaika & Others ......Respondents
(By Sri. G. Balakrishna Shastry adv. for R1 (a to e)

To: Proposed LR, of deceased R1:
1.h) SMT.DEVAMMANI W/O SRI. MARI SWAMYNAIKA R/AT CHAMARAPURA VILLAGE, SARAGURU HOBLI, MULLUR POST, SARAGUR TALUK, MYSORE DISTRICT.

Appeal from the Judgment & Decree dated:27.11.2006 passed in OS.No. 104 /2000 on the file of the Civil Judge (Sr. Dn.), Hunsur. Notice is hereby given to you to appear in this court either in person or through Counsel duly instructed or through some one authorized by law, to act for you in the above appeal on 02.12.2024 in case you intend to contest the appeal. If you fail to appear, the same will be dealt with, heard and decided in your absence. Issued under my hand and the seal of this court, this the 14TH DAY OF OCTOBER 2024.

BY ORDER OF THE COURT :
ASSISTANT REGISTRAR.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು